ಶ್ರೀ ಶೇಷಾಚಲ ಗ್ರಂಥಮಾಲೆ, ಧಾರವಾಡ



# ಜೊಸೆಫ ಮ್ಯಾಝಿನಿ

ಮತ್ತು

# ಸ್ವಾತಂತ್ರ್ಯವೀರ ಸಾವರಕರ

(ಈ ಉಭಯ ಸ್ವಾತಂತ್ರ್ಯ ವಿಧಾತರ ಅಲ್ಪ ಪರಿಚಯ)

ಬಿ. ಪಿ. ಕಾಳೆ.

★

೧೯೪೯

ಒಂದು ರೂಪಾಯಿ

UNIVERSAL LIBRARY
OU_200077
UNIVERSAL LIBRARY

**OSMANIA UNIVERSITY LIBRARY**

Call No. K9232 K14J Accession No. K5899

Author [illegible]

Title [illegible]

This book should be returned on or before the date last marked below.

ಶ್ರೀ ಶೇಷಾಚಲ ಗ್ರಂಥಮಾಲೆ, ಧಾರವಾಡ.

# ಜೊಸೆಫ ಮ್ಯಾಝಿನಿ

ಮತ್ತು

# ಸ್ವಾತಂತ್ರ್ಯವೀರ ಸಾವರಕರ


(ಈ ಉಭಯ ಸ್ವಾತಂತ್ರ್ಯವಿಧಾತರ ಸ್ಥೂಲ ಪರಿಚಯ)

ಇದನ್ನು
ಬಿ. ಪಿ. ಕಾಳೆ ಇವರು
ಶ್ರೀ ಶೇಷಾಚಲ ಪ್ರೆಸ್ಸ,
ಮದಿಹಾಳ-ಧಾರವಾಡ
ಇಲ್ಲಿ ಮುದ್ರಿಸಿ ಪ್ರಕಟಿಸಿದರು.

ಜೂನ ೧೯೪೯

೧ ರೂ

ಶ್ರೀಮಾನ್ ಸ್ವಾತಂತ್ರ್ಯವೀರ



ಸಾವರಕರರು

# ಅರಿಕೆ.

ಈ ಜೋಸೆಫ ಮ್ಯಾಝಿನಿಯ ಸ್ವಲ್ಪ ಪರಿಚಯವನ್ನು ಸ್ವಾತಂತ್ರ್ಯವೀರ ಸಾವರಕರರು ಮರಾಠೀ ಭಾಷೆಯಲ್ಲಿ ೧೯೦೭ರಲ್ಲೇ ಬರೆದು ಪ್ರಕಟಿಸಿದ 'ಮ್ಯಾಝಿನಿ' ಪುಸ್ತಕದಿಂದ ವೀರ ಸಾವರಕರರ ಅನುಜ್ಞೆಯ ಮೇರೆಗೆ ಆಯ್ದು ಕನ್ನಡಕ್ಕೆ ಭಾಷಾಂತರಿಸಿರುತ್ತೇನೆ. ಇಡೀ ಮ್ಯಾಝಿನಿ ಪುಸ್ತಕವನ್ನೇ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಬೇಕೆಂಬ ಇಚ್ಛೆಯು ನನಗೆ ೧೯೧೦ರಿಂದಲೇ ಇತ್ತು; ಆದರೆ ಆಗ ಸಾವರಕರರಿಂದ ಭಾಷಾಂತರದ ಅಪ್ಪಣೆ ಪಡೆಯುವಂತಿರಲಿಲ್ಲ. ಅವರು ಅಂದಮಾನದ ಸೆರೆಮನೆಗೆ ಸಾಗಿಸಲ್ಪಟ್ಟಿದ್ದರು. ಅವರು ಇಲ್ಲಿಗೆ ಬಂದ ಮೇಲೆ ಅನೇಕ ಕಾರಣಗಳಿಂದ ಆ ಅನುಜ್ಞೆ ಪಡೆಯಲಾಗಲಿಲ್ಲ. ೧೯೩೭ರಲ್ಲಿ ಅನುಜ್ಞೆಯ ಬಗ್ಗೆ ಅವರನ್ನು ವಿಚಾರಿಸಲು ಇಟಲಿಯ ಸಮಗ್ರ ಐತಿಹಾಸಿಕ-ಭೌಗೋಲಿಕ ಮಾಹಿತಿಯುಳ್ಳ ವಾಚಕರಿಗೇ ಆ ಇಡೀ ಪುಸ್ತಕ ವಾಚನದಿಂದ ಅಲ್ಲಿಯ ಸಂದರ್ಭಗಳ ಮನವರಿಕೆಯಾಗಿ ಲಾಭವಾದೀತೇ ಹೊರತು, ಅವುಗಳನ್ನರಿಯದ ವಾಚಕರಿಗೆ ಅದೊಂದು ಬೇಸರದ ವಿಷಯವೇ ಆದೀತು; ಆದ್ದರಿಂದ ಇಡೀ ಪುಸ್ತಕವನ್ನು ಪರಿವರ್ತಿಸಿ, ಮುದ್ರಿಸಿ-ಪ್ರಕಟಿಸುವ ತೊಂದರೆ ವಹಿಸುವದು ಬೇಡ. ಆ ಪುಸ್ತಕದ ಪ್ರಸ್ತಾವನೆಯಲ್ಲೊಳಗೊಂಡ ಮ್ಯಾಝಿನಿಯ ವಿಷಯವನ್ನಷ್ಟು 'ಸ್ವಲ್ಪ ಪರಿಚಯ' ಬರೆದು ಪ್ರಕಟಿಸಬಹುದೆಂದು ಅನುಜ್ಞೆಯಿತ್ತರು. ಅದರಂತೆಯೇ ಇದನ್ನು ಬರೆದು ನಮ್ಮ ಕನ್ನಡ ವಾಚಕರ ಮುಂದಿರಿಸಲಾಗಿದೆ.

೧೯೪೮ರಲ್ಲೇ ಈ ಪುಸ್ತಕ ಪ್ರಕಟವಾಗಬೇಕಾಗಿತ್ತು; ಆದರೆ ಸ್ವಾತಂತ್ರ್ಯವೀರ ಸಾವರಕರರು ಮ. ಗಾಂಧೀವಧೆಯ ಅಭಿಯೋಗದಲ್ಲಿ ದೋಷಿಗಳೆಂದು ಆಕ್ಷಿಪ್ತರಾಗಿದ್ದರು. ಆ ದೋಷಾರೋಪದಿಂದ ಈಗ 'ನಿಷ್ಕಲಂಕ ಹಾಗು ನಿರ್ದೋಷಿ'ಗಳೆಂದು ಮುಕ್ತರಾಗಿರುವದರಿಂದ ಇಟಲಿಯ ಈ ಸ್ವಾತಂತ್ರ್ಯವಿಧಾತ ಜೋಸೆಫ ಮ್ಯಾಝಿನಿಯ ಸ್ವಲ್ಪ ಪರಿಚಯದೊಡನೆ ನಮ್ಮ ಹಿಂದುಸ್ಥಾನದ ಸ್ವಾತಂತ್ರ್ಯವಿಧಾತರಾದ ಬ್ಯಾರಿಸ್ಟರ ಸಾವರಕರರ ಸ್ವಲ್ಪ ಪರಿಚಯವನ್ನೂ ನಮ್ಮ ಕನ್ನಡ ವಾಚಕರಿಗೆ ಸಮರ್ಪಿಸಿರುವೆನು.

ಸಾವರಕರರ ಮ್ಯಾಝಿನೀ ಪುಸ್ತಕವನ್ನು ನಾನು ೧೯೦೮ರಲ್ಲೇ ಸಂಪಾದಿಸಿ, ಅದನ್ನು ಎಷ್ಟೋ ಸಾರೆ ಪಾರಾಯಣ ಮಾಡಿದ್ದೆನು; ಹಾಗು ಅದರೊಂದಿಗೆ ಆಗಿನ 'ಕಾಳ' ಪತ್ರ, 'ಕೇಸರಿ' ಪತ್ರಗಳ ವಾಚನವೂ ಬಹು ಸ್ಫೂರ್ತಿದಾಯಕವಾಗಿರುತ್ತಿತ್ತು. ಆ ಪುಸ್ತಕವು ನನ್ನ ಬಳಿಯಲ್ಲಿ ೧೯೧೧ರ ವರೆಗೂ ಇತ್ತು; ಆದರೆ ಆ ವರ್ಷ ಆನಂದವನದ 'ಶ್ರೀ ಶೇಷಾಚಲ ಪ್ರೆಸ್ಸಿ'ನ ಬಗ್ಗೆ ಪೋಲೀಸರಿಗೆ ಒಂದು ವಿಶಿಷ್ಟಬಗೆಯ ಸಂಶಯವುಂಟಾಯಿತು. ಆಗ ಧಾರವಾಡ ಜಿಲ್ಲೆಯಲ್ಲಿ ಸ್ವಲ್ಪೇ ಮುದ್ರಣಾಲಯಗಳಿದ್ದು, ಅವು ಧಾರವಾಡ, ಹುಬ್ಬಳ್ಳಿಗಳಂತಹ ನಗರಗಳಲ್ಲಿ ಮಾತ್ರ ಇರುತ್ತಿದ್ದವು. ಆಗಡಿ ಗ್ರಾಮದಿಂದ ಒಂದು ಮೈಲು ದೂರದ ಅಡವಿಯಲ್ಲಿ ಛಾಪಖಾನೆಯಿಡುವ ಉದ್ದೇಶವು ರಾಜದ್ರೋಹದ ಪತ್ರ-ಪುಸ್ತಕಗಳನ್ನೇ ಛಾಪಿಸುವದಾಗಿರಬೇಕೆಂದು ಪೋಲೀಸರು ಆಗಾಗ್ಗೆ ಆ ಪ್ರೆಸ್ಸಿಗೆ ತಸ್ತಿ ಕೊಡಹತ್ತಿದರು. ಆಗ ನನ್ನ ಆ ಮ್ಯಾಝಿನಿ ಪುಸ್ತಕವು ನನ್ನಲ್ಲೇ ಇದ್ದು, ನಾನು ಆ ಪ್ರೆಸ್ಸಿನ ಸ್ಥಳದಲ್ಲೇ ವಾಸಿಸುತ್ತಿದ್ದುದರಿಂದ ಪ್ರೆಸ್ಸಿನ ಆಗಿನ ಚಾಲಕರು ಅದನ್ನು ಒತ್ತಾಯದಿಂದ ನಾಶ ಮಾಡಿಬಿಟ್ಟರು! ಅದರಿಂದ ನನಗೆ ಬಹು ವಿಷಾದವೆನಿಸಿತು; ಆದರೆ ಆ ಪುಸ್ತಕವನ್ನು ಕನ್ನಡಕ್ಕೆ ಪರಿವರ್ತಿಸುವ ಸಂಕಲ್ಪವನ್ನಾದರೂ ನಾನು ಆಗಲೇ ಮಾಡಿದೆನು. ಆ ಇಡೀ ಪುಸ್ತಕದ ಅನುವಾದವನ್ನು ಕನ್ನಡಿಗರ ಮುಂದಿಡಲಾಗದಿದ್ದರೂ ಅದರ ಮುಖ್ಯ ಭಾಗವನ್ನು ಇಂದಿಗೆ ತಮ್ಮೆದುರು ಇಡುವ ಸುಯೋಗವು ಲಭಿಸಿದ್ದಕ್ಕಾಗಿ ನನಗೆ ಅತ್ಯಂತ ಸಂತೋಷವಾಗಿರುವದು. ಕನ್ನಡ ವಾಚಕರು ಈ ಮ್ಯಾಝಿನಿ ಹಾಗು ಸಾವರಕರರ ಸ್ವಲ್ಪ ಪರಿಯವನ್ನು ಓದಿ ನನ್ನ ಅಭಿಲಾಷೆಯನ್ನು ಪೂರ್ತಿಗೊಳಿಸುವರೆಂದು ನಂಬಿರುವ,

ಧಾರವಾಡ
೧೭-೬-೧೯೪೯

ಕನ್ನಡಿಗರ ಸೇವಕ
ಬಿ. ಪಿ. ಕಾಳೆ.

# ಮಾಝಿನಿಯ ಸಂಕ್ಷಿಪ್ತ ಆತ್ಮಚರಿತ್ರ

★

ನನ್ನ ರಾಜಕೀಯ ಮತ್ತು ವಾಙ್ಮಯಾತ್ಮಕ ಲೇಖಗಳನ್ನು ಬರೆಯಲು ಹಾಗು ಅವುಗಳೊಡನೆಯೇ ನನ್ನ ಆತ್ಮವೃತ್ತವನ್ನೀಯಲು ಯಾವಾಗ ಬಿನ್ನೈಸಲಾಯಿತೋ ಆಗ ನಾನದನ್ನು ನಿರಾಕರಿಸಿದ್ದೆನು; ಮತ್ತು ಈಗಲೂ ನಾನದನ್ನು ಬರೆಯಲು ಇಚ್ಛಿಸುವದಿಲ್ಲ. ನನ್ನ ಆಯುಷ್ಯ ಕೊಂಚ ಸುಖ ಹಾಗು ಅನಂತ ದುಃಖಗಳಿಂದ ಕೂಡಿದ್ದಾಗಿದೆ. ಅದರಿಂದ ನಾನು ಯಾರನ್ನು ಪ್ರೀತಿಸುವೆನೋ ಮತ್ತು ಯಾರು ನನ್ನನ್ನು ಪ್ರೀತಿಸುತ್ತಿರುವರೋ ಅಂಥ ವಿಶೇಷ ವ್ಯಕ್ತಿಗಳ ಹೊರತು ಬೇರೆಯವರಿಗೆ ಅದರಲ್ಲಿ ಮಹತ್ವದ್ದೇನೂ ದೊರಕಲಾರದು. ನನ್ನ ಆಯುಷ್ಯದ ಯಾವ ಅಲ್ಪಸಾರ್ವಜನಿಕ ಸ್ವರೂಪವಿರುವದೋ ಅದೆಲ್ಲ ನನ್ನ ಲೇಖನಗಳಲ್ಲಿ ಪ್ರತಿಬಿಂಬಿತವಾಗಿರುತ್ತದೆ; ಮತ್ತು ಆ ಲೇಖನಗಳು ಸಾಂಪ್ರತದ ಇತಿಹಾಸದ ಮೇಲೆ ಯಾವ ಪರಿಣಾಮದನ್ನುಂಟು ಮಾಡಿರುತ್ತವೆಂಬದನ್ನು ನಿರ್ಧರಿಸುವ ಕೆಲಸವು ನನ್ನದಲ್ಲ; ಅದು ಜನಸಮೂಹದ್ದೇ ಆಗಿದೆ. ಯಾವ ಒಣ ಬಡಬಡಿಕೆಗೆ ಜನರು ಕೀರ್ತಿ ಎಂದೆನ್ನುವರೋ ಅದರ ಬಗ್ಗೆ ನಾನು ನನ್ನ ನೈಸರ್ಗಿಕ ಪ್ರವೃತ್ತಿಯ ಮೂಲಕ ಉದಾಸೀನನಾಗಿರುವದರಿಂದಲೂ, ಸ್ವಭಾವಜನ್ಯ ಅಭಿಮಾನ ಹಾಗು ಶುದ್ಧ ಅಂತಃಕರಣ ಇವುಗಳ ಬಲದಿಂದ ನನ್ನ ಆಯು

ಸ್ಸಿಗೆ ಕಲಂಕ ಹಚ್ಚುವದಕ್ಕೆಂದು ಮಾಡಲ್ಪಟ್ಟ ನೂರಾರು ಆರೋಪಗಳನ್ನು ಮತ್ತು ಲೋಕನಿಂದೆಗಳನ್ನು ನಾನು ತಿರಸ್ಕರಿಸುವದರಿಂದಲೂ, ತನ್ನ ಶಕ್ತಿಯಿಂದ ಮತ್ತು ಕಾಲಸ್ಥಿತಿಯಿಂದ ಸ್ವಾಸ್ಥ್ಯವೆಂದು ಯಾವದು ನಿರ್ಧರಿಸಲ್ಪಡುವದೋ ಆ ಸಾಧ್ಯದಲ್ಲಿ ತನ್ನ ವ್ಯಕ್ತಿತ್ವವನ್ನು ಮರೆತುಬಿಡುವದೇ ಆ ಐಹಿಕ ಅಸ್ತಿತ್ವದೊಳಗಿನ ಮುಖ್ಯ ಕರ್ತವ್ಯವಿರುವದೆಂದು ನನ್ನ ದೃಢ ನಂಬಿಕೆ ಮತ್ತು ದೃಢನಿಷ್ಠೆಗಳಿರುವದರಿಂದ ನಾನು ನನ್ನ ಚರಿತ್ರದೊಳಗಿನ ದಿನಾಂಕ ಹಾಗು ಮುಖ್ಯ ಸಂಗತಿಗಳ ಟಿಪ್ಪಣಿಗಳನ್ನಿಟ್ಟಿಲ್ಲ; ಅಥವಾ ಪತ್ರಗಳ ಯಾದಿಯನ್ನೂ ಮಾಡಿರುವದಿಲ್ಲ.

ಒಂದು ವೇಳೆ ನಾನು ಆವೆಲ್ಲ ಟಿಪ್ಪಣಿಗಳನ್ನಿಟ್ಟಿದ್ದರೂ ಕೂಡ ಅವುಗಳನ್ನು ಉಪಯೋಗಿಸುವ ಧೈರ್ಯವು ಪ್ರಸ್ತುತ ಪ್ರಸಂಗದಲ್ಲಿ ನನ್ನಿಂದ ಆಗುತ್ತಿದ್ದಿಲ್ಲ. ಯಾವ ಜನರಿಗೆ ಕೇವಲ ಅವರ ಅಸ್ತಿತ್ವದೊಳಗಿನ ಪ್ರತಿಯೊಂದು ಮಹತ್ವದ ಭಾಗದಲ್ಲಿ ಇಡೀ ಯುರೋಪದ ಕ್ರಾಂತಿಯನ್ನುಂಟು ಮಾಡಲು ಪರಮಾತ್ಮನು ಅಧಿಕಾರವಿತ್ತಿರುವನೋ, ಆ ಜನರ ರಾಷ್ಟ್ರೀಯ ಪುನರ್ಜಾಗೃತಿಯಾಗುತ್ತಿರಲಿಕ್ಕೆ ಅವರೆದುರು ಪ್ರತಿಯೊಂದು ಆತ್ಮ ಚರಿತ್ರವು ತೀರ ಕ್ಷುಲ್ಲಕವೇ ಆಗಿರುತ್ತದೆ ಶ್ರೀ ಸೂರ್ಯನಾರಾಯಣನು ಉದಯಾಚಲದಿಂದ ಆಕಾಶದಲ್ಲೇರುತ್ತಿರುವಾಗ ಮೋಂಬತ್ತಿಯನ್ನು ಹಚ್ಚಹತ್ತುವದು ತೀರ ಹುಚ್ಚುತನವಲ್ಲವೇ?

ಆದರೂ ಕೂಡ ಈ ಲೇಖನಗಳಲ್ಲಿ ನಾನು ಕಂಡ ಸಂಗತಿಗಳ ವರ್ಣನೆ ಮತ್ತು ನನಗೆ ಗೊತ್ತಿದ್ದ ವ್ಯಕ್ತಿಗಳ ಸಂಗತಿ ಇವುಗಳನ್ನು ಯುರೋಪದೊಳಗಿನ ಕಳೆದ ಶತಮಾನದ ಕೊನೆಯ ಭಾಗದಲ್ಲಿಯ ಆಂದೋಲನವು ತಿಳಿಯಲು ಸುಲಭವಾಗಬೇಕೆಂದು ಆವಶ್ಯಕವಾದಷ್ಟನ್ನೇ ಕೊಡಲಿರುವೆನು; ಮತ್ತು ಅದರೊಡನೆಯೇ ಈ ಲೇಖನಗಳ ಕಾರಣ ಹಾಗು ಅವುಗಳ ಉದ್ದೇಶಗಳು ಚೆನ್ನಾಗಿ ವಿವರಣವಾಗುವದಕ್ಕೆಂದು ಆಗಾಮೀ ಕಾಲದಲ್ಲಿ ರಾಷ್ಟ್ರ

ಮತ್ತು ಜನತೆ ಈ ಮಹತ್ ತತ್ತ್ವಗಳ ವಿಜಯವಾಗುವ ಯಾವ ಪೂರ್ವ ಚಿಹ್ನಗಳು ಇರುವವೋ ಅಂಥ ಪ್ರಸಂಗಗಳ ಪ್ರಗತಿಗೂ ಉನ್ನತಿಗೂ ಅತ್ಯಂತ ಸಂಬಂಧವಿರುವ ಕೆಲವು ವ್ಯಕ್ತಿಗಳ ಮಾಹಿತಿಯನ್ನಷ್ಟೇ ಕೊಡಲಿರುವೆನು.

ಹಲಕೆಲವು ಸಮಯದಲ್ಲಿ ನನ್ನ ಮಾತೆಂದರೆ ಬಹುಜನ ಸಮಾಜದ ಅಭಿಪ್ರಾಯವೇ ಎಂದಾಗಿದೆ. ನನ್ನ ನುಡಿಯು ಭವಿಷ್ಯ ಕಾಲದಲ್ಲಿ ನಡೆಯಬಹುದಾದ ನಮ್ಮ ರಾಷ್ಟ್ರದ ತರುಣರ ಸಂಘಶಬ್ದವೇ ಆಗಿದೆ.

ನನ್ನ ಲೇಖನಕ್ಕೇನು ಬೆಲೆಯಿದೆಯೋ ಅದು ಐತಿಹಾಸಿಕ ಕಾಗದ-ಪತ್ರಗಳಿಂದೇ ಇರುವದು; ಮತ್ತು ಅದಕ್ಕಾಗಿಯೇ ಅದರ ಸತ್ಯಸಮರ್ಥನಕ್ಕಾಗಿಯೂ ಇಟಲಿಯ ನಿಜವಾದ ಅಂತರ್ವೃತ್ತಿಗೂ ಇರುವ ನಿಕಟೂಸಂಬಂಧವನ್ನು ಸಿದ್ಧಗೊಳಿಸಬೇಕೆಂದು ನಾನು ಹೇಳಿರುವ ಸಂಗತಿಗಳು ಇಂದಿಲ್ಲ ನಾಳೆಯಾದರೂ ಖಂಡಿತವಾಗಿ ಉಪಯೋಗವಾಗುವವು.

ಇಟಲಿಯ ಕೃತ್ಯಗಳ ಉಗಮ ಮತ್ತು ಅವುಗಳ ಸಾಹಿತ್ಯ ಇವುಗಳ ಶೋಧ ಮಾಡುವದರಿಂದ ನನ್ನ ದೇಶಬಂಧುಗಳಿಗೆ ಸದ್ಯದಲ್ಲುಂಟಾಗುವ ದೋಷಗಳು ಹಾಗು ಕುಂದು ಕೊರತೆಗಳು ಇವುಗಳ ಬಗ್ಗೆ ಸರಿಯಾದ ತಿಳುವಳಿಕೆಯು ಹೆಚ್ಚು ಸುಲಭವಾಗಿ ಆದೀತೆಂದು ನನಗನಿಸುತ್ತದೆ.

ಜೊಸೆಫ ಮ್ಯಾಝಿನಿ.

(೨)

ಮ್ಯಾಝಿನಿಯ ವ್ಯಕ್ತಿಗತ ಚರಿತ್ರವು ಬೇರೆ ಸಾಮಾನ್ಯ ರಾಷ್ಟ್ರೀಯ ಪುರುಷರಿಗಿಂತ ವಿಶೇಷ ಭಿನ್ನವಾಗಿಲ್ಲ. ಬಡತನದಲ್ಲಿ ಬೆಳೆದ ಈ ಪೋರನು ಹೊಟ್ಟೆಯ ಪಾಡಿಗಾಗಿ ಅಂಡಲೆಯುತ್ತಿರುವಾಗಲೇ ಈತನಿಗೆ ತನ್ನ ಮಾತೃ ಭೂಮಿಯು ಪರದಾಸ್ಯದಲ್ಲಿ ತೊಳಲುತ್ತಿರುವ ಭಯಾನಕ ದೃಶ್ಯವು ಕಂಡಿತು. ಅವನು ಅದನ್ನು ಹೇಗೆ ನಿವಾರಿಸಬೇಕೆಂದು ಪ್ರಯತ್ನಿಸ ಹತ್ತಿದಾಗಿನಿಂದಲೇ ಅವನ ರಾಜಕೀಯ ಆಯುಸ್ಸು ಪ್ರಾರಂಭವಾಯಿತು. ಆ ಆಯುಷ್ಯೆಂದರೇ ಆತನ ರಾಷ್ಟ್ರ ತತ್ವಗಳ ಪ್ರಸರಣವು. ಅವನು ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಪಟ್ಟ ಶ್ರಮ, ಭೋಗಿಸಿದ ಕಷ್ಟ-ನಷ್ಟ ಇವುಗಳ ವರ್ಣನೆಗಿಂತ ಆತನು ಅದೇ ಧ್ಯೇಯಕ್ಕಾಗಿ ತನ್ನ ಅನುಯಾಯಿಗಳಿಗೂ ದೇಶಬಾಂಧವರಿಗೂ ಸ್ವಂತ ಆಚರಿಸಿ-ಬೋಧಿಸಿದ ರಾಷ್ಟ್ರೀಯ ತತ್ತ್ವಗಳೇ ಅವನ ಚರಿತ್ರದ ಮುಖ್ಯ ಹಾಗು ಅನುಕರಣೀಯ ಅಂಗಗಳಾದುದರಿಂದ ಅವುಗಳನ್ನಷ್ಟೇ ಆತನ ಈ ಅಲ್ಪ ಪರಿಚಯದ ಚರಿತ್ರದಲ್ಲಿ ಕೊಟ್ಟಿರುತ್ತೇವೆ.

ದೇಶಭಕ್ತ ಮ್ಯಾಝಿನಿಯ ವ್ಯಕ್ತಿಗತ ಚರಿತ್ರವೂ, ಆತನ ರಾಷ್ಟ್ರೀಯ ತತ್ತ್ವಗಳೂ, ಇಟಲಿಯ ಆಗಿನ ಪರದಾಸ್ಯದ ಸ್ಥಿತಿಯೂ ನಮ್ಮ ಹಿಂದುಸ್ತಾನಕ್ಕೆ ಬಹುಮಟ್ಟಿಗೆ ಹೋಲುತ್ತಿರುವದರಿಂದ ಆತನ ಅಲ್ಪ ಪರಿಚಯವನ್ನು ನಮ್ಮ ವಾಚಕರಿಗೆ ಮಾಡಿಕೊಡುವ ಪ್ರಾಮುಖ್ಯವಾದ ಉದ್ದೇಶವೇ ಈ ಪುಟ್ಟಪುಸ್ತಕ ಪ್ರಕಟಣದ ಮೂಲವಾಗಿದೆ.

# ಇಟಲಿಯ ಸ್ವಾತಂತ್ರ್ಯ ವಿಧಾತನಾದ
# ಜೊಸೆಫ ಮ್ಯಾಝಿನಿ

★

(ಸ್ಫೂರ್ತಿದಾಯಕ ಲೇಖಗಳು.)

ಶಾಸ್ತ್ರಗಳ ಪ್ರಮೆಯುಗಳು ಕಾಲ-ದೇಶ ಮಾನಗಳಿಂದ ಮರ್ಯಾದಿತಗಳಾಗಿರುವದಿಲ್ಲ. ಭೂಮಿತಿಯ ಸಿದ್ಧಾಂತಗಳು ಗ್ರೀಸದಲ್ಲಿ ಎಷ್ಟು ನಿಜವಿರುವವೋ ಹಿಂದುಸ್ತಾನದಲ್ಲೂ ಅಷ್ಟೇ ಸತ್ಯವಿರುತ್ತವೆ; ಹಾಗು ಅವು ಯುಕ್ಲೀಡನ ಕಾಲಕ್ಕೆ ಎಷ್ಟು ಯಥಾರ್ಥವಾಗಿದ್ದವೋ ಇಂದಿಗೂ ಹಾಗೆಯೇ ಇರುತ್ತವೆ. ಮಾನವೀ ಜಾತಿಯ ವಿಸ್ತೃತ ಕ್ಷೇತ್ರವನ್ನೂ ಕಾಲದ ಅನಂತತೆಯನ್ನೂ ಈಕ್ಷಿಸಿ ಅವುಗಳ ಅನುರೋಧದಿಂದ ನಿರ್ಧರಿಸಲ್ಪಟ್ಟ ಯಾವ ಸಿದ್ಧಾಂತಗಳಿರುವವೋ ಅವು ಎಲ್ಲ ಸಮಯದಲ್ಲೂ ಮತ್ತು ಎಲ್ಲ ಮನುಷ್ಯರಿಗೂ ಸಮನಾಗಿಯೇ ಅನ್ವಯಿಸುತ್ತವೆ. ಇಂಥ ಸರ್ವಸಾಧಾರಣಗಳಾದ ಸಿದ್ಧಾಂತಗಳನ್ನು ಪಾಠಮಾಡುವದೂ ಮತ್ತು ಅವುಗಳನ್ನು ತಮ್ಮ ಸ್ವಂತದ ಉನ್ನತಿಗಾಗಿ ಉಪಯೋಗಿಸುವದೂ ಅತ್ಯಾವಶ್ಯಕವಾಗಿದೆ. ಪ್ರತಿಯೊಬ್ಬನು ಮುಂಚಿನ ಇತಿಹಾಸದ ಹಾಗು ಅನುಭವಗಳ ಲಾಭಮಾಡಿಕೊಳ್ಳದೆ, ಮನುಷ್ಯ ಜಾತಿಯು ಪ್ರಾರಂಭದಲ್ಲಿ ಮಾಡಿದ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡತೊಡಗಿದರೆ, ಮಾನವೀ ಉತ್ಕ್ರಾಂತಿಯು ಕಟ್ಟಾಯಿತೆಂದೇ ಅನ್ನಬೇಕಾದೀತು. ಮಾನವಜಾತಿಯು ಯಾವ ಪ್ರಶ್ನೆಗಳನ್ನು ಬಿಡಿಸಿಟ್ಟಿರುವುದೋ ಅವುಗಳನ್ನು ಮತ್ತೆ ಬಿಡಿಸಲೆತ್ನಿಸಲು ಸಮಯವನ್ನು ವ್ಯರ್ಥವಾಗಿ ಕಳೆಯುವದಕ್ಕಿಂತ ಆ ಪ್ರಶ್ನೆಗಳ ಕಾಲ-ದೇಶ ಮಾನಗಳಿಂದ ಅಮರ್ಯಾದಿತಗಳಾದ ಯಾವ ಉತ್ತರಗಳನ್ನು ಅನೇಕ ತತ್ತ್ವವೇತ್ತರು ಸಿದ್ಧಾಂತರೂಪದಿಂದ ಮಂಡಿಸಿಟ್ಟಿರುವರೋ ಅವುಗಳನ್ನು ತಿಳಿದುಕೊಳ್ಳಬೇಕು; ಮತ್ತು ಯಾವ ಪ್ರಶ್ನೆಗಳ ಉತ್ತರಗಳು ಮನುಷ್ಯಜಾತಿಗೆ ಇದುವರೆಗೂ ದೊರೆತಿಲ್ಲವೋ

ಆ ಪ್ರಶ್ನೆಗಳನ್ನು ಬಿಡಿಸುವ ಸಲುವಾಗಿ ಆ ವೇಳೆಯನ್ನು ವ್ಯಯಿಸುವದೇ ಶ್ರೇಯಸ್ಕರವಾಗಿದೆ

ಮಾನವ ಉತ್ಕ್ರಾಂತಿಯನ್ನು ಸುಲಭಗೊಳಿಸಲೋಸುಗ ತತ್ತ್ವವೇತ್ತರು ಇದುವರೆಗಿನ ಜಗತ್ತಿನ ಅನುಭವವನ್ನು ವ್ಯರ್ಥವಾಗಗೊಡದೆ, ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಸರ್ವವ್ಯಾಪಿಗಳಾದ ತತ್ತ್ವಗಳನ್ನು ಸಿದ್ಧಪಡಿಸಿರುತ್ತಾರೆ. ಜ್ಯೋತಿಷಶಾಸ್ತ್ರ, ಭೂಮಿತಿಶಾಸ್ತ್ರ, ರಸಾಯನಶಾಸ್ತ್ರವೇ ಮೊದಲಾದ ಶಾಸ್ತ್ರಗಳ ರೂಪಗಳು ಇಂದಿಗೆ ಹೇಗೆ ಕಾಣಿಸುತ್ತಿರುವವೋ ಅವು ಮನುಷ್ಯನ ಬೇರೆ ಬೇರೆ ಅನುಭವಗಳ ಮೇಲಿಂದ ಸರ್ವಸಾಮಾನ್ಯವಾಗಿ ನಿರ್ಧರಿಸಲಾದ ತತ್ತ್ವಗಳನ್ನು ಸಂಗ್ರಹಿತಗೊಳಿಸಿದ್ದರಿಂದಲೇ ಶಕ್ಯವಾಗಿರುತ್ತವೆ. ಆಯಾ ಶಾಸ್ತ್ರಗಳೊಳಗಿನ ಆ ಸರ್ವವ್ಯಾಪಿಗಳಾದ ತತ್ತ್ವಗಳು ಎಲ್ಲ ದೇಶಗಳಿಗೆ ಮತ್ತು ಎಲ್ಲ ಕಾಲದಲ್ಲಿ ಅನ್ವಯಿಸಲ್ಪಡುತ್ತಿರುವದರಿಂದ, ಅವುಗಳ ಲಾಭವನ್ನು ಪ್ರಯತ್ನಪೂರ್ವಕ ಮಾಡಿಕೊಳ್ಳದೆ, ಮತ್ತೆ 'ಒಂದಾ ಒಂದಲೆ ಒಂದು' ಎನ್ನುತ್ತ ಕೂಡ್ರುವದು ಮೂರ್ಖತನದ ಪರಮಾಧಿಯಾಗುವದು. ಈ ಸಂಗತಿಯು ಜ್ಯೋತಿಷ ಶಾಸ್ತ್ರ, ಭೂಮಿತಿಶಾಸ್ತ್ರ ಹಾಗು ರಸಾಯನ ಶಾಸ್ತ್ರಗಳಿಗೆ ಹೇಗೆ ಅನ್ವಯಿಸುವಿದೋ ಹಾಗೆಯೇ ಅದು ರಾಜಕಾರಣ ಶಾಸ್ತ್ರಕ್ಕೂ ಅನ್ವಯಿಸುತ್ತದೆ. ರಾಜಕಾರಣ ಶಾಸ್ತ್ರದ ಉತ್ಕ್ರಾಂತಿಯು ಮನುಷ್ಯರ ಪ್ರಗಮನದೊಡನೆಯೇ ಆಗುತ್ತ ಬಂದಿರುವದು. ರಾಜಕಾರಣ ಶಾಸ್ತ್ರದಲ್ಲಿಯೂ ಬೇರೆ ಶಾಸ್ತ್ರ ಸತ್ಯಗಳಂತೆಯೇ ಕೆಲವು ತತ್ತ್ವಗಳು ಕಾಲ-ದೇಶ-ಮಾನಗಳಿಂದ ಅಮರ್ಯಾದಿತಗಳಾದಂಥ ಮಹತ್ಸ್ವದ ಯೋಗ್ಯತೆಗೆ ತಲುಪಿರುತ್ತವೆ. ಆ ಸತ್ಯಗಳ ಜ್ಞಾನವಿರುವದು, ಮನುಷ್ಯಜಾತಿಯು ಇದುವರೆಗಿನ ಅನುಭವದ ಲಾಭವನ್ನು ಹೊಂದುವದು ಭೂತಕಾಲದ ಯಷ್ಟಿಯನ್ನು ಭವಿಷ್ಯನ್ಮಾರ್ಗಕ್ಕೆ ಆಧಾರ ತಕ್ಕೊಳ್ಳುವದು, ಮತ್ತು 'ಇತಿಹಾಸಪ್ರದೀಪೇನ ಮೋಹಾವರಣ ಘಾತಿನಾ, ಲೋಕಗರ್ಭ ಗೃಹಂ ಕೃತ್ಸ್ನಂ ಯಥಾವತ್' ಎಂಬಂತೆ ಸಂಪ್ರಕಾಶಿತಗೊಳಿಸಲಿಕ್ಕೆ ಸಿದ್ಧರಾಗುವದು ಅತ್ಯಂತ ಶ್ರೇಯಸ್ಕರವಾಗಿರುತ್ತದೆ. ಬೇರೆ ರಾಷ್ಟ್ರಗಳು ಹಲವು ಶತಕಗಳವರೆಗೆ ತೊಂದರೆ ವಹಿಸಿ ಹಾಗು ಎಷ್ಟೋ ದೇಹಗಳ ಬಲಿಗಳನ್ನರ್ಪಿಸಿ [illegible] ವ ಮಹತ್ ತತ್ತ್ವಗಳನ್ನು ಶೋಧಿಸಿರುವವೋ ಅವುಗಳ ಉಪಯೋಗ [illegible] ಡಿಕೊಳ್ಳದೆ, ಯಾವುದೊಂದು ದೇಶವು ಅಜ್ಞಾನದಲ್ಲಿ ತಿಳಿದೂ ತಿಳಿದು [illegible] ತ್ತೆ

ಮುಗ್ಗುತ್ತ ನಡೆದರೆ, ಆ ರಾಷ್ಟ್ರೀಯ ಅಜ್ಞಾನ-ಕುರುಡುತನ-ದ ಬಗ್ಗೆ ಅದಕ್ಕೆ
ಕೊನೆಗೆ ಭಯಂಕರ ಪಶ್ಚಾತ್ತಾಪವಾಗದಿರಲಾರದು. ಬೆಂಕಿ ಹತ್ತಿರುವಾಗ
ಅದರ ಮೇಲೆ ನೀರೆರೆಚಬೇಕೆಂಬ ಸರ್ವಮಾನ್ಯ ತತ್ವವನ್ನು ಬೇಕಂತ ಬಿಟ್ಟು
ಆ ಬೆಂಕಿಯ ಮೇಲೆ ತುಪ್ಪವನ್ನು ಸುರುವಿ ಅದು ನೊಂದುವದೋ ಇಲ್ಲವೋ
ಎಂಬದನ್ನು ನಿದಾನವಾಗಿ ಪ್ರಯತ್ನಿಸುವ ತಜ್ಞ ಮೂರ್ಖನಿಗೆ ಆ ಬೆಂಕಿಯು
ಕಿಚ್ಚಿನಲ್ಲಿ ಸಟ್ಟುಕೊಳ್ಳುವದಲ್ಲದೆ ಇನ್ನಾವ ಪಾರಿತೋಷಕ ದೊರೆಯಲಿದೆ!
ಇಂಥ ಸ್ಥಿತಿಯು ನನ್ನ ಪ್ರಿಯ ಆರ್ಯಭೂಮಿಯದಾಗಬಾರದೆಂದು ನಮ್ಮ
ತರುಣ ದೇಶಬಂಧುಗಳು ರಾಜಕಾರಣದೊಳಗಿನ ಅಂತಿಮ ಸತ್ಯಗಳನ್ನೂ
ಮಹತ್ತರಗಳಾದ ಸಿದ್ಧಾಂತಗಳನ್ನೂ ಕಲಿಯಬೇಕೆಂದು ನನ್ನ ಬಲವಾದ
ಅಪೇಕ್ಷೆಯುಂಟು ಆ ತತ್ತ್ವವನ್ನು ಕಲಿಯಲಿಕ್ಕೆ ಕಾದಕಾರಣಶಾಸ್ತ್ರದಲ್ಲಿ
ಯಾರು ಮುಖಂಡರಾಗಿರುವರೋ ಇಂಥ ತತ್ವವೇತ್ತರುಗಳಲ್ಲಿ ಮಹಾನು
ಭಾವನಾದ ಜೊಸೆಫ ಮ್ಯಾಝಿನಿಯ ಹೊರತು ತರುಣ ರಾಷ್ಟ್ರಭಕ್ತರಿಗೆ
ಉತ್ಸಾಹಕವೂ ದಿವ್ಯವೂ ಪ್ರೇಮಳವೂ ಉತಾತ್ತವೂ ಆದ ರಾಷ್ಟ್ರಮಂತ್ರದ
ದೀಕ್ಷೆಯನ್ನೀಯಲಿಕ್ಕೆ ಬೇರೆ ಯಾವ ಗುರುವು ದೊರೆಯುವನು?

‘ಇಲ್ಲಿಲ್ಲ; ರಾಷ್ಟ್ರಗಳೆಂದೂ ಸಾಯುವದಿಲ್ಲ. ಪರಮಾತ್ಮನು ಕ್ಲೇಶ
ಗೊಂಡವರ ಕೈವಾರಿಯಾಗಿರುತ್ತಾನೆ. ಆತನು ಮಾನವನನ್ನು ಸ್ವಾತಂತ್ರ್ಯ
ದಲ್ಲಿರುವದಕ್ಕೆಂದೇ ಹುಟ್ಟಿಸಿರುತ್ತಾನೆ. ನೀವು ಮನಸ್ಸು ಮಾಡಿದ ಕೂಡಲೆ
ನಿಮ್ಮ ದೇಹವು ಸ್ವತಂತ್ರವೇ.’ ಇದಕ್ಕಿಂತಲೂ ಹೆಚ್ಚು ಉತ್ಸಾಹಕವಾದ
ಬೇರೆ ಯಾವ ರಾಷ್ಟ್ರಮಂತ್ರವಿದೆ? ‘ಮನುಷ್ಯನು ಸ್ವಾತಂತ್ರ್ಯ, ಸ್ವದೇಶ
ಮತ್ತು ಮಾನವ್ಯ ಇವುಗಳಲ್ಲಿ ಭಕ್ತಿಮಾಡುವೆನೆಂದು ಒಮ್ಮೆ ನಿಶ್ಚಯಿಸಿದ
ನೆಂದರೆ ಆ ಮೇಲೆ ಆತನು ಸ್ವಾತಂತ್ರ್ಯದ ಸಲುವಾಗಿ, ದೇಶಕ್ಕೋಸುಗ
ಮತ್ತು ಮಾನವ್ಯಕ್ಕಾಗಿ ಕಾದಬೇಕು; ಅಖಂಡ ಕಾದಲೇಬೇಕು; ಇಡಿ
ಆಯುಷ್ಯದಲ್ಲಿ ಕಾದಬೇಕು; ಶಕ್ಯವಾದ ಎಲ್ಲ ಶಸ್ತ್ರಾಸ್ತ್ರಗಳಿಂದ ಕಾದಬೇಕು.
ತಿರಸ್ಕಾರ ನೊದಲ್ಗೊಂಡು ಮರಣ ಪರ್ಯಂತದ ಎಲ್ಲ ಸಂಕಟಗಳನ್ನೂ
ತುಚ್ಛಗಳೆಂದು ತಿಳಿಯಬೇಕು. ದ್ವೇಷ ಮತ್ತು ನಿಂದ್ಯಗಳಿಗೆ ಸನ್ಮುಖನಾಗ
ಬೇಕು. ಬೇರೆ ಯಾವ ಫಲಾಫಲಗಳ ಆಕಾಂಕ್ಷೆ ಧರಿಸದೆ, ಕೇವಲ ಕರ್ತವ್ಯ
ಕ್ಕೆಂದು ಆತನು ಸಿದ್ಧನಾಗಬೇಕು!’ ಇದಕ್ಕಿಂತ ಇನ್ನಾವ ದಿವ್ಯ ರಾಷ್ಟ್ರ
ಮಂತ್ರವಿದೆ?

'ಪ್ರೀತಿಸಿರಿ; ಯುವಕರೇ, ಪ್ರೀತಿಸಿರಿ. ಮನುಷ್ಯನನ್ನು ಪರಮಾತ್ಮನ ಕಡೆಗೊಯ್ಯಲು ಪ್ರೀತಿಯೇ ಮೆಟ್ಟಿಲಾಗಿದೆ. ಕುಟುಂಬವನ್ನು ಪ್ರೀತಿಸಿರಿ. ಸ್ವದೇಶವನ್ನು ಪ್ರೀತಿಸಿರಿ. ತರುಣರೇ, ಮನುಷ್ಯಜಾತಿಯನ್ನು ಪ್ರೀತಿಸಿರಿ' ಇದಕ್ಕಿಂತ ಪ್ರೇಮಲವಾದ ಇನ್ನಾವ ರಾಷ್ಟ್ರಮಂತ್ರವಿದೆ?

'ಬರಿಯ ಇಟಲಿಯು ಸ್ವತಂತ್ರವಾದರೇನು ಪ್ರಯೋಜನ? ನಾವು ಸ್ವತಂತ್ರರಾದೊಡನೆಯೇ ಬೇರೆಯವರನ್ನೂ ಸ್ವತಂತ್ರಗೊಳಿಸಬೇಕು?' ಇದಕ್ಕಿಂತಲೂ ಉದಾತ್ತವಾದ ಬೇರೆ ಯಾವ ರಾಷ್ಟ್ರಮಂತ್ರವಿರುತ್ತದೆ! ಇಂಥೀ ರಾಷ್ಟ್ರೀಯ ಮಂತ್ರಗಳ ಮಾಂತ್ರಿಕನಾದ ಇಟಲಿಯ ಸ್ವಾತಂತ್ರ್ಯವಿಧಾತ ದೇಶಭಕ್ತ ಜೋಸೆಫ ಮ್ಯಾಝಿನಿಯ ಆತ್ಮಚರಿತ್ರವೂ ಕೆಲವು ರಾಜಕೀಯ ಲೇಖಗಳೂ ಬಹು ಬೋಧಪ್ರದಗಳಾಗಿರುತ್ತವೆ. ಆ ಲೇಖನಗಳಿಂದ ಎರಡು ಕೋಟಿ ಜನರಲ್ಲಿ ನವಚೈತನ್ಯವುಂಟಾಯಿತು. ಆ ಲೇಖಗಳ ತೇಜವು ಗ್ಯಾರಿಬಾಲ್ಡಿಯ ಖಡ್ಗದ ಮೇಲೆ ಮಿನುಗುತ್ತಿತ್ತು. ಆ ಲೇಖಗಳು ಯುರೋಪದೊಳಗಿನ ರಾಜಸಿಂಹಾಸನಗಳನ್ನು ಅಲ್ಲಾಡಿಸಿಬಿಟ್ಟಿರುತ್ತವೆ. ಆ ಲೇಖಗಳಿಂದ ಇಟಲೀ ದೇಶವು ಸ್ವಾತಂತ್ರ್ಯವಾಗಿರುತ್ತದೆ; ಮತ್ತು ಎಲ್ಲ ಪರತಂತ್ರ ದೇಶಗಳಿಗೆ ಸ್ವಾತಂತ್ರ್ಯ ದೊರೆಕಿಸಿಕೊಡುವ ಸಾಮರ್ಥ್ಯವು ಆ ಲೇಖಗಳಲ್ಲಿ ತುಂಬಿಕೊಂಡಿರುತ್ತದೆ. ಮ್ಯಾಝಿನಿಯು ಆ ತತ್ತ್ವಗಳನ್ನು ಬರಿಯ ಇಟಲಿಗಾಗಿಯೇ ಹೇಳಿಲ್ಲ. ಇಟಲಿಯು ನೆವಮಾತ್ರಕ್ಕಿದ್ದು. ರಾಜಕಾರಣಶಾಸ್ತ್ರದೊಳಗಿನ ಈ ಮಹತ್ ತತ್ತ್ವಗಳನ್ನು ಆ ಮಹಾತ್ಮನು ಇಡಿ ಮಾನವ ಜಾತಿಗಾಗಿ ಪ್ರಕಟಪಡಿಸಿರುತ್ತಾನೆ. ಸ್ವಾತಂತ್ರ್ಯಸುಧೆಯ ಈ ಮಿಠಾಯಿಯು ಎಲ್ಲ ಸಂತಪ್ತ ಭೂಭಾಗದ ಕಡೆಗೂ ಒಲೆದಿರುತ್ತದೆ. ಅಪೇಕ್ಷಿತರು ಈ ಸಂಧಿಯನ್ನು ನಿರೀಕ್ಷಿಸಿ ತಮ್ಮ ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳಲಿಕ್ಕೆ ಪ್ರಯತ್ನಿಸಬೇಕು..

ನನ್ನಂಥ ಪಾಮರನು ಮ್ಯಾಝಿನಿಯ ಆ ಲೇಖಗಳ ಪ್ರಸ್ತಾವನೆಯನ್ನು ಇದಕ್ಕಿಂತ ಹೆಚ್ಚೇನು ಬರೆಯಲಿ?. ಆದರೂ ಆತನ ಲೇಖನಗಳು ಸಾರರೂಪವಾಗಿ ಬರೆಯಲ್ಪಟ್ಟಿರುವದರಿಂದ ಆತನ ಮತಗಳನ್ನು ಶೃಂಖಲಾಬದ್ಧವಾಗಿ ಮಾಡುವದು ತುಸ ಕಠಿಣವೇ ಆಗಿದೆ. ಅದಕ್ಕಾಗಿ ಆ ಮಹಾತ್ಮನ ರಾಜಕೀಯ ಮತಗಳ ದಿಗ್ದರ್ಶನವನ್ನು ಶಕ್ಯವಾದಷ್ಟು ಆತನ ವಾಕ್ಯಗಳಲ್ಲೇ ಪೋಣಿಸಿ ಸಂಕ್ಷಿಪ್ತ ಹಾಗು ಸಾರರೂಪದಿಂದ ಸಿದ್ಧಪಡಿಸಿದರೆ ಅವುಗಳನ್ನು

ತಿಳಕೊಳ್ಳಲಿಕ್ಕೆ ಸುಲಭವಾದೀತೆಂದು ಬಯಸಿ ನಾನು ಹಾಗೆ ಮಾಡುತ್ತಿರು ವೆನು.

ಲೋಕದಲ್ಲಿ ಇದುವರೆಗೆ ಎಷ್ಟು ರಾಜ್ಯಕ್ರಾಂತಿಗಳಾದವೊ ಅವೆಲ್ಲವು ಗಳಿಗಿಂತಲೂ ಇಟಲಿಯ ರಾಜ್ಯಕ್ರಾಂತಿಯಲ್ಲಿ ಉದಾತ್ತ ವೃತ್ತಿಯು ಶಿಖ ರಕ್ಕೆ ಮುಟ್ಟಿರುತ್ತದೆ. ಸ್ವದೇಶಾಭಿಮಾನದ ಜ್ಯೋತಿಯು ಹೆಚ್ಚಾಗಿ ಪ್ರಜ್ವ ಲಿತವಾಗಿದೆ. ಪ್ರತಿಯೊಬ್ಬ ದೇಶಭಕ್ತನು ವ್ಯಕ್ತಿವಿಷಯಕ ಸುಖದ ಬಗ್ಗೆ ಬಹಳೇ ಉದಾಸೀನನಾಗಿದ್ದನು. ಸ್ವದೇಶಕ್ಕಾಗಿ ಸರ್ವಸ್ವವನ್ನು ತ್ಯಜಿಸುವ ಪರಾಕಾಷ್ಠೆಯ ಮೇಲಾಟವು ನಡೆದಿತ್ತು. ಪರಕೀಯ ಸತ್ತೆಯಿಂದ ಆ ಚೈತನ್ಯವನ್ನು ಹಿಚುಕಿಬಿಡಲಿಕ್ಕೆಂದು ಅತಿ ಭಯಂಕರ ಒತ್ತಾಯವು ಮಾಡಲ್ಪಡುತ್ತಿತ್ತು. ಆ ಒತ್ತಾಯದಿಂದ ದೇಶಭಕ್ತರ ತಂಡಗಳು ಹಿಚು ಕಲ್ಪಡುತ್ತಿದ್ದರೂ, ಪ್ರತಿವರ್ಷ ಜನತಾಕ್ಷೋಭದ ಉಕ್ಕು ಬಹು ವಿಲಕ್ಷಣ ಹಾಗು ಎದೆಗಾರಿಕೆಯದಾಗುತ್ತಿತ್ತು; ಮತ್ತು ಕೊನೆಗೆ ಅರವತ್ತು ವರ್ಷಗಳ ವರೆಗೆ ಕಾದಿ ಕಾದಿ ಆ ದೇಶವೀರರು ಎಷ್ಟು ಜಿಗುಟತನದಿಂದ ಯಶ ದೊರೆಕಿ ಸಿದರೋ, ಆ ಎಲ್ಲ ಮಹತ್ಕೃತ್ಯಗಳಿಂದಲೂ ಮಹನೀಯ ನರರತ್ನಗಳಿಂ ದಲೂ ಅಲಂಕೃತವಾದ ಇನ್ನಾವ ರಾಜ್ಯಕ್ರಾಂತಿಯೂ ಇದುವರೆಗೂ ಆಗಿ ರುವದಿಲ್ಲೆಂದು ಇತಿಹಾಸವು ಒಪ್ಪಿಕೊಳ್ಳಬೇಕಾಗುವದು. ಇಟಲಿಯ ಆ ರಾಜ್ಯಕ್ರಾಂತಿಯಲ್ಲಿ ಸದ್ಗುಣಗಳ ಇಷ್ಟು ಉತ್ಕರ್ಷವಾಗಲಿಕ್ಕೆ ಮುಖ್ಯ ಕಾರಣವೇನಂದರೆ ಆ ರಾಜ್ಯಕ್ರಾಂತಿಯು ಯಾವುದೊಂದು ವ್ಯಕ್ತಿಗಾಗಿಇಲ್ಲವೆ ಲೋಭಕ್ಕಾಗಿ ಇಲ್ಲವೆ ದ್ವೇಷಕ್ಕಾಗಿ ಆಗಿರದೆ, ಅದರ ನೆಲೆಗಟ್ಟು ಅತ್ಯಂತ ಉನ್ನತವಾದಂಥ ಮಹತ್ ತತ್ತ್ವಗಳ ಮೇಲೆ ಕಟ್ಟಲ್ಪಟ್ಟಿತ್ತು. 'ದೊಡ್ಡ ದೊಡ್ಡ ಕ್ರಾಂತಿಗಳು ಖಡ್ಗಗಳಿಗಿಂತಲೂ ತತ್ವಗಳಿಂದಲೇ ಸಿದ್ಧ ಮಾಡಲ್ಪ ಟ್ಟಿರುತ್ತವೆ.' ಖಡ್ಗದ ಹೊರತು ತತ್ತ್ವಗಳ ಜಯವಾಗುವದಿಲ್ಲವೆಂಬದು ದುಃಖದ ಸಂಗತಿಯು; ಮತ್ತು ಅದಕ್ಕಾಗಿಯೇ ಇಟಲಿಯು ಕತ್ತಿಯನ್ನೆತ್ತಿತು; ಆದರೆ ಆ ಖಡ್ಗದ ತುದಿಯಲ್ಲಿ ಸತ್ಯದ ಅಧಿಷ್ಠಾನವಿರದಿದ್ದರೆ, ಅದನ್ನು ಅದು ಮುಟ್ಟುತ್ತಿದ್ದಿಲ್ಲ ಸಹ.' ಯಾವ ತತ್ವದ ಮೇಲೆ ಆ ಪವಿತ್ರ ಸ್ವಾತಂತ್ರ್ಯ ಯುದ್ಧವು ಹೂಡಲ್ಪಟ್ಟಿತೋ ಆ ತತ್ವಗಳನ್ನು ಮೊಟ್ಟ ಮೊದಲು ಮ್ಯಾಝಿ ನಿಯೇ ಇಟಲಿಗೆ ಕಲಿಸಿದನು. ಇಟಲಿಯ ಸಲುವಾಗಿ ಕಾದಿದ ದೇಶಭಕ್ತ

ರಲ್ಲಿ ಮ್ಯಾಝಿನಿಯ 'ತರುಣ ಇಟಲಿ'ಯಲ್ಲಿ ಯಾರು ಶಿಕ್ಷಣಪಡೆದಿರಲಿಲ್ಲವೊ ಅಂಥವರು ಅತ್ಯಲ್ಪ ಜನರಿದ್ದರು. ಆ ತತ್ತ್ವವಿಚಾರದಲ್ಲಿ ಮತ್ತು ಬೇರೆ ರಾಜಕಾರಣ ಕಾರಸ್ಥಾನಗಳ ಉಪದೇಶದಲ್ಲಿ ಒಂದು ಭೇದವಿರುತ್ತದೆ. ಮ್ಯಾಝಿನಿಯ ರಾಜಕಾರಣವು ಕೇವಲ ಐತಿಹಾಸಿಕವೂ ಸ್ವಾರ್ಥಮೂಲವೂ ಆಗಿರಲಿಲ್ಲ. ಅದು ಹಾಗಿದ್ದರೆ ಆ ರಾಜಕಾರಣದಿಂದ ಪ್ರವೃತ್ತರಾದಂಥ ದೇಶವೀರರ ಅಂತಃಕರಣಗಳಲ್ಲಿ ಅಷ್ಟು ಉದಾತ್ತವೃತ್ತಿಯು ಉಂಟಾಗುತ್ತಿರಲಿಲ್ಲ. ಮ್ಯಾಝಿನಿಯ ರಾಜಕಾರಣವು ಪ್ರವೃತ್ತಿ ಮತ್ತು ನಿವೃತ್ತಿಗಳ ಏಕೀಕರಣವಾಗಿರುತ್ತದೆ. ಆತನ ರಾಜಕಾರಣದ ಕಟ್ಟಡವು ನೀತಿಯ ನೆಲಗಟ್ಟಿನ ಮೇಲೆ ನಿಂತುಕೊಂಡಿತ್ತು. ಇದನ್ನು ಸಿದ್ಧಪಡಿಸಿದ್ದರಿಂದ ಅದುವರೆಗೆ ರಾಜಕಾರಣದ ಬಗ್ಗೆ ದೊಡ್ಡ ಜನರಿಂದ ಯಾವ ಅವಹೇಲನೆಯಾಗುತ್ತಿತ್ತೋ ಅದು ನಷ್ಟವಾಯಿತು. 'ರಾಜಕಾರಣವೆಂದರೆ ಸ್ವಾರ್ಥದ ಹಾಗು ಸ್ವಂತದ ಲಾಭ ಮಾಡಿಕೊಳ್ಳುವ ಶಾಸ್ತ್ರವಿರುತ್ತದೆ; ಹಾಗು ಇದರಲ್ಲಿ 'ಬಲಿಷ್ಠನೇ ಬಲ್ಲಿದ'ನೆಂಬ ಪಶುವೃತ್ತಿಯೇ ದೃಗ್ಗೋಚರವಾಗುತ್ತಿರುವದರಿಂದ ರಾಜಕಾರಣದ ಬಗ್ಗೆ ಸಾಧು-ಸತ್ಪುರುಷರಿಗೆ ತಿರಸ್ಕಾರವುಂಟಾಗುವದು ಸಹಜವಾಗಿತ್ತು. ಬೇರೆಯವರ ನಾಡನ್ನು ಆಕ್ರಮಿಸುವದು, ಅವರುಗಳ ಸ್ವಾತಂತ್ರ್ಯವನ್ನು ಹರಣ ಮಾಡುವದು ಇದೇ ಮುಖ್ಯವಾದ ರಾಜಕಾರಣವಾಗಿದ್ದರೆ, ಅದು ಇದುವರೆಗೆ ಬಹುತರ ಎಲ್ಲ ರಾಷ್ಟ್ರಗಳಿಂದಲೂ ಹಾಗೆಯೇ ಎಂದು ಮನ್ನಿಸುತ್ತಿರುವಾಗ ಆ ರಾಜಕಾರಣಕ್ಕೂ ನರಕಕ್ಕೂ ಭೇದವೆಲ್ಲಿದೆ? ಮ್ಯಾಝಿನಿಯು ರಾಜಕಾರಣಕ್ಕೆ ಆ ನರಕಗಾಮಿ ಕಲ್ಪನೆಯಿಂದ ಮುಕ್ತಪಡಿಸಿದನು. ರಾಜಕಾರಣವು ಪರಮಾತ್ಮನ ಕರ್ತವ್ಯವಾಗಿದೆಯೆಂಬದನ್ನು ಆತನು ಸ್ಪಷ್ಟವಾಗಿ ಸಿದ್ಧಪಡಿಸಿರುತ್ತಾನೆ. ಪ್ರವೃತ್ತಿ ಹಾಗು ನಿವೃತ್ತಿ ಇವೆರಡೂ ಪರಸ್ಪರ ವಿರೋಧಿಗಳಾದ ತತ್ತ್ವಗಳಿರದೆ, ಅವು ಒಂದೇ ಮಾರ್ಗದ ಎರಡು ಭಿನ್ನ ಭಾಗಗಳ ನಾಮಗಳಾಗಿರುತ್ತವೆಂದು ಆತನು ಪ್ರತಿಪಾದಿಸಿರುತ್ತಾನೆ. 'ಸ್ವರ್ಗ ಮತ್ತು ಪೃಥ್ವೀ ಇವುಗಳಲ್ಲಿ ವಿರೋಧವಿದೆ; ಇಲ್ಲವೆ ಅವು ಭಿನ್ನವಿರುತ್ತವೆಂಬದು ನಿಜವಲ್ಲ. ಸ್ವರ್ಗದಲ್ಲಿ ಸತ್ಯ ಹಾಗು ನ್ಯಾಯದ ಈಶ್ವರೀ ರಾಜ್ಯವಿರಬೇಕು; ಮತ್ತು ಪೃಥ್ವಿಯ ಮೇಲೆ ಅಸತ್ಯ ಹಾಗು ಅನ್ಯಾಯ ಇವುಗಳ ಆವಳಿ ಇರಬೇಕೆಂಬದು ನಿಜವಲ್ಲ. ಪೃಥ್ವಿಯು ಸ್ವರ್ಗದ ಸೋಪಾನವಾಗಿ

ರುತ್ತದೆ ' ರಾಜಕಾರಣಕ್ಕೆ ಸ್ವಾರ್ಥಪರಾಯಣತೆಯು ಹೇಸಿ ರೂಪ ಕೊಡುವ
ಜನರ ತಪ್ಪನ್ನು ಈ ರೀತಿಯಾಗಿ ಬೈಲಿಗೆಳೆದು, ನಂತರ ವ್ಯಾಖ್ಯಾನಿಯು
ಅತಿರಿಕ್ತ ಧರ್ಮಾಭಿಮಾನಿಗಳ ಸಮಾಚಾರ ತಕ್ಕೊಂಡಿರುತ್ತಾನೆ.

ಧರ್ಮವು ರಾಜಕಾರಣದಲ್ಲಿ ತಲೆ ಹಾಕುವದು ಅವಶ್ಯವಿದೆಯಷ್ಟೇ
ಅಲ್ಲ, ಅದು ಅದರ ಕರ್ತವ್ಯವೇ ಆಗಿರುತ್ತದೆ ರಾಜಕಾರಣವೆಂದರೆ, ಸಮಾ
ಜದ, ಸ್ವದೇಶದ ಹಾಗು ಸ್ವರಾಷ್ಟ್ರದ ದಾಸ್ಯವಿಮೋಚನೆಯೂ ಸಂವರ್ಧನವೂ
ಆಗಿದೆ. ಅತ್ತ ಕಡೆಗೆ ದುರ್ಲಕ್ಷ್ಯಮಾಡುವದೆಂದರೆ, ಮನುಷ್ಯ ಜಾತಿಗುಂಟಾ
ಗಿರುವ ಭಯಂಕರ ಸಂಕಟವನ್ನು ತೆರೆಗಣ್ಣಿನಿಂದ ನೋಡುತ್ತಿರುವ ಅಕ್ಷಮ್ಯ
ಪಾಪಮಾಡುವದೇ ಸರಿ. ಧರ್ಮದ ನಿಜವಾದ ವ್ಯಾಖ್ಯೆಯೆಂದರೆ ಮನುಷ್ಯ
ಮಾತ್ರರನ್ನು ಧಾರಣ ಮಾಡುವದು; ಎಂದರೆ ಮನುಷ್ಯ ಮಾತ್ರರು ದಾಸ್ಯ
ಪಂಕದಲ್ಲಿ ಇಲ್ಲವೆ ಅನೀತಿಯಲ್ಲಿ ಕೊಳೆಯುತ್ತಿರುವಾಗ ನಾವು ನಮ್ಮನ್ನಷ್ಟೇ
ಮುಕ್ತಗೊಳಿಸಿಕೊಳ್ಳಬೇಕೆಂಬ ತಿಳುವಳಿಕೆಯು ಬಿಂಕದ್ದಾಗಿದೆ ಭೂತದಯೆ
ಯ ಹೊರತು ಸ್ವಂತದ ಮುಕ್ತಿಗೆ ಅನ್ಯ ಮಾರ್ಗವಿಲ್ಲ. 'ಪರಲೋಕದಲ್ಲಿ
ನಿಮ್ಮ ವಿಚಾರಣೆ ನಡೆದಾಗ ಪರಮೇಶ್ವರನು ನಿಮಗೆ ನೀವು ನಿಮ್ಮ ಸ್ವಂತದ
ಕಲ್ಯಾಣಕ್ಕಾಗಿ ಏನೇನು ಮಾಡಿರುತ್ತೀರಿ?' ಎಂದು ಎಂದಿಗೂ ಕೇಳಲಿಕ್ಕಿಲ್ಲ.
ಆತನು ನಿಮ್ಮನ್ನು ಕುರಿತು 'ನೀವು ಭೂತಮಾತ್ರರ ಕಲ್ಯಾಣದ ಸಲುವಾಗಿ
ಏನೇನು ಮಾಡಿರುತ್ತೀರಿ? ನಾನು ಯಾವ ಸ್ವದೇಶಬಂಧುಗಳನ್ನು ನಿಮ್ಮ
ಬದಿಯಲ್ಲಿರಿಸಿರುವೆನೋ ಅವರ ಕಲ್ಯಾಣಕ್ಕೆಂದು ಏನೇನು ಮಾಡಿರುತ್ತೀರಿ?'
ಎಂಬುದನ್ನೇ ಕೇಳುವನು. ಭೂತಮಾತ್ರರ ಅಂತಿಮ ಕಲ್ಯಾಣ ಮಾಡುವದ
ಕ್ಕಾಗಿ, ಜ್ಞಾನದಿಂದ ಹಾಗು ಪಾವಿತ್ರ್ಯದಿಂದ ಅವರುಗಳ ಆತ್ಮೋನ್ನತಿ
ಯಾಗುವದಕ್ಕಾಗಿ ಮತ್ತು ಅವರುಗಳಲ್ಲಿ ಸತ್ಕೃತ್ಯವೆಸಗುವ ಸಾಮರ್ಥ್ಯ
ವ್ಯಯವಾಗುವ ಸಲುವಾಗಿ ಮೊಟ್ಟಮೊದಲ ಹಾಗು ಅತ್ಯಂತ ಆವಶ್ಯಕವಾದ
ಸಂಗತಿಯೆಂದರೆ, ಅವರುಗಳ ದಾಸ್ಯವಿಮೋಚನ ಮಾಡುವದು. ಅವರುಗಳಿಗೆ
ಸ್ವಾತಂತ್ರ್ಯ ದೊರಕಿಸಿ ಕೊಡುವದು ಎಂಬುವೇ ಆಗಿದೆ. ಒಬ್ಬ ವ್ಯಕ್ತಿ
ಯನ್ನು ಎಲ್ಲಿಯವರೆಗೆ ಸೆರೆಮನೆಯಲ್ಲಿ ಕೊಳೆಯಹಾಕಲಾಗಿದೆಯೋ ಅಲ್ಲಿಯ
ವರೆಗೆ ಆ ವ್ಯಕ್ತಿಯಿಂದ ಸತ್ಕೃತ್ಯ ಘಟಿಸುವದು ಮತ್ತು ಪ್ರಗಮನವಾಗು
ವದು ಎಷ್ಟು ಅಶಕ್ಯವಾಗಿದೆಯೋ ಅಷ್ಟೇ ಅಶಕ್ಯವು ಎಲ್ಲಿಯವರೆಗೆ ಯಾವು

ದೊಂದು ದೇಶವು ರಾಜಕೀಯ ಪಾರತಂತ್ರ್ಯದಲ್ಲಿ ಮುಳುಗಿಬಿಟ್ಟಿದೆಯೋ ಅಲ್ಲಿಯವರೆಗೂ ಅದರಿಂದ ಮಾನವೀ ಪ್ರಗಮನಕ್ಕೆ ಸಹಾಯವಾಗುವದು. ಅಶಕ್ಯವೇ ಸರಿ. ಇಂಥ ಸ್ಥಿತಿಯಲ್ಲಿ ನಾವೆಲ್ಲರೂ ಪರಸ್ಪರರ ಮುಕ್ತತೆಯ ಬಗ್ಗೆ ಹೊಣೆಗಾರರಿರುತ್ತೇವೆ. ನಾವು ನಮ್ಮ ಬೇರೆ ಮಾನವೀ ಬಂಧುಗಳನ್ನು ಪರವಶತೆಯಲ್ಲೂ ಅಜ್ಞಾನದಲ್ಲೂ ಹಾಗೆಯೇ ಕೊಳೆಯಗೊಟ್ಟರೆ, ನಾವು ಪರಮಾತ್ಮನಿಗೆ ದ್ರೋಹವೆಸಗಿದ ಮಹತ್ಪಾಪವು ನಮಗೆ ಬಡಕೊಂಡೀತು. ಸ್ವಂತದ ಉನ್ನತಿ ಮತ್ತು ಮುಕ್ತತೆ ಮಾಡಿಕೊಳ್ಳುವ ಒಂದೇ ಒಂದಾದ ದಾರಿ ಇದೆ; ಮತ್ತು ಅದೆಂದರೆ ಎಲ್ಲರಿಗೂ ಮುಕ್ತಿದೊರೆಯುವಂತೆ ಪ್ರಯತ್ನಿಸುವದೇ ಆಗಿದೆ.'

ನಾವು ಯಾವ ದೇಶದಲ್ಲಿ ಹುಟ್ಟಿರುವೆವೋ, ಯಾವ ದೇಶದ ಅನ್ನವನ್ನುಣ್ಣುತ್ತಿರುವೆವೋ ಅದರ ಸಾಲ ತೀರಿಸದ ಹೊರತು ನಮಗೆ ಸ್ವರ್ಗದ ಕದಗಳು ತೆರೆಯಲಾರವೆಂಬದು ವ್ಯಕ್ತಿವಿಷಯಕ ಮೋಕ್ಷಕ್ಕಾಗಿ ತೊಳಲಾಡುವ ಯಾವನೊಬ್ಬ ಬಿಡಾಡಿ ಸಾಧುವಿಗೂ ಭ್ರಮಿಷ್ಠ ಮತ್ತು ದುರಭಿಮಾನಿಯಾದ ಧರ್ಮಾಭಿಮಾನಿಗೂ ತಿಳಿಯಲಿಕ್ಕೆ ಬೇಕು.

'ಭೂತಗಳ ದಯೆಯೆಂಬುದೇ ಸಂತರ ಬಂಡವಾಳ,
ತನ್ನದೆಂಬ ಮಮತೆಯು ಸಂತರ ದೇಹದಲ್ಲಿರಬಾರದು;
ಪರರ ಸುಖವೇ ತನ್ನ ಸುಖವೆಂದು ತಿಳಿಯುವ ಸಂತನಿಗೆ
ಅಮೃತವೇ ಮುಖದಲ್ಲಿ ಸ್ರವಿಸುತ್ತಿರುತ್ತದೆ'ಂದು ಸಂತತುಕಾರಾಮ

ಸಾಧುಗಳು ತಮ್ಮ ಅಮೂಲ್ಯವಾದ ಅಭಂಗಗಳಲ್ಲಿ ಹೇಳಿರುತ್ತಾರೆ. ಇದೇ ನಿಜವಾದ ಧರ್ಮರಹಸ್ಯವು. ಅಂತೆಯೇ ಧರ್ಮಾಭಿಮಾನಿಗಳಿಗೂ ಧರ್ಮೋಪದೇಶಕರಿಗೂ ಮ್ಯಾಝಿನಿಯು ಕೇಳುತ್ತಿರುವದೇನಂದರೆ 'ಎಲೈ ಪೂಜ್ಯ ಧರ್ಮಾಧಿಕಾರಿಗಳೇ, ಮತ್ತು ಧರ್ಮೋಪದೇಶಕರೇ, ನಿಮ್ಮಗಳ ಜನ್ಮವಾದರೂ ಇದೇ ನಾಡಿನಲ್ಲಾಗಿಲ್ಲವೇನು? ನಿಮ್ಮನ್ನಾದರೂ ಇದೇ ನಾಡು ಪೋಷಿಸಿರುವದಿಲ್ಲವೆ? ಈ ನಾಡಿನ ಅನ್ನದಿಂದಲೇ ನೀವು ಬೆಳೆದಿರುವಿರಲ್ಲವೆ? ಅಂಥ ಜನ್ಮಭೂಮಿಯು ಪರದಾಸ್ಯದಿಂದ ಜಿಬ್ಬಿಯಾಗುತ್ತಿರಲು, ಸ್ವಸ್ಥವಾಗಿ ಕುಳಿತಿದ್ದ ನೀವು ಸ್ವರ್ಗವನ್ನೆಂತು ಏರುವಿರಿ? ನಿಮಗೆ ದೇಶವಿರುವದಿಲ್ಲೇನು? ನಿಮ್ಮಲ್ಲಿ ಭೂತದಯೆಯಿರುವದಿಲ್ಲೇನು? ನಿಮ್ಮ ಕೃತಘ್ನತೆಯಿಂದ ನೀವು

ಪಾಪಿಗಳೆಂದು ನೀವು ನಿರ್ಧರಿಸಲ್ಪಡುತ್ತಿರುವಿರಿ. ಈಗ ಧರ್ಮವು ನಿಮ್ಮ ಛಾವಣಿಯಲ್ಲಿರದೆ ನಮ್ಮ ಛಾವಣಿಗೆ ಬಂದಿರುತ್ತದೆ. ಸ್ವಾತಂತ್ರ್ಯವು ಬೈಬಲ್ಲಿನಲ್ಲಿ ಪವಿತ್ರವೆಂದು ಮನ್ನಿಸಲ್ಪಟ್ಟಿಲ್ಲವೇ? ಮತ್ತು ನಮ್ಮ ದೇಶವು ಪರತಂತ್ರದಿಂದ ಅಪವಿತ್ರವಾಗಿಲ್ಲೇನು? ಆದುದರಿಂದ ಎಲ್ಲೆಡೆಯಲ್ಲೂ ಸ್ವಾತಂತ್ರ್ಯವು ನೆಲಸಬೇಕು, ಮಾನವನಲ್ಲಿಯ ಭೇದಭಾವವು ನಷ್ಟವಾಗಬೇಕು, ಧರ್ಮದ ಬಗ್ಗೆ ನಿಜವಾದ ಜಯಜಯಕಾರವಾಗಬೇಕು ಹೀಗೆ ನಿಮ್ಮಗಳ ಸತ್ಯವಾದ ಇಚ್ಛೆಯಿದ್ದರೆ ನೀವು ನಮ್ಮಗಳನ್ನು ಸೇರಿರಿ' ಈ ಬಗೆಯಾಗಿ ಧರ್ಮವೆಂಬುದು ರಾಜಕಾರಣಕ್ಕೆ ವಿರೋಧವಾಗಿಲ್ಲೆಂಬದನ್ನು ಮ್ಯಾಝಿನಿಯು ತನ್ನ ಅಧಿಕಾರಯುಕ್ತ ವಾಣಿಯಿಂದ ಪ್ರತಿಪಾದಿಸಿರುತ್ತಾನೆ.

ಸ್ವತಃ ಆತನೇ ಒಂದೆಡೆಯಲ್ಲಿ 'ನಾವು ರಾಜಕಾರಣವನ್ನು ಧರ್ಮದ ಉಚ್ಚತೆಯ ವರೆಗೆ ಒಯ್ದೆವು.' ಎಂದು ಹೇಳಿರುತ್ತಾನೆ. ಯಾವ ರಾಜಕಾರಣ ಪಟುಗಳು ಧರ್ಮವನ್ನು ಹಾಗು ನೀತಿಯನ್ನು ಧಿಃಕರಿಸಿ, ರಾಜಕಾರಣಕ್ಕೆ ಧರ್ಮವಿಲ್ಲೆಂದು ಅನ್ನುತ್ತಿದ್ದರೋ ಮತ್ತು ಯಾವ ಧರ್ಮಮಾರ್ತಂಡರು ರಾಜಕೀಯ ಸ್ಥಿತಿಗತಿಗಳ ಕಡೆಗೆ ದುರ್ಲಕ್ಷಿಸಿ, ಧರ್ಮಕ್ಕೆ ರಾಜಕಾರಣವಿಲ್ಲೆಂದು ಸಾರುತ್ತಿದ್ದರೋ ಆ ಎರಡೂ ಪಕ್ಷಗಳ ಅಪರಾಧ ಹಾಗು ದೋಷಗಳನ್ನು ಬೈಲಿಗೆಳೆದು 'ಆಯುಷ್ಯದಲ್ಲಿ ಭಿನ್ನತೆಯಿಲ್ಲ; ಆಯುಷ್ಯವು ಏಕರೂಪವಾಗಿದೆ. ಪರಮೇಶ್ವರನ ಆಜ್ಞೆಯು ಪರಸ್ಪರ ವಿರೋಧವಾಗಿಲ್ಲ. ಅದು ಒಂದೇ ಆಗಿದೆ; ಮತ್ತು ಸಮಸ್ತರಿಗೂ ಅನ್ವಯಿಸುತ್ತದೆ.' ಎಂಬ ಪವಿತ್ರ ಮತ್ತು ಉದಾತ್ತ ತತ್ವದ ಉಚ್ಚಾರವನ್ನು ಮ್ಯಾಝಿನಿಯೇ ಮಾಡಿದವನು. ರಾಜ್ಯಕ್ರಾಂತಿಕಾರಕ ಮುಖಂಡರಲ್ಲಿ ನೀತಿ ಹಾಗು ಧರ್ಮ ಇವುಗಳ ಪಾವಿತ್ರ್ಯದೊಳಗಿಂದ ಯಾರಿಗೆ ರಾಜಕ್ರಾಂತಿಯ ಸ್ಫೂರ್ತಿಯುಂಟಾಗಿರುವದೋ ಅಂಥವರು ಮಹಾತ್ಮಾ ಮ್ಯಾಝಿನಿಯ ಹೊರತು ಅನ್ಯರು ದೊರಕುವದು ಯುರೋಪದ ಇತಿಹಾಸದಲ್ಲಿ ದುರ್ಲಭವು. ಮ್ಯಾಝಿನಿಯ ವಿಶಿಷ್ಟ ಕರ್ತವ್ಯವೇ ಇದಾಗಿದೆ. ಆತನ ಮತ್ತು ಆತನ ಉಪದೇಶದಿಂದ ಪ್ರವೃತ್ತರಾದಂಥ ತತ್ಕಾಲೀನ ಇಟಾಲಿಯನ್ ದೇಶವೀರರ ಆಯುಷ್ಯದಲ್ಲಿ ಯಾವ ಉದಾಸತನವೂ ಯಾವ ಪಾವನತ್ವವೂ ಕಂಡು ಬರುವದೋ ಅದೆಲ್ಲವೂ ಮೇಲೆ ಹೇಳಿದ ಮ್ಯಾಝಿನಿಯ ನೀತಿ ತತ್ವಗಳ ಫಲವಾಗಿರುತ್ತದೆ.

ಸ್ವಾರ್ಥಕ್ಕೆಂದಲ್ಲವಾದರೂ ಪರಮೇಶ್ವರೀ ಕರ್ತೃತ್ವವೆಂದು ಸ್ವದೇಶವನ್ನು ಸ್ವತಂತ್ರಗೊಳಿಸಲಿಕ್ಕೆ ಯಾವ ದೇಶವೀರರು ಸಿದ್ಧರಾಗುವರೋ ಅವರ ಖಡ್ಗಗಳೆದುರಿಗೆ ಆಸ್ಟ್ರಿಯಾ ದೇಶವಷ್ಟೇ ಏಕೆ, ಗರ್ವದಿಂದ ಮದಾಂಧ ವಾದ ಬೇಕಾದಂಥ ಬಲಿಷ್ಠ ದೇಶವಾದರೂ ಗದಗದನೆ ನಡುಗಹತ್ತೀತು. ಎಲ್ಲ ಜನರ ಮನಸ್ಸುಗಳು ರಾಜಕಾರಣ ಹಾಗು ಧರ್ಮ ಇವುಗಳು ಏಕರೂಪಗಳಾಗಿರುತ್ತವೆಂಬ ಶ್ರೇಷ್ಠ ನಿಷ್ಠೆಯಿಂದ ಉದ್ಯುಕ್ತಗಳಾದರೆ ಈ ಲೋಕದಲ್ಲಿ ಪರತಂತ್ರದ ಹೆಸರು ಕೂಡ ಉಳಿಯಲಾರದು. 'ರಾಜಕಾರಣಕ್ಕೆ ಧರ್ಮವಿದೆ; ಮತ್ತು ಧರ್ಮಕ್ಕೆ ರಾಜಕಾರಣವಿರುತ್ತದೆ.' ಎಂಬ ಈ ಮಹತ್ ತತ್ತ್ವವು ಕಾಲ-ದೇಶಾಬಾಧಿತ ಸತ್ಯವು. ಈ ಪರಮೇಶ್ವರೀ ತತ್ವವನ್ನು ಅರಿತು 'ನನ್ನ ಪ್ರಿಯ ಮಾತೃಭೂಮಿಯ ಎರಡು ಕೋಟಿ ಜನರು 'ಇನ್ನು ಸ್ವಾತಂತ್ರ್ಯವನ್ನು ದೊರೆಕಿಸುವದೇ' ಎಂದಂದು ಎದ್ದರೆ, ಬರೀ ಆಸ್ಟ್ರಿಯದೇ ಏಕೆ ಅಂಥ ಮೂರು ನಾಲ್ಕು ಆಸ್ಟ್ರಿಯಾಗಳು ಒಟ್ಟುಗೂಡಿದರೂ ಇವರು ಅವರೆಲ್ಲರ ಉಚ್ಛೇದ ಮಾಡಿ ತಮ್ಮ ಸ್ವಾತಂತ್ರ್ಯವನ್ನು ದೊರಕಿಸದಿರರು'' ಆ ಎರಡು ಕೋಟಿ ಇಟಾಲಿಯನ್ನರ ಮೇಲೆಯೋ ಆ ಮಹಾತ್ಮನ ಭರವಸೆಯೆಷ್ಟು? ಒಂದು ವೇಳೆ ಆತನ ದೇಶದ ಜನಸಂಖ್ಯೆಯು ಅವಕ್ಕಿಂತ ಹತ್ತುಹದಿನೈದು ಪಟ್ಟು ಹೆಚ್ಚಾಗಿದ್ದರೆ ಹಾಗು ಆತನ ವೈರಿಯು ಆಸ್ಟ್ರಿಯದಷ್ಟೇ ಆಗಿದ್ದರೆ ಆತನು ಸ್ವದೇಶ ಸ್ವಾತಂತ್ರ್ಯ ದೊರಕಿಸಲಿಕ್ಕೆ ಒಂದು ಕ್ಷಣ ಕೂಡ ಹತ್ತ ಗೊಡುತ್ತಿರಲಿಲ್ಲ! ವೀರರ ಮಾತೇ ಹೀಗಿದೆ.

ಧರ್ಮ ಮತ್ತು ಸ್ವರಾಜ್ಯ ಈ ತತ್ವಗಳೆರಡರ ಏಕರೂಪತೆಯನ್ನು ಮ್ಯಾಝಿನಿಯ ಮಾತಿನಲ್ಲಿ ಕೇಳಿಕೊಂಡ ಬಳಿಕ ಯಾವ ಹಿಂದುವಿಗೆ ಹಿಂದುಸ್ಥಾನದೊಳಗಿನ ಮ್ಯಾಝಿನಿಯು, ಯಾವ ಕನ್ನಡಸಿಗೆ ಕನ್ನಡ ನಾಡಿನ ಮ್ಯಾಝಿನಿಯು, ಮರಾಟಿಗನಿಗೆ ಮಹಾರಾಷ್ಟ್ರದ ಮ್ಯಾಝಿನಿಯು ನೆನಪಾಗಲಿಕ್ಕಿಲ್ಲ? ಸತ್ಪುರುಷರು ಪರಮೇಶ್ವರನ ಅಂಶದಿಂದ ಸಂಭೂತರಾಗಿರುತ್ತಿರುವದರಿಂದ ಅವರ ಆತ್ಮಗಳು ಭಿನ್ನವಾಗಿರುವದಿಲ್ಲ; ಅದಕ್ಕೆಂದೇ ಅವರ ವಿಚಾರಗಳು ಪರಸ್ಪರರಿಗೆ ವಿಸಂಗತಗಳಾಗುವದಿಲ್ಲ. ಬೇರೆ ಬೇರೆ ದೇಶಗಳೊಳಗಿನ ಅವರ ನಾಮಗಳಷ್ಟೇ ಭಿನ್ನವಾಗಿವೆ. ಇಟಲಿಯೊಳಗೆ ಹುಟ್ಟಿದ ರಾಮದಾಸರಿಗೆ ಮ್ಯಾಝಿನಿ ಅನ್ನುತ್ತಾರೆ. ಮಹಾರಾಷ್ಟ್ರದೊಳಗೆ ಹುಟ್ಟಿದ ಮ್ಯಾಝಿ

ವಿಗೆ ರಾಮದಾಸರೆಂದೂ, ಕರ್ನಾಟಕದಲ್ಲಿ ಅವತರಿಸಿದ ಮ್ಯಾಝಿನಿಗೆ ವಿದ್ಯಾರಣ್ಯರೆಂದೂ ಅನ್ನುತ್ತಾರೆ. ಇವರೆಲ್ಲರೂ ಒಂದೇ ತತ್ವವನ್ನು ವಿಶದ ಪಡಿಸುವವರು ರಾಜಕಾರಣವು ಧಾರ್ಮಿಕವಿದ್ದರೇನೇ ಅದು ಪವಿತ್ರವಿರುತ್ತದೆ; ಹಾಗು ಧರ್ಮವು ರಾಜಕೀಯವಾಗಿದ್ದರೇ ಅದು ಪವಿತ್ರವಿರುತ್ತದೆ. ಇಂಥ ಮನುಷ್ಯ ಧಾರ್ಮಿಕವಿರುತ್ತಾನೆಂದು ನನಗೆ ತಿಳಿದ ಕೂಡಲೆ ನಾನು ಅವನನ್ನು ಕುರಿತು-'ನೀನು ಜನತೆಯ ಮುಕ್ತತೆಗಾಗಿ ಏನೇನು ಮಾಡಿರುತ್ತೀ? ಹಾಗು ಎಂಥೆಂಥ ಕಷ್ಟ-ನಷ್ಟಗಳನ್ನನುಭವಿಸಿರುತ್ತೀ?' ಎಂದು ಕೇಳುವೆನು. ಇಂಥವನೊಬ್ಬನು 'ಮನುಷ್ಯನಿರುವನೆಂಬದು ನನಗೆ ತಿಳಿಯುತ್ತಲೆ ನಾನು ಆತನನ್ನುದ್ದೇಶಿಸಿ:——'ನೀನು ಗುಲಾಮನಿರುವೆಯಾ? ಎಂದು ಕೇಳುವೆನು. ಯಾಕಂದರೆ ಯಾವನು ಪರದಾಸ್ಯದಲ್ಲಿ ಸ್ವಸ್ಥವಾಗಿರುವನೋ ಆತ ಮನುಷ್ಯನಾಗಿರದೆ ಅವನೊಬ್ಬ ಜಡವಸ್ತುವಾಗಿರುತ್ತಾನೆ.'

ರಾಜಕಾರಣವನ್ನು ಸ್ವಾರ್ಥ ಲಂಪಟತೆಯೊಳಗಿಂದ ಬಿಡಿಸಿ ಅದಕ್ಕೆ ಈಶ್ವರೀ ಕರ್ತವ್ಯದ ಉಚ್ಚಸ್ವರೂಪ ಕೊಟ್ಟ ಬಳಿಕ ಆ ಕರ್ತವ್ಯದ ಸಲುವಾಗಿ ಪ್ರತಿಯೊಬ್ಬ ಮನುಷ್ಯನು ಯಾವ ಬಗೆಯಾಗಿ ಉದ್ಯೋಗ ಮಾಡಬೇಕೆಂಬದನ್ನು ಅರಿಯಬೇಕಾಗುತ್ತದೆ. ಮ್ಯಾಝಿನಿಯ ಕರ್ತವ್ಯ ಮೀಮಾಂಸೆ ಬಹು ಉದಾತ್ತ ತತ್ತ್ವಗಳಿಂದ ರಚಿಸಲ್ಪಟ್ಟಿದೆ; ಆದರೆ ನಾವಿಲ್ಲಿ ಆ ಮಹಾತ್ಮನ ರಾಜಕೀಯ ಮತಗಳನ್ನಷ್ಟೇ ತಿಳಿಸುವ ಪ್ರಯತ್ನ ಮಾಡುತ್ತಿರುವದರಿಂದ ಆ ಇತರ ಮೀಮಾಂಸೆಗಳ ಚರ್ಚೆಯನ್ನಿಲ್ಲಿ ಮಾಡುವದು ಶಕ್ಯವಿರುವದಿಲ್ಲ. ಮ್ಯಾಝಿನಿಯ 'ಮಾನವೀ ಕರ್ತವ್ಯಗಳು' ಎಂಬ ಹೆಸರಿನ ಅತ್ಯಂತ ರುಚಿಕಟ್ಟಾದ ನಿಬಂಧದ ಅನುವಾದ ಮಾಡುವ ಉದ್ದೇಶವಿದೆ. ಆ ಉದ್ದೇಶ ಸಫಲವಾದರೆ ಆ ಕರ್ತವ್ಯ ಮೀಮಾಂಸೆಯು ಕನ್ನಡ ವಾಚಕರಿಗೆ ಮ್ಯಾಝಿನಿಯ ಶಬ್ದಗಳಲ್ಲೇ ಓದಲು ದೊರೆಯಬಹುದು. 'ಕರ್ತವ್ಯವೆಂದು ನಿರ್ಧರಿಸಲ್ಪಟ್ಟದ್ದನ್ನು ಎಂಥ ಸಂಕಟ ಪ್ರಾಪ್ತವಾದರೂ ಮನುಷ್ಯನದನ್ನು ಕೊನೆಗಾಣಿಸಲೆತ್ನಿಸಬೇಕು' ಎಂಬದನ್ನಷ್ಟೇ ನಾವಿಲ್ಲಿ ಹೇಳಿಡುವೆವು. ಮ್ಯಾಝಿನಿಯ ಅಭಿಪ್ರಾಯವೂ ಹೀಗೆಯೇ ಇರುತ್ತದೆ

'ಕರ್ತವ್ಯಕ್ಕೆಂದು ಕರ್ತವ್ಯ ಮಾಡಿರಿ, ಕರ್ತವ್ಯದ ತತ್ತ್ವದಿಂದ ಆತ್ಮಾರ್ಪಣೆಯ ಸಾಮರ್ಥ್ಯವುಂಟಾಗುತ್ತದೆ. ಈ ಉದಾತ್ತ ಕಲ್ಪನೆಯಿಂದ

ಆತ್ಮವು ಪರಮೇಶ್ವರನ ರೂಪದಲ್ಲಿ ವಿಲೀನವಾಗುತ್ತದೆ. ಕರ್ತವ್ಯನಿಷ್ಠೆಯಿಂದ ಮನುಷ್ಯನ ದೇಹದಲ್ಲಿ ವಿಲಕ್ಷಣವಾದ ಚೈತನ್ಯವುಂಟಾಗುತ್ತವೆ. ಮಾನವನು ಅದ್ವಿತೀಯ ಕೆಲಸಗಳನ್ನು ಮಾಡಲು ಶಕ್ತನಾಗುತ್ತಾನೆ. ಫಲವಿರಹಿತ ಕರ್ತವ್ಯನಿಷ್ಠ ದೇಶವೀರರ ಗಲ್ಲಿನ ಕಂಬಗಳೂ ಕೂಡ ಸ್ವರ್ಗಕ್ಕೊಯ್ಯುವ ಸೋಪಾನಗಳಾಗುತ್ತವೆ! ಆಯುಷ್ಯವನ್ನು ಸುಖಲೋಲುಪತೆಯಲ್ಲಿ ಕಳೆಯದೆ ಅದನ್ನು ಕರ್ತವ್ಯಪಾಲನೆಗಾಗಿಯೇ ವ್ಯಯಿಸಬೇಕು. 'ಆಯುಸ್ಸು ಮೋಜಿಗಾಗಿರದೆ, ಅದು ಕರ್ತವ್ಯಕ್ಕಿದೆ' ರಾಜಕಾರಣದೊಳಗಿನ ಮೊಟ್ಟಮೊದಲಿನ ಆಧಾರಭೂತ ಕರ್ತವ್ಯವೆಂದರೆ ಸ್ವದೇಶ ಸ್ವಾತಂತ್ರ್ಯವೇ ಆಗಿರುತ್ತದೆ. ಮನುಷ್ಯವರ್ಗ, ಸ್ವದೇಶ, ಕುಟುಂಬ ಹಾಗು ವ್ಯಕ್ತಿ ಎಂಬ ಮೆಟ್ಟಿಲುಗಳಿಂದ ಮಾನವನ ಕರ್ತವ್ಯದ ತಾರತಮ್ಯವಿರುತ್ತದೆ. ಈ ಪರಂಪರೆಯ ಪಾಲಿಗೆ ಯಾವ ರಾಜಕೀಯ ಕರ್ತವ್ಯಗಳು ಬಂದಿರುವವೊ ಅವುಗಳಲ್ಲಿ ಸ್ವದೇಶ ಸ್ವಾತಂತ್ರ್ಯವು ಪ್ರಥಮ ಕರ್ತವ್ಯವೇ ಆಗಿರುತ್ತದೆ; ಆದರೆ ಬರೀ ರಾಜಕೀಯ ಕರ್ತವ್ಯಕ್ಕೆಂದೇ ಅಲ್ಲ, ಇನ್ನುಳಿದ ಎಲ್ಲ ಕರ್ತವ್ಯಗಳು ಮಾನವನಿಂದ ಯಥಾಸ್ಥಿತವಾಗಿ ಜರುಗಲಿಕ್ಕೆ ಸ್ವದೇಶ ಸ್ವಾತಂತ್ರ್ಯವನ್ನು ಮೊದಲು ದೊರೆಕಿಸಬೇಕು. ವ್ಯಕ್ತಿಯ ಇಲ್ಲವೆ ಕುಟುಂಬದ ಕರ್ತವ್ಯಗಳು ಅವರ ಸ್ವದೇಶ ಪಾರತಂತ್ರ್ಯದಲ್ಲಿದ್ದರೆ ಅವೆಂದಿಗೂ ಯಥಾಸ್ಥಿತ ನಡೆಯಲಾರವು. ಜನತೆಯಲ್ಲಿ ಅಸತ್ಯ ಹಾಗು ದಾರಿದ್ರ್ಯಗಳು ಹೆಚ್ಚಿ, ಆ ದೇಶವು ಹೇಡಿ ಹಾಗು ನಿರ್ಬಲವಾಗುತ್ತದೆ. ಆ ದೇಶಕ್ಕೆ ಜ್ಞಾನ ದೊರೆಕಿಸಿ ಕೊಡುವದು ಅಶಕ್ಯವಾಗುತ್ತದೆ. ಕಲಿಯಲಿಕ್ಕೆ ಬಡತನದ ಮೂಲಕ 'ಎಲ್ಲಿ ವೇಳೆ ದೊರೆಯುವದಿಲ್ಲವೋ ಅಂಥಲ್ಲಿ ಬರೀ ಶಾಲೆಗಳನ್ನು ಸ್ಥಾಪಿಸಿದರೆ ಪ್ರಯೋಜನವೇನಾಗಬೇಕು?' ಆ ರಾಜಕೀಯ ಪಾರತಂತ್ರ್ಯದಿಂದ ದೇಶದೊಳಗಿನ ವ್ಯಕ್ತಿ ಮತ್ತು ಕುಟುಂಬಗಳದಷ್ಟೇ ಬೆಳವಣಿಗೆಯು ಕಟ್ಟಾಗುವದೆಂತಲ್ಲ; ಆದರೆ ಮನುಷ್ಯ ಜಾತಿಯ ಬೆಳವಣಿಗೆಯಾದರೂ ಆ ಪ್ರಮಾಣದಲ್ಲಿ ಕುಗ್ಗುತ್ತ ಹೋಗುತ್ತದೆ. 'ಪ್ರತಿಯೊಂದು ದೇಶಕ್ಕೆ ಮನುಷ್ಯ ಜಾತಿಯ ಉತ್ಕ್ರಾಂತಿಯಲ್ಲಿ ಹೆಚ್ಚಳವಾಗಲಿಕ್ಕೆ ಒಂದು ವಿಶಿಷ್ಟ ಕರ್ತವ್ಯವು ಹೇಳಲ್ಪಟ್ಟಿರುತ್ತದೆ; ಆದರೆ ಪಾರತಂತ್ರ್ಯದ ಮೂಲಕ ಆ ದೇಶವೇ ಅಸ್ತಿತ್ವದಲ್ಲಿದೆಯೆಂದು ಹೇಳಬರುವಂತಿರದ್ದರಿಂದ, ಅವರ ಪಾಲಿಗೆ ಬಂದಿದ್ದ ಕರ್ತವ್ಯವು

ಆ ದೇಶದಿಂದ ಘಟಿಸುವದವಶ್ಯವಾಗುತ್ತದೆ. ಅಂತೆಯೇ ಅಷ್ಟರ ಮಟ್ಟಿಗೆ ಮಾನವ ಜಾತಿಯ ಉನ್ನತಿಯು ಸ್ಥಗಿತವಾಗುತ್ತದೆ. ಇಡೀ ದೇಶದ ಉನ್ನತಿಯೆಂದರೆ ಮಾನವ್ಯದುನ್ನತಿಯು; ಆದರೆ ಎಲ್ಲಿಯ ವರೆಗೆ ಪಾರತಂತ್ರ್ಯದಿಂದ ಕೆಲವು ದೇಶಗಳು ನೀಚತೆಗೆ ಅಂಟಿಕೊಂಡುಬಿಟ್ಟಿವೆಯೋ ಅಲ್ಲಿಯವರೆಗೂ ಮಾನವ್ಯವು ಉನ್ನತಿಗೆ ಹೋಗಲಾರದು. ಆದ್ದರಿಂದ ವ್ಯಕ್ತಿಯ, ಕುಟುಂಬದ, ಸಮಾಜದ ಮತ್ತು ಮನುಷ್ಯ ಜಾತಿಯ ಎಲ್ಲ ಬಗೆಯ ಉನ್ನತಿಗೆ ಪ್ರಮುಖ ಸಾಧನವಾದ ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸುವದೂ ಸಂರಕ್ಷಿಸುವದೂ ಇದು ಪ್ರಥಮ ಕರ್ತವ್ಯವಾಗಿರುತ್ತದೆ. ಇದು ಪರಮೇಶ್ವರನ ಆಜ್ಞೆಯಾಗಿದೆ; ಇದು ಧರ್ಮದ ಆಜ್ಞೆಯಾಗಿರುತ್ತದೆ.

ಆದರೀ ರಾಜಕೀಯ ಸ್ವಾತಂತ್ರ್ಯದೊರೆಕಿಸುದ ಕರ್ತವ್ಯವನ್ನು ಪೂರೈಸಲು ಯಾವ ದಾರೀ ಹಿಡಿಯುಬೇಕು? ಆಗ ಇಟಲಿಯ ಸ್ವಾಮಿತ್ವವು ಆಸ್ಟ್ರಿಯದ ಕಡೆಗಿದ್ದಿತು. ಎಪ್ಪತ್ತೈದು ಸಾವಿರ ಆಸ್ಟ್ರಿಯನ್ ಸಿಪಾಯಿಗಳು ಇಟಲಿಯ ರಾಜ್ಯವನ್ನಾಳುತ್ತಿದ್ದರು ಪಾರತಂತ್ರ್ಯದ ದುಃಖ, ದಾರಿದ್ರ್ಯ ಹಾಗು ಅಜ್ಞಾನಾದಿಕ ಪರಿಣಾಮಗಳು ಸಂಭವಿಸಿರುತ್ತವೆ. ವ್ಹೆನಿಸ ಮತ್ತು ಮಿಲನ ಮುಂತಾದ ಪೂರ್ವಕಾಲದಲ್ಲಿ ವ್ಯಾಪಾರೋದ್ಯೋಗಗಳಲ್ಲಿ ಅತ್ಯಂತ ಹೆಸರುವಾಸಿಗಳಾದ ಪ್ರಾಂತಗಳೊಳಗಿನ ಜನರಿಗೂ ಹೊಟ್ಟೆಗೆ ಕೂಳು ಕೂಡ ಸಿಗದಾಗಿದೆ. ಶಿಕ್ಷಣವು ಪರಕೀಯರ ಸ್ವಾಧಿತವಾಗಿತ್ತು. ವ್ಯಾಪಾರವು ಪರಕೀಯರ ವಶದಲ್ಲಿ ಜೀವನ-ಮರಣಗಳು ಪರಕೀಯರ ಆಧೀನವಾಗಿದ್ದವು. ಸ್ವಾತಂತ್ರ್ಯವು ಪರಕೀಯರ ಸ್ವತ್ತಾಗಿತ್ತು. ಇಡೀ ಇಟಲೀ ದೇಶವು ಗುಲಾಮರ ಸಂತೆಯಂತಾಗಿತ್ತು. ಅಲ್ಲಿ ಯಾವ ಸ್ವಲ್ಪ ಕಿರುಕಳ ದೇಶೀ ಸಂಸ್ಥಾನಗಳಿದ್ದವೋ ಅವುಗಳೆಲ್ಲ ಆಸ್ಟ್ರಿಯದ ಆಜ್ಞಾಧಾರಕ ನಾಯಿಗಳಾಗಿದ್ದವು. 'ಇಟಲಿಯ ಹೆಸರು ಒರೆಸಿ ಹೋಗಿತ್ತು. ಇಟಲಿಯ ನಿಶಾನಿ ಹರಿದು ಹೋಗಿತ್ತು. ಯಾವ ರೋಮ ಪಟ್ಟಣವು ಮೂರು ಸಾರೆ ಇಡೀ ಜಗತ್ತಿನ ಮುಖಂಡತ್ವವನ್ನು ಸ್ವೀಕರಿಸಿದ್ದಿತೋ ಆ ರೋಮವು ಇಂದಿಗೆ ಸತ್ತುಹೋಗಿದೆ! ಇಟಲಿಯು ದೊಡ್ಡದೊಂದು ಸೆರೆಮನೆಯಾಗಿ ಹೋಗಿದೆ; ಮತ್ತು ಆದರ ಸುತ್ತಲೂ ಆಸ್ಟ್ರಿಯನ್ ಶಿಪಾಯಿಗಳ ಪಹರೆ ಕುಳಿತಿದೆ.' ಇಟಲಿಯಲ್ಲಿ ಶಾಂತತೆ ಇದೆ. 'ಆದರೆ ಆ ಶಾಂತತೆಯು ಜೀವಿತ ಮನುಷ್ಯರದಾಗಿರದೆ, ಆದು ಸತ್ತವದ ಶಾಂತತೆ ಯಾಗಿದೆ.' ಆ ತೀರ ಅವಮಾನಕರ ಸ್ಥಿತಿಯೊಳ

ಗಿಂದ ಸ್ವದೇಶವನ್ನೆಂತು ಊರ್ಜಿತಗೊಳಿಸಬೇಕು? ಸ್ವಾತಂತ್ರ್ಯವನ್ನೆಂತು ಮರಳಿ ದೊರೆಕಿಸಬೇಕು? ಮ್ಯಾಝಿನಿ ಹುಟ್ಟಿದಾಗಲೆ ಇಟಲಿಯ ಜನರು ಒಂದು ಪ್ರಶ್ನೆಯನ್ನು ಬಿಡಿಸಿದ್ದರು. ಅದೇನಂದರೆ, ಸ್ವದೇಶದ ಉನ್ನತಿಯು ಭಿಕ್ಷಾಟನದಿಂದ ಅಥವಾ ಪರಕೀಯರ ಸಹಾಯದಿಂದ ಎಂದೆಂದಿಗೂ ಆಗಲಾರದೆಂದು. 'ಭಿಕ್ಷೆ ಬೇಡಿದರೆ ಸ್ವಾತಂತ್ರ್ಯ ದೊರೆತೀತೆಂಬ ಆಶೆಯಿದೆಯೇ? ಇಲ್ಲಿಲ್ಲ, ಭಿಕ್ಷಾಟನೆಯಿಂದೆಂದೂ ಸ್ವಾತಂತ್ರ್ಯ ಲಭಿಸಲಿಕ್ಕಿಲ್ಲ.' ಅವರ ಎದುರಿಗೆ ಯಾವ ಕೆಲಸವಿದ್ದಿತೋ ಅದು ಅಜಾನುಬಾಹು ಮನುಷ್ಯನದಾಗಿತ್ತು. 'ಆ ಕೆಲಸ ಮಾಡಲಿಕ್ಕೆಂದು ಅವರು ನಾಡಿನಲ್ಲೆಲ್ಲ ಹರಿಹಬ್ಬಿದನು.' ಅವರು ಪ್ರತಿಯೊಬ್ಬ ಮುಖ್ಯಮಂತ್ರಿಯ ಬಣ್ಣದ ಮಾತಿಗೆ ಉಬ್ಬಿಬಿಡುವರು. ಅವರು ತುಚ್ಛ ರಿಯಾಯತಿಗಳಿಗೆ ಸಂತುಷ್ಟರಾಗುವರು; ಮತ್ತು ಅವರು ಪ್ರಚಂಡವಾದ ಲೋಕಶಕ್ತಿಯ ಬಗ್ಗೆ ನಂಬಿಕೆ ತಾಳುವದನ್ನು ಬಿಟ್ಟು ಪರಕೀಯರ ಬಾಗಿಲಲ್ಲಿ ಬಿಕ್ಕೆಬೇಡುವ ಉದ್ಯೋಗ ನಡೆಸಿದರು. ಆದರೆ ಆ ಉಪಕ್ರಮದ ಉಪಸಂಹಾರವು ತೀವ್ರವೇ ಆಯಿತು. ಇಟಲಿಯ ಧೂರ್ತ ಪ್ರಮುಖರು ಪರಕೀಯರ ಆ ಸವಿಮಾತುಗಳಿಗೆ ಹೆಚ್ಚುಕಾಲಮರುಳಿಗೆ ಬೀಳಲಿಲ್ಲ. ಆಸ್ಟ್ರಿಯನ್ನರು ತಮ್ಮನ್ನು ಗೆದ್ದದ್ದು ತಮ್ಮ ಅರ್ಜಿಗಳ ಚೀಟಿಗಳಿಂದ ತಮ್ಮನ್ನು ಮುಕ್ತಗೊಳಿಸಲಿಕ್ಕಿಲ್ಲೆಂಬದು ಅವರಿಗೆ ತೀವ್ರವೇ ಮನದಟ್ಟಾಯಿತು.

ರಾಷ್ಟ್ರಗಳ ಇತಿಹಾಸಗಳಲ್ಲಿ ಬಹುಶಃ ಕಂಡುಬರುವ ಈ ಬಿಕ್ಕೆಬೇಡುವ ಚಟವು ಇಟಲಿಗೂ ಹತ್ತಿತ್ತು. ಆದರದು ತೀವ್ರವೇ ನಾಶವಾಯಿತು. ಮೂರು ನೂರು ವರ್ಷಗಟ್ಲೆ ಪರಕೀಯರ ಬಾಗಿಲಲ್ಲಿ ಒದೆಕೆ ಬೀಳುತ್ತಿದ್ದರೂ ಮತ್ತು ಸಾವಿರಾರು ಸಾರೆ ವಿಶ್ವಾಸಭಂಗವಾಗುತ್ತಿದ್ದರೂ ಕೂಡ ಮತ್ತೊಮ್ಮೆ ಚಿಪ್ಪು ಹಿಡಿದುಕೊಂಡು ಬಿಕ್ಕೇ ಬೇಡುವಷ್ಟು ಇಟಲಿ ದೇಶವು ರಾಜನಿಷ್ಠವಾಗಿರಲಿಲ್ಲ. ಅದೇ ಕಾಲಕ್ಕೆ ಪೋಲಂಡ, ಸ್ಪೇನ ಮೊದಲಾದ ದೇಶಗಳಲ್ಲಿ ರಾಜಕ್ರಾಂತಿಯ ಬೇಗೆಯು ಹಬ್ಬಿತ್ತು ಅವರಿಂದ. ಇಟಲಿಯೊಳಗಿನ ಜನರಿಗೆ ಆತ್ಮನಿಷ್ಠೆಯುಂಟಾಯಿತು; ಆದರೆ ಇಂಥ ಭಯಂಕರ ರಾಜ್ಯಕ್ರಾಂತಿಗಳು ಎಡಬಲಗಳಲ್ಲಿ ಹಬ್ಬಿದ್ದರೂ ಕೂಡ ಅವುಗಳ ಕಡೆಗೆ ನೋಡಿ ಯಾರಿಗೆ ತಮ್ಮ ಗುಲಾಮಗಿರಿಯ ಮತ್ತು ಬಿಕ್ಕೆ ಬೇಡುವದರ ನಾಚಿಕೆಯೆನಿಸುವದಿಲ್ಲವೋ ಅಂಥ ದೇಶಗಳೇನು ಈ ಭೂಮಿಯೊಳಗೆ ಅಲ್ಪವಿರುವವೇ?

ಆದರೆ ಇಟಲಿಯು ಅಷ್ಟು ಷಂಡವಾಗಿರಲಿಲ್ಲ. ಅದು ಚಟಕ್ಕನೆ ಎಚ್ಚತ್ತಿತು. ಆ ಜಾಗೃತಿಯ ಪರಿಣಾಮವು ಎಲ್ಲೆಡೆಯಲ್ಲೂ ತೋರಹತ್ತಿತು. ಸ್ವದೇಶದ ಪ್ರೀತಿಯು ಮೊಟ್ಟಮೊದಲು ವಾಙ್ಮಯದಲ್ಲಿ ಪ್ರಾದುಃರ್ಭವಿಸಿತು. ಆ ಮೇಲೆ ಇಟಲಿಯಲ್ಲಿ ಸ್ವದೇಶೀ ಚಟುವಟಿಕೆ ಪ್ರಾರಂಭವಾಯಿತು. ಮಿಲನದಲ್ಲಂತೂ ಆ ಸ್ವದೇಶೀ ಚಟುವಟಿಕೆಗೆ ಕಳಸವೇ ಹಚ್ಚಿದಂತಾಗಿತ್ತು. ಪ್ರತಿಯೊಂದು ಉದಾತ್ತ ಮತ್ತು ಎದೆಗಾರಿಕೆಯ ಕೃತ್ಯಗಳಲ್ಲಿ ತರುಣ ಜನರು ಯಾವಾಗಲೂ ಹೇಗೆ ಮುಂದರಿಯುವರೋ ಇದರಂತೆಯೇ ಅವರು ಇಟಲಿಯ ರಾಜ್ಯಕ್ರಾಂತಿಯಲ್ಲೂ ಬಹು ಮುಂದುವರೆದಿದ್ದರು. ಮಿಲನದಲ್ಲಿ ಆಸ್ಟ್ರಿಯಾದ ತಂಬಾಕದ ಮೇಲೆ ವಿದ್ಯಾರ್ಥಿಗಳು ಉಗ್ರ ಬಹಿಷ್ಕಾರ ಹಾಕಿದರು. ಅವರು ದಾರಿದಾರಿಗಳಲ್ಲಿ ಅಡ್ಡಗಟ್ಟಿ ನಿಂತರು; ಮತ್ತು ಯಾವನಾದರೂ ಆಸ್ಟ್ರಿಯಾದೇಶದ ಬೀಡಿ ಸೇದುತ್ತಿರುವದನ್ನು ಕಂಡೊಡನೆಯೇ ಅವರು ಆತನನ್ನು ಹೊಡೆ-ಬಡಿಯುವ ಉದ್ಯೋಗ ನಡೆಸಿದರು. ಆ ಸ್ವದೇಶೀ ಚಟುವಟಿಕೆಗೆ ಶೀಘ್ರವೇ ಸಂಪೂರ್ಣ ರಾಜಕೀಯ ಸ್ವರೂಪವುಂಟಾಯಿತು. ಅಮೇರಿಕೆಯಲ್ಲೂ ಸ್ವಾತಂತ್ರ್ಯಯುದ್ಧಕ್ಕೆ ಮೊದಲು ಹೀಗೆಯೇ ಸ್ವದೇಶೀ ಚಟುವಟಿಕೆ ಪ್ರಾರಂಭವಾಗಿತ್ತು. ಎಂತಹ ವಿಲಕ್ಷಣ ಪ್ರಕಾರವಿದು! ಇತಿಹಾಸದ ಪುನರಾವೃತ್ತಿಯಾಗುತ್ತದಂತಲ್ಲ, ಅದು ಹೀಗೆಯೇ. ಇತಿಹಾಸದಲ್ಲಿ ಸ್ವದೇಶೀ ಚಟುವಟಿಕೆಯ ರೂಪಾಂತರವು ರಾಜ್ಯಕ್ರಾಂತಿಯಲ್ಲಿ ಮತ್ತು ಸ್ವಾತಂತ್ರ್ಯ ದೊರೆಕಿಸುವಲ್ಲಿ ಆಗಿರುವ ಉಧಾಹರಣೆಗಳೇನೂ ಆಕಸ್ಮಿಕವಾಗಿ ಉಂಟಾದವುಗಳಲ್ಲ. ಅವೇನೂ ಅಪಘಾತಗಳಲ್ಲ. ಅವುಗಳೊಳಗಿನ ಈ ವಿಲಕ್ಷಣ ಸಾಮ್ಯವನ್ನು ವಿವರಿಸುವದು ಶಕ್ಯವಾಗಿರುತ್ತದೆ.

ಸ್ವದೇಶೀ ಚಟುವಟಿಕೆಯೆಂದರೆ 'ಪರರ ಲೂಟಿಯನ್ನು ಅಡ್ಡಗಟ್ಟಿ ತಮ್ಮ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸುವದೇ' ಹೌದು. ತಮ್ಮ ಹಕ್ಕುಗಳೇನಿವೆ? ಎಂಬದು ಸರ್ವ ಸಾಮಾನ್ಯರಿಗೆ ಒಮ್ಮೆಲೆ ತಿಳಿಯುವದಿಲ್ಲ. ಅಂತೆಯೇ ಮೊಟ್ಟ ಮೊದಲು ಆ ಪರದೇಶೀ ವಸ್ತುಗಳ ಗ್ರಾಹಕ ವ್ಯಕ್ತಿಗೆ ತಿಳಿಯುವದಿಷ್ಟೇ, ಪರಕೀಯರ ವ್ಯಾಪಾರದಿಂದ ತಾವು ನಾಶಿಸುತ್ತೇವೆ. ಅದಕ್ಕಾಗಿ ಅವರು ಆ ವ್ಯಾಪಾರದ ಮೇಲೆ ಬಹಿಷ್ಕಾರ ಹಾಕಲಿಕ್ಕೆ ಸಿದ್ಧರಾಗುತ್ತಾರೆ. ಅವರ ಸಿದ್ಧತೆಯು ಇಷ್ಟಾಯಿತೆಂದಕೂಡಲೆ ಪರಕೀಯರು ತಮ್ಮ ವ್ಯಾಪಾರದ ಸಂರಕ್ಷಣಕ್ಕಾಗಿ ಒತ್ತಾಯದ ಉಪಾಯ ಕೈಕೊಳ್ಳತೊಡಗುವರು.

ಒತ್ತಾಯವು ಪ್ರಾರಂಭವಾದೊಡನೆಯೇ ಮೊಟ್ಟ ಮೊದಲು ಬರೀ ವ್ಯಾಪಾರದ ಮೇಲೆಯೇ ಬಹಿಷ್ಕಾರ ಹಾಕುತ್ತಿದ್ದ ಜನರು ಅನಾಯಾಸವಾಗಿ ಸತ್ಯ ಮಾರ್ಗವನ್ನು ಹಿಡಿಯುತ್ತಾರೆ. ನಿರ್ಜೀವ ಪರದೇಶೀ ಅರಿವೆಯ ಮೇಲೆ ಇಲ್ಲವೆ ತಂಬಾಕದ ಮೇಲೆ ಅಥವಾ ಚಹ-ಸಕ್ಕರೆಗಳ ಮೇಲೆ ಬಹಿಷ್ಕಾರ ಹಾಕುವದರಿಂದೇನೂ ಪ್ರಯೋಜನವಾಗಲಾರದೆಂದು ಅವರಿಗೆ ತಿಳಿಯ ಹತ್ತುವದು. ಆ ನಿರ್ಜೀವ ವಸ್ತುಗಳ ಮೇಲೆ ಕೋಪತಾಳುವದರಿಂದೇನೂ ಪ್ರಯೋಜನವಾಗಲಾರದೆಂದು ಅವರಿಗೆ ತಿಳಿಯಹತ್ತುವದು. ಆ ನಿರ್ಜೀವ ವಸ್ತುಗಳ ಮೇಲೆ ಕೋಪ ತಾಳುವದರಿಂದೇನು ಪ್ರಯೋಜನ? ನಿಜವಾದ ಸಿಟ್ಟು ಆ ನಿರ್ಜೀವ ವಸ್ತುಗಳಿಗೆ ಯಾವ ಸಜೀವ ಪ್ರಾಣಿಗಳ ಆಧಾರವಿದೆಯೋ ಅವರ ಮೇಲೆಯೇ ಹಾಯಿಸಿಕೊಳ್ಳಬೇಕು. ಪರಕೀಯರ ವಸ್ತುಗಳಿಗಲ್ಲ; ಪರಕೀಯರಿಗೇ ಬಹಿಷ್ಕಾರ ಹಾಕಬೇಕು. ತಂಬಾಕಕ್ಕಷ್ಟೇ ಅಲ್ಲ, ಆದರೆ ಆಸ್ಟ್ರಿಯನ್ನರನ್ನೇ ಮತ್ತು ಚಹಕ್ಕಷ್ಟೇ ಅಲ್ಲ, ಆದರೆ ಬ್ರಿಟಿಶರನ್ನೇ ತಮ್ಮ ದೇಶದೊಳಗಿಂದ ಹೊರದೂಡಬೇಕು. ಇಂಥ ವಿಚಾರ ಪರಂಪರೆಗಳಿಂದ ಇಟಲಿಯನ್ನರ ಹಾಗು ಅಮೇರಿಕನ್ನರ ಸ್ವದೇಶೀ ಚಟುವಟಿಕೆಯು ಸ್ವಾತಂತ್ರ್ಯಯುದ್ಧದಲ್ಲಿ ರೂಪಾಂತರ ತಾಳಿತು.

ಮ್ಯಾಝಿನಿಗಿಂತ ಪೂರ್ವದಲ್ಲಿ ಯಾವ ರಾಷ್ಟ್ರಭಕ್ತರಾಗಿ ಹೋಗಿದ್ದರೊ, ಅವರು ಇಟಲಿಯ ರಾಜಕಾರಣವನ್ನು ಈ ಮೆಟ್ಟಿಗೆ ತಂದಿರಿಸಿದ್ದರು. ಎಲ್ಲೆಡೆಯಲ್ಲೂ ಪರಕೀಯ ಸತ್ತೆಯ ಬಗ್ಗೆ ಅಸಂತೋಷವು ಹಬ್ಬಿದ್ದಿತು. ತಮ್ಮ ದುಃಖ-ಕಷ್ಟಗಳು ಬಿಕ್ಕೆಬೇಡುವದರಿಂದೇನೂ ಕಡಿಮೆಯಾಗಲಾರವೆಂದು ಬಹುಜನರಿಗೆ ಮನದಟ್ಟಾಗಿ ಬಿಟ್ಟಿತ್ತು; ಮತ್ತು ಸ್ವದೇಶೀ ಚಟುವಟಿಕೆಯಂತಹ ಆತ್ಮನಿಷ್ಠೆಯ ಚಟುವಟಿಕೆಯು ಉದ್ಭವಿಸಿದ್ದಿತು. ಇಷ್ಟೇ ಅಲ್ಲ, ಕೆಲಕೆಲವು ಮುಂದಾಳುಗಳಿಗೆ ಸ್ವಾತಂತ್ರ್ಯದ ಅಭಿಲಾಷೆಯೂ ಹುಟ್ಟಿದ್ದಿತು; ಆದರೆ ಈ ಸ್ವಾತಂತ್ರ್ಯದ ಲಾಲಸೆಯನ್ನು ಎಲ್ಲ ಜನರಿಗೂ ಹೇಗೆ ತಿಳಿಸಬೇಕು? ಪರಕೀಯ ಜನರನ್ನು ಇಟಲಿಯೊಳಗಿಂದ ಹೊರದೂಡದ ಹೊರತು ಇಟಲಿಯೆಂದೂ ತಲೆಯೆತ್ತಲಾರದೆಂಬ ಸಂಗತಿಯನ್ನು ಜನರಿಗೆ ಹೇಗೆ ಕಲಿಸಬೇಕು? ವೃತ್ತಪತ್ರಗಳೂ ಬಹಿರಂಗದ ಸಭೆಗಳೂ ಅಸಂತೋಷವನ್ನು ಹುಟ್ಟಿಸುತ್ತಿದ್ದವು; ಆದರೆ ಆ ಅಸಂತೋಷಕ್ಕೆ ಕೃತಿಯ ಸ್ವರೂಪವೀಯುವದು ಅತ್ಯಾವಶ್ಯಕವಾಗಿತ್ತು. ಯಾಕಂದರೆ ಆಸ್ಟ್ರಿಯಾವನ್ನು ಓಡಿಸಿ

ಬಿಡಬೇಕೆಂದು ಡಾಣಾಡಂಗುರ ಹೇಳಲಿಕ್ಕೆ ಯಾರಿಂದಲೂ ಆಗಲಿಲ್ಲ; ಮತ್ತು ಲಾಕ್ಷಣಿಕ ಭಾಷೆಯಲ್ಲಿ ಹೇಳಿದರೆ ಅದು ಸಾಮಾನ್ಯ ಜನತೆಗೆ ತಿಳಿಯುತ್ತಿರಲ್ಲಿಲ್ಲ. ಇದಕ್ಕಿಂತಲೂ ದೊಡ್ಡ ಆತಂಕವೆಂದರೆ ಬರೀ ಆಸ್ಟ್ರಿಯ ವನ್ನೇ ಹೊರಗೆ ಹಾಕಿರೆಂದು ಹೇಳಿದರೆ ಕಾರ್ಯವಾಗುತ್ತಿರಲಿಲ್ಲ; ಆದರೆ ಆ ರಾಷ್ಟ್ರಕೃತ್ಯಕ್ಕಾಗಿ ಯಾವ ಹಂಚಿಕೆ ತೆಗೆಯಬೇಕೆಂಬ ಶಿಕ್ಷಣವನ್ನೂ ಅದರ ಸಾಮಗ್ರಿಯನ್ನೂ ಸಂಪಾದಿಸಬೇಕಾಗಿತ್ತು. ಸ್ವಾತಂತ್ರ್ಯಪಡೆಯಿರಿ, ಎಂದಿಷ್ಟೇ ಹೇಳಿ ಸುಮ್ಮನೆ ಕೂಡ್ರುವಂತಿರಲಿಲ್ಲ; ಆದರೆ ಸ್ವಾತಂತ್ರ್ಯ ಯುದ್ಧದ ಸಿದ್ಧತೆ ಮಾಡುವದೂ ಅತ್ಯವಶ್ಯವಾಗಿತ್ತು. ಇವೆರಡೂ ಕೆಲಸಗಳ ನ್ನೆಂತು ಉದ್ದೇಶಿಸುವದು? ಪರಕೀಯ ಒತ್ತಾಯದ ಮೂಲಕ 'ಇಟಲಿಗೆ ಪಾರ್ಲಮೆಂಟಿಲ್ಲ, ವ್ಯಾಸಪೀಠವಿಲ್ಲ; ಮುದ್ರಣ ಸ್ವಾತಂತ್ರ್ಯವಿಲ್ಲ; ವಾಕ್ ಸ್ವಾತಂತ್ರ್ಯವಿಲ್ಲ, ಸಮಾಜ ಸ್ವಾತಂತ್ರ್ಯವಿಲ್ಲ; ಇವುಗಳ ಸಲುವಾಗಿ ನಮ್ಮ ಗಳ ಮನಸ್ಸಿನಲ್ಲಿ ಸ್ಫುರಿಸುತ್ತಿರುವ ಸತ್ಯವನ್ನು ಸ್ಪಷ್ಟವಾಗಿ ಮಾತಾಡಲಿಕ್ಕೆ ಬರುವಂತಹ ಒಂದೂ ಸಾಧನವಿಲ್ಲ.' ಇಂತೀ ಸ್ಥಿತಿಯಾಗಿರಲು ಇಟಾಲಿ ಯಲ್ಲಿ ಸ್ವಾತಂತ್ರ್ಯಪ್ರೇಮದ ಲಾಲಸೆ ಹಾಗು ಸಾತಂತ್ರ್ಯ ಯುದ್ಧದ ಸಿದ್ಧತೆ ಇವುಗಳನ್ನೆಂತು ಮಾಡುವದು? ಎಂಬ ತೊಡಕು ಬಿಡಿಸುವದನ್ನು ಕಾರ ಬೋನಾರಿ ಮುಂತಾದ ಒಂದೆರಡು ಗುಪ್ತ ಮಂಡಲಗಳು ಪ್ರಯತ್ನಿಸಿದವು; ಆದರೆ ಅವುಗಳಿಗೆ ಅದರಲ್ಲಿ ಯಶ ದೊರೆಯಲಿಲ್ಲ. ಅವುಗಳ ಕಾರಣಗಳನ್ನು ಹೇಳುವ ಸ್ಥಳವಿದಲ್ಲ,

ಆದೆಲ್ಲ ಸ್ಥಿತಿಯನ್ನು ಯೋಚಿಸಿ ಮತ್ತು ಇಟಲಿಯ ಮುಂಚಿನ ಇತಿ ಹಾಸವನ್ನು ಚೆನ್ನಾಗಿ ಅಭ್ಯಾಸಿಸಿ 'ಆ ಹಳೇ ಯಂತ್ರಗಳನ್ನೆಲ್ಲ ಕರಗಿಸಿ ಮತ್ತೆ ಹೊಸ ಯಂತ್ರಗಳನ್ನು ಸಿದ್ಧಪಡಿಸದ ಹೊರತು ಇಟಾಲಿಯ ಭಾಗ್ಯೋ ದಯವಾಗಲಿಕ್ಕಿಲ್ಲ 'ಎಂದು ಮ್ಯಾಝಿನಿಗೆ ಖಾತ್ರಿಯಾಗಿ ಹೋಯಿತು. ಆ ಹೊಸ ಯಂತ್ರದ ಸಾಹಿತ್ಯವೆಂದರೆ ಇಟಲಿಯ ತರುಣರೇ ಆಗಿದ್ದರು. ಹಳೇ ವಿಚಾರ ಗಳಿಂದ ಯಾರ ಮನಸ್ಸುಗಳು ಬಿಗಿಯಲ್ಪಟ್ಟಿಲ್ಲವೋ ಮತ್ತು ಯಾರ ದೇಹ ದಲ್ಲಿ ಧ್ಯೇಯಸಾಧನೆಗಾಗಿ ಬೇಕಾದಂತಹ ಸಂಕಟ ಸಹಿಸುವ ಶಕ್ತಿಯಿದೆ ಯೋ ಅಂಥ ತರುಣ ಜನರೇ ಮುಂದೆ ಬೀಳಬೇಕು. 'ಹೊಸ ಪರಿಸ್ಥಿತಿಗೆ ಹೊಸ ಜನರೇ ಬೇಕು.'

ಎರಡು ಕೋಟಿ ಜನರು ಮನಸ್ಸಿನ ಮೇಲೆ ತಕ್ಕೊಂಡರೆ ಈ ಲೋಕದಲ್ಲಿ ಅವರಿಗೆ ಅಶಕ್ಯವಾವುದಿದೆ? 'ನನ್ನ ಇಟಲಿಯ ಜನಸಂಖ್ಯೆ ಎರಡು ಕೋಟಿ ಇದೆ. ಈ ಎರಡು ಕೋಟಿ ಜನಗಳ ಮನಸ್ಸಿನಲ್ಲಿ ಬಂದ ಬಳಿಕ ಇವರನ್ನು ಪರಕೀಯರ ಎಪ್ಪತ್ತೈದು ಸಾವಿರ ದಂಡಾಳುಗಳು ಆತಂಕದಲ್ಲಿಡುವರೋ? ಎರಡು ಕೋಟಿ ಜನರು ಹಾಗು ಅವರ ಪಕ್ಷಕ್ಕೆ ಪರಮೇಶ್ವರ!' ಇಂಥ ಪರಿಸ್ಥಿತಿಯಲ್ಲಿ ಇಟಲಿಯು ಪರಕೀಯರ ನಿಃಪಾತವನ್ನು ಅರೆಕ್ಷಣದಲ್ಲಿ ಮಾಡಿ ಬಿಟ್ಟೀತು. 'ಇದುವರೆಗೆ ಇಟಲಿಯು ಸ್ವತಂತ್ರವಾಗದಿರಲಿಕ್ಕೆ ಅವರಲ್ಲಿ ಸ್ವಶಕ್ತಿಯಿದ್ದಿಲ್ಲವೆಂತಲ್ಲ; ಆದರೆ ಅದಕ್ಕೆ ಸ್ವಶಕ್ತಿಯ ಜ್ಞಾನವಿರಲಿಲ್ಲವಷ್ಟೆ' ಎಂಬ ಆತ್ಮವಿಶ್ವಾಸವನ್ನುಂಟು ಮಾಡುವದು ಪ್ರಥಮ ಕೆಲಸವಾಗಿತ್ತು; ಮತ್ತು ಅದು ಮುಗಿದೊಡನೆಯೇ ಇಟಲಿಗೆ ಸ್ವಾತಂತ್ರ್ಯದ ತಳಮಳವೂ ಮತ್ತು ಅದನ್ನು ತಾನು ತನ್ನ ಕರ್ತೃತ್ವದಿಂದ ದೊರೆಕಿಸಿಕೊಳ್ಳುವ ನಿಷ್ಠೆಯೂ ಪ್ರಾಪ್ತವಾದೊಡನೆ ಆದಕ್ಕೆ ರಣಾಂಗಣದಲ್ಲಿ ಹಾರಿಕೊಳ್ಳುವ ಸಶಕ್ತತೆಯನ್ನುಂಟುಮಾಡುವದು ಎರಡನೇ ಕೆಲಸವಾಗಿತ್ತು. ಇಟಲಿಯಲ್ಲಿ ಮೊದಲು ಮತಪರಿವರ್ತನಗೊಳಿಸುವದು; ಹಾಗು ಅದರೊಡನೆಯೇ ಶರೀರ ಪರಿವರ್ತನೆಗೊಳಿಸುವದು, ಇಟಲಿಯ ಮನಸ್ಸನ್ನು ಸ್ವತಂತ್ರ ಮತ್ತು ಸಮರ್ಥಗೊಳಿಸುವದು ಮತ್ತು ಇಟಲಿಯ ದೇಹವನ್ನು ಸ್ವತಂತ್ರವೂ ಸಶಸ್ತ್ರವೂ ಮಾಡಬೇಕಾಗಿತ್ತು.

ಆದರೆ ಇವೆಲ್ಲ ಕೆಲಸಗಳನ್ನು ಡಾಣಾಡಂಗುರ ಮಾಡುವದು ಅಶಕ್ಯವಾಗಿದ್ದಿತೆಂಬದನ್ನು ಮೇಲೆ ವಿವರಿಸಲಾಗಿದೆ. ಯಾವದೊಂದು ಪರತಂತ್ರ ರಾಷ್ಟ್ರವು ಈ ಮಜಲಿಗೆ ಬಂದು ಮುಟ್ಟಿತೆಂದರೆ ಅವುಗಳೆದುರಿಗೆ ಇದೇ ಮಹತ್ವದ ಪ್ರಶ್ನೆ ಬಂದು ನಿಲ್ಲುವದು. ಸ್ವಾತಂತ್ರ್ಯವು ಬೇಕೆಂಬ ಅಸ್ಪಷ್ಟ ಇಚ್ಛೆಯು ಉಂಟಾಗಿರುತ್ತದೆ; ಆದರೆ ಬಹುಜನ ಸಮಾಜಕ್ಕೆ ಅದನ್ನು ಸ್ಪಷ್ಟವಾಗಿ ಎಂತು ತಿಳಿಸಬೇಕು? ಬಿಕ್ಕೆಯಿಂದೇನೂ ಲಭಿಸಲಾರದು; ಮತ್ತು ಕಟ್ಟಕಡೆಗೆ ಶಕ್ತಿದೇವಿಯ ಉಪಾಸನೆಯನ್ನೇ ಮಾಡಬೇಕಾಗುವದೆಂಬದು ಅವರಿಗೆ ಮಸಮಸಕಾಗಿ ಕಾಣಹತ್ತುತ್ತದೆ; ಆದರೆ ರಾಷ್ಟ್ರವನ್ನು ಸಶಕ್ತ ಹಾಗು ಸಶಸ್ತ್ರ ಹೇಗೆ ಮಾಡಬೇಕೆಂಬದು ಮಾತ್ರ ಅವರಿಗೆ ಹೇಳಬರುವದಿಲ್ಲ. ಇಂಥ ಪ್ರಸಂಗಗಳಲ್ಲಿ 'ಗುಪ್ತ ಸಂಘಟನ'ಗಳ ಹೊರ್ತು ಪಾರತಂತ್ರ್ಯದೊಳಗಿಂದ ಪಾರಾಗಲಿಕ್ಕೆ ಅನ್ಯ ಮಾರ್ಗವೇ ಇಲ್ಲ. ಯಾವಾಗ ನಿಜ ಸಂಗತಿಯನ್ನು

ಪ್ರತಿಪಾದಿಸಲು ಆತಂಕವಾಗಿರುತ್ತದೆಯೋ, ಯಾವಾಗ ಪವಿತ್ರ ಕಾರ್ಯ ವನ್ನಾರಂಭಿಸುವದು ಕೂಡ ಅಪರಾಧವಾಗಿರುತ್ತದೋ, ಸ್ವದೇಶವೆಂಬುದು ಯಾವಾಗ ಒಂದು ಬಹು ದೊಡ್ಡ ಸೆರೆಮನೆಯಾಗಿರುತ್ತದೋ, ಆಗ ಆ ಸೆರೆ ಮನೆಯೊಳಗಿಂದ ಪಾರಾಗಿ, ಸ್ವಾತಂತ್ರ್ಯದ ಪವಿತ್ರ ವಾತಾವರಣದೊಳಗೆ ಉಸಿರಾಡಿಸುವ ಈಶ್ವರೀ ಹಕ್ಕನ್ನು ಸಂಪಾದಿಸುವ ಸಲುವಾಗಿ ನಮ್ಮಂಥ ಸೆರೆಯಾಳುಗಳಿಗೆ 'ಗುಪ್ತ ಸಂಘಟನ'ದ ಒಂದೇ ದಾರಿಯು ತೆರವಿರುತ್ತದೆ. ನಾವು 'ಗುಪ್ತ ಸಮಿತಿಗಳನ್ನು ಮಾಡಿ, ಗುಪ್ತ ಸಂಘಟನಗಳನ್ನು ಮಾಡಿ ಸಮಯ ಸಾಧಿಸಿದೊಡನೆಯೇ ಆ ಸೆರೆಮನೆಯ ಕಿಡಕಿಗಳನ್ನು ಕಿತ್ತು ಬರುವೆವು ಅವುಗಳ ಕಬ್ಬಿಣ ಸಳಿಗಳನ್ನು ತುಂಡು ತುಂಡು ಮಾಡುವೆವು. ಆದರ ಕದಗಳನ್ನು ಒದಿಕೆಯಿಂದ ಮುರಿದು ಬಿಡುವೆವು; ಮತ್ತು ಆ ಸೆರೆ ಮನೆಯ ರಕ್ಷಕರ ಎದೆಯ ಮೇಲೆ ಕುಣಿಕುಣಿಯುತ್ತ ನಾವು ಬೈಲು ಪ್ರದೇಶಕ್ಕೆ ಒರುವೆವು; ಹಾಗು ನಾವು ಸ್ವತಂತ್ರರಾಗುವೆವು'

ಎಲ್ಲಿ ಸತ್ಯಪ್ರತಿಪಾದನವನ್ನು ಅಥವಾ ಸತ್ತೆಯು ಕಟ್ಟು ಮಾಡಿ ನಿಲ್ಲಿಸಿರುವದಿಲ್ಲವೋ ಅಲ್ಲಿ ಮಾತ್ರ ಗುಪ್ತ ಸಮಿತಿ ಮತ್ತುಗುಪ್ತ ಸಂಘಟನಗಳು ಅಪರಾಧಗಳಾಗುವವು. 'ಆದರೆ ಎಲ್ಲಿ ಸತ್ಯಪ್ರತಿಪಾದನಕ್ಕೆ ಅಥವಾ ಬಲುಮೆಯ ಮೂಲಕ ಕಟ್ಟು ಮಾಡಲಾಗಿದೆಯೋ ಅಲ್ಲಿ ಗುಪ್ತ ಸಂಘಟನಗಳು ಪವಿತ್ರತಮವೇ ಆಗಿರುತ್ತವೆ. ಅಲ್ಲಲ್ಲ, ಸತ್ಯಪ್ರತಿಪಾದನಕ್ಕೆ ಅದೊಂದೇ ಮಾರ್ಗವಿರುತ್ತದೇ.' ಗುಪ್ತ ಸಮಿತಿಗಳ ಆಧಾರವನ್ನು ಯುರೋಪದೊಳಗಿನ ಬಹುತರ ಎಲ್ಲ ಸ್ವಾತಂತ್ರ್ಯೋನ್ಮುಖ ರಾಷ್ಟ್ರಗಳೂ ತಕ್ಕೊಂಡಿರುತ್ತವೆ. ಆ ಗುಪ್ತಸಮಿತಿಗಳಮೂಲಕ ಬಹುಜನ ಸಮಾಜಕ್ಕೆ ಸ್ವಾತಂತ್ರ್ಯದ ಶಿಕ್ಷಣವನ್ನು ಬಹುಸುಲಭವಾಗಿ ಕೊಡಲಿಕ್ಕೆ ಬರುತ್ತದೆ. ವೃತ್ತ ಪತ್ರಗಳಲ್ಲಿ ಪ್ರಕಟವಾಗಿ ಬರೆದು ಇಲ್ಲವೆ ಸಾರ್ವಜನಿಕಸಭೆಗಳಲ್ಲಿ ಸಂಭಾಷಣ ಮಾಡಿ ಪರಕೀಯರನ್ನು ಹೊರದಬ್ಬುವ ಪ್ರಯತ್ನ ಮಾಡುವದು ಶಕ್ಯವಿರುತ್ತದೆ; ಆದರೆ ತರುಣರು, ಸಾಮಾನ್ಯ ವರ್ಗದವರು ಇವರುಗಳ ಗ್ರಾಹಕ ಶಕ್ತಿಯು ಹೆಚ್ಚು ಸೂಕ್ಷ್ಮವಾಗಿರದ್ದರಿಂದ ಅವರಿಗೆ ವೃತ್ತಪತ್ರ ಮತ್ತು ಸಾರ್ವಜನಿಕ ಸಭೆಗಳ ಸಂಭಾಷಣ ಇವುಗಳಲ್ಲಿ ಅಡಗಿರುವ ಅರ್ಥವನ್ನು ಗ್ರಹಿಸಿಕೊಳ್ಳಲಾಗವದಿಲ್ಲ. ಆದರೆ ಗುಪ್ತ ಸಂಘಟನಗಳ ಪ್ರಥಮ ಲಾಭವೆಂತೆಂದರೆ, ಗುಪ್ತ ಸಭೆಗಳನ್ನು ಕೂಡಿಸಿ ಅವುಗಳಲ್ಲಿ ಸ್ವಾತಂತ್ರ್ಯದ ಶಿಕ್ಷಣವನ್ನು ಸ್ಪಷ್ಟ ಹಾಗು ಚನ್ನಾಗಿ

ಕೊಡಲಿಕ್ಕೆ ಬರುತ್ತದೆ. ಅದು ಜನರಿಗೆ ಕೂಡಲೆ ತಿಳಿಯುತ್ತದೆ; ಮತ್ತು ಪರಕೀಯ ಸರಕಾರಕ್ಕೆ ಅವುಗಳನ್ನು ದಬ್ಬುವದಶಕ್ಯವಾಗುತ್ತದೆ.

'ಈ ಬಗೆಯಾಗಿ ನೀವು ತರುಣರಿಗೆ ಯಾವದು ನಿಜವಿರುವದೋ ಅದನ್ನು ಸ್ಪಷ್ಟವಾಗಿ ತಿಳಿಹೇಳಿರಿ. ಯಾವ ಸಂಗತಿಯನ್ನೂ ಅವರಿಂದ ಬಚ್ಚಿಡಬೇಡಿರಿ. ಅವರುಗಳನ್ನು ನಿರ್ಜೀವ ಯಂತ್ರಗಳಂತೆ ಉಪಯೋಗಿಸದೆ, ಜೀವಿತ ಮತ್ತು ಚೈತನ್ಯಪೂರ್ಣ ಮನುಷ್ಯರಂತೆ ಅವರನ್ನು ಆದರಪೂರ್ವಕ ನಡೆಸಿಕೊಳ್ಳಿರಿ; ಅಂದರೆ ಅವರಲ್ಲೆಷ್ಟು ತೇಜಸ್ಸಿದೆ? ಎಂಬದು ನಿಮಗೆ ತಿಳಿದು ಬಂದೀತು.' ಎಂದು ಮ್ಯಾಝಿನಿ ಹೇಳಿರುತ್ತಾನೆ. ಪರಕೀಯ ಸರಕಾರದವರಿಂದ ಗುಪ್ತ ಸಂಘಟನೆಗಳ ಪ್ರಸಾರವನ್ನು ದಬ್ಬುವದು ತೀರ ಅಶಕ್ಯವಾಗುತ್ತದೆ; ಇಷ್ಟೇ ಅಲ್ಲ, ಯಾವುದೊಂದು ಗುಪ್ತ ಸಮಿತಿಯನ್ನು ಬೈಲಿಗೆಳೆದರೆ ಅದರಿಂದ ಪರಕೀಯ ಸರಕಾರದ್ದೇ ಹಾನಿಯಾಗುವದು ಗುಪ್ತಸಂಘಟನೆಗಳ ಸ್ಫೋಟವು ಜ್ವಾಲಾಮುಖಿಗಳ ಸ್ಫೋಟದಂತೆ ಭಯಂಕರವಾಗಿರುತ್ತದೆ ಅದು ಗುಪ್ತವಾಗಿರುವ ವರೆಗೇ ಪರಕೀಯರ ಜೀವಿತವು ಸುರಕ್ಷಿತವಾಗಿರುತ್ತದೆ; ಆದರೆ ಅದು ಸ್ಫೋಟವಾದೊಡನೆಯೇ ಅದರೊಳಗಿನ ತಪ್ತರಸದಿಂದ ಪರವಶರಾದ ಜನರ ಮೇಲೆ ಚೈತನ್ಯದ ಒಹು ದೊಡ್ಡ ತೆರೆಯು ಹಬ್ಬುತ್ತದೆ. ಎಲ್ಲಿ ಎಂದೂ ಇದ್ದಿಲ್ಲವೋ ಅಂಥಲ್ಲಿ ಕೂಡ ಗುಪ್ತ ಸಮಿತಿಗಳುದ್ಭವಿಸುತ್ತವೆ ಮತ್ತು ವಿಶೇಷವಾಗಿ ಅವುಗಳ ಯೋಗಗಳಿಂದ ಪರಕೀಯರ ಧೈರ್ಯವು ಛಿನ್ನವಿಚ್ಛಿನ್ನವಾಗಿ ಹೋಗುತ್ತದೆ. ಕಾಲಿಟ್ಟಲ್ಲಿ ಗವಿಯಿದೆಯೋ ಹೇಗೆಂಬ ಅಂಜಿಕೆಯು ಅವರಿಗೆ ಉಂಟಾಗಿ ಅವರ ಗಾಳಿಯು ಕೆಡುತ್ತದೆ; ಮತ್ತು ಎಲ್ಲಾದ್ಯರದರೊಂದು ಫಟಾಕಿ ಹಾರಿದೊಡನೆ, ಬಾಂಬಿನ ಸ್ಫೋಟವೇ ಆದಂತೆ ಅವರಿಗೆ ಭಾಸವಾಗುತ್ತದೆ. ಅವರ ಅಧಿಕಾರಿಗಳು ಜೀವದ ಆಶೆಗೆಂದು ತಮ್ಮ ಚಾಕರಿಗಳನ್ನು ಬಿಟ್ಟುಬಿಡಬೇಕಾಗುವದು ಈ ಬಗೆಯಾಗಿ ಎಲ್ಲೆಡೆಯಲ್ಲೂ ಭಯವುಂಟಾಗುತ್ತದೆ; ಮತ್ತು 'ಬಿಕ್ಕೆ ಬೇಡ, ಆದರೆ ನಾಯಿ ಕರೆದುಕೋ' ಎಂಬಂತೆ ಪರಕೀಯರ ಫಜೀತಿಯಾಗುತ್ತದೆ ಇವಲ್ಲದೆ ಬೇರೆ ಲಾಭವಾಗುವದೆಂತೆಂದರೆ ತೀರ ಸ್ವಲ್ಪ ಶಕ್ತಿಯಿಂದ ಗುಪ್ತಸಮಿತಿಗಳ ಮೂಲಕ ಪರಕೀಯ ಸರಕಾರವನ್ನು ಗೊಂದಲಕ್ಕೀಡು ಮಾಡಲಿಕ್ಕೆ ಬರುತ್ತದೆ. ಮ್ಯಾಝಿನಿಯು ಅನ್ನುತ್ತಾನೆ-'ಅವರು ನೂರು ಜನರಿದ್ದರು; ಆದರೆ ಅಷ್ಟೇ ಜನರು ಯುರೋಪದ ಸಿಂಹಾಸನಗಳನ್ನು, ಸಾಮ್ರಾಜ್ಯಗಳನ್ನು, ಅಜ್ಞಾ

ಪತ್ರಿಕ, ಸೆರೆಮನೆ,-ಗಲ್ಲು ಮುಂತಾದ ಎಲ್ಲ ರಕ್ಕಸರನ್ನು ಥರಥರನೆ ನಡುಗಿಸಿ ಬಿಟ್ಟಿದ್ದರು.'

ಮೂರನೇ ಲಾಭವೆಂದರೆ, ಯುದ್ಧದ ಸಿದ್ಧತೆ ಮಾಡಲು ಅನುವು ದೊರೆಯುತ್ತದೆ. ಆ ಕೆಲಸವನ್ನು ಪ್ರಕಟವಾಗಿ ಮಾಡುವದು ತೀರ ಅಶಕ್ಯವು. ಅಂಥ ಆ ಅಶಕ್ಯ ಕಾರ್ಯವನ್ನು ಮ್ಯಾಝಿನಿಯು ತನ್ನ ಗುಪ್ತಸಂಘಟನಗಳಿಂದ ಶಕ್ಯಮಾಡಿ ತೋರಿಸಿದನು. ಸಂಘಶಕ್ತಿಯಿಂದ ಎಲ್ಲ ಬೇತುಗಳನ್ನು ಸಿದ್ಧಗೊಳಿಸಲಿಕ್ಕೆ ಬರುತ್ತದೆ; ಹಾಗು ಎಲ್ಲ ಜನರಿಗೂ ಒಂದೇ ದಾರಿ, ಒಂದೇ ಗುರಿ ಮತ್ತು ಒಂದೇ ಉದ್ದಿಷ್ಟಗಳನ್ನು ದೊರಕಿಸಿ ಕೊಡಲಿಕ್ಕೆ ಶಕ್ಯವಾಗುತ್ತದೆ. ಇಂಥ ಹಲವು ಲಾಭಗಳ ಬಗ್ಗೆ ಯೋಚಿಸಿ ಮ್ಯಾಝಿನಿಯು 'ತರುಣ ಇಟಲಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ಈ ಲೇಖದಲ್ಲಿ ಮ್ಯಾಝಿನಿಯ ರಾಜಕೀಯ ಮತಗಳನ್ನಷ್ಟೇ ಶೃಂಖಲಾಬದ್ಧಗೊಳಿಸುವ ಸಂಕಲ್ಪವಿರುವದರಿಂದ 'ತರುಣ ಇಟಲಿ' ಸಂಸ್ಥೆಯ ಇತಿಹಾಸದ ಕಡೆಗೆ ಹೊರಳುವದು ಇಷ್ಟವಾಗಿರುವದಿಲ್ಲ. ಆ ಸಂಸ್ಥೆಯು ಇಟಲೀ ದೇಶದಲ್ಲಿ ಏನೇನು ಮಾಡಿತು? ಅಥವಾ ಇಡೀ ಯುರೋಪದ ಪ್ರತಿಯೊಂದು ದೇಶದ ಮೇಲೆ ಆದರ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ಪರಿಣಾಮಗಳೆಂತು ಘಟಿಸುತ್ತ ನಡೆದವು? ಈ ಅತ್ಯಂತ ಮಹತ್ವದ ವಿಷಯವನ್ನು ಬದಿಗಿರಿಸಬೇಕಾಗಿದೆ. ಸಾಧಾರಣ ಕಲ್ಪನೆ ಬರಲಿಕ್ಕೆಂದು 'ತರುಣ ಇಟಲಿ'ಯ ಉಪದೇಶದಿಂದಲೇ ಇಟಲಿಯ ಸ್ವಾತಂತ್ರ್ಯಕ್ಕಾಗಿ ಬಡಿದಾಡಿದ ಹೇರಳ ದೇಶವೀರರ ಶಿಕ್ಷಣವು 'ತರುಣ ಇಟಲಿ'ಯಲ್ಲೇ ಆಯಿತೆಂದು ಹೇಳಿದರೆ ಸಾಕು.

'ತರುಣ ಇಟಲಿ'ಯು ನಮ್ಮ ದೇಶದೊಳಗಿನ ಭಿನ್ನ ಭಿನ್ನ ಪಂಥಗಳನ್ನು ಮುರಿದು ಬಿಟ್ಟು ಸ್ವದೇಶವನ್ನು ಏಕತ್ರ ಮಾಡಿತು. ಆ ಮೊದಲು ಇಟಲಿಯ ಐಕ್ಯದ ಬಗ್ಗೆ ಜನರು ನಗುತ್ತಿದ್ದರು. ಇಟಲಿಯ ರಾಷ್ಟ್ರೈಕ್ಯವೆಂದರೆ ಮನೋರಾಜ್ಯವೆಂದು ಎಲ್ಲ ಮುಖಂಡರೂ ಅನ್ನುತ್ತಿದ್ದರು; ಆದರೆ ತರುಣ ಇಟಲಿಯು ನಮ್ಮ ದೇಶದಲ್ಲಿ ಹೊಸ ಮನ್ವಂತರವನ್ನುಂಟು ಮಾಡಲಿಕ್ಕೆ ಪ್ರಾರಂಭಿಸಿತು.' ತರುಣ ಇಟಲಿಯು ಯುಗಾಂತರ ಮಾಡುವ ಕಾರ್ಯವನ್ನು ಹೇಗೆ ಸಿದ್ಧಗೊಳಿಸಿತೆಂಬದರ ವಿವರಣಕ್ಕೋಸುಗ ಆದರೊಳಗಿನ ಶ್ರಮವಿಭಾಗವನ್ನು ಕುರಿತು ಪ್ರತ್ ಪ್ರತ್ಯೇಕವಾಗಿ ವಿವೇಚಿಸಬೇಕಾಗುವದು. ತರುಣ ಇಟಲಿಯು ಸಹಾಯ ಪಡೆಯಲಿಕ್ಕೆಂದು ಇಬ್ಬಗೆಯ ಕಾರ್ಯ

ಕ್ರಮದ ಯೋಜನೆ ಮಾಡುತ್ತದೆ. ಶಿಕ್ಷಣ ಮತ್ತು ಯುದ್ಧ. ಶಿಕ್ಷಣವು ಯುದ್ಧಕ್ಕೆ ಸಹಾಯವಾಗುವದು; ಹಾಗು ಯುದ್ಧವು ಶಿಕ್ಷಣಕ್ಕೆ ನೆರವಾಗುವದು. ಹೀಗೆ ಇಬ್ಬಗೆಯ ಕಾರ್ಯಕ್ರಮದ ಬಗ್ಗೆ ವರ್ಗಶಃ ವಿವರಿಸಿದರೆ ಮ್ಯಾಝಿನಿಯು ತನ್ನ ವಿಶಾಲ ಕಾರ್ಯವನ್ನು ಹೇಗೆ ಸಿದ್ಧಗೊಳಿಸಿಕೊಂಡನು ಮತ್ತು ಸಾಧಿಸಿದನು ಎಂಬದು ಸ್ಪಷ್ಟವಾದೀತು.

ಮ್ಯಾಝಿನಿಯು ಇಟಲಿಗೆ ಮೊಟ್ಟ ಮೊದಲು ಯಾವ ಶಿಕ್ಷಣ ಕೊಟ್ಟನೆಂಬದನ್ನು ನಿರೀಕ್ಷಿಸಿದರೆ ಆ ಮಹಾತ್ಮನ ವಿಚಾರಗಳೆಷ್ಟು ಪ್ರಗಲ್ಭ ಮತ್ತು ಪವಿತ್ರಗಳಿದ್ದವೆಂಬದು ಸಹಜವಾಗಿ ಕಂಡು ಬರುವದು. ಈ ಮೊದಲು ಹೇಳಿರುವದೇನಂದರೆ ಮ್ಯಾಝಿನಿಯ ಇಡೀ ರಾಜಕಾರಣವು ನೀತಿಯ ನೆಲಗಟ್ಟಿನ ಮೇಲೆ ಕಟ್ಟಲ್ಪಟ್ಟಿರುವದೆಂದು. 'ತಮ್ಮ ಎದುರಿಗೆ ಯಾವ ಕಾರ್ಯವಿರುವದೋ ಅದು ಸಣ್ಣಪುಟ್ಟ ಕಾರ್ಯವಲ್ಲ. ದೇವರು ಯಾವ ಕಾರ್ಯವನ್ನು ಮಾಡಿರುತ್ತಾನೋ ನಾವೂ ಅದನ್ನೇ ಮಾಡುತ್ತಿರುವೆವು. ನಾವು ಜನತಾನಿರ್ಮಿತಿಯ ಕೆಲಸ ಕೈಕೊಂಡಿದ್ದೇವೆ.' ನಾವು ಸ್ವರಾಜ್ಯವನ್ನುಂಟು ಮಾಡುತ್ತಿರುವೆವು.' ಇದಕ್ಕಿಂತ ದಿವ್ಯತರವಾದ ಕರ್ತವ್ಯವಿನ್ನಾವುದಿದ್ದೀತು? ಪರಮಾತ್ಮನು ತೀರ ಸ್ಪಷ್ಟವಾಗಿ ಅನುಜ್ಞೆಯ ಮೂಲಕ ತಿಳಿಸಿರುವದೇನಂದರೆ, 'ಇಟಲಿ ಇದೊಂದು ಸ್ವತಂತ್ರ ದೇಶವಿರುತ್ತದೆ. ಸಮುದ್ರದ ಮತ್ತು ಪರ್ವತಗಳ ಗೆರೆಗಳನ್ನು ತನ್ನ ದಿವ್ಯ ಕೈಬೆರಳಿನಿಂದ ಗುರ್ತಿಸಿ, ದೇವರು ಇಟಲಿ ದೇಶವನ್ನು ಇಟಾಲಿಯನ್ನರಿಗಾಗಿ ಕೊಟ್ಟಿರುತ್ತಾನೆ.' ಆದ್ದರಿಂದ ಇಟಾಲಿಯನ್ನರ ಪ್ರಥಮ ಕರ್ತವ್ಯವೆಂದರೆ, ಆ ಈಶ್ವರೀ ಆಜ್ಞೆಯಮೇರೆಗೆ ಇಟಲಿಯನ್ನು ಸ್ವತಂತ್ರಗೊಳಿಸುವುದಾಗಿದೆ. 'ನವಯುವಕರೇ, ಸ್ವದೇಶವು ದೇವರು ನಿಮಗಿತ್ತ ಮನೆಯಾಗಿದೆ. ಈ ಮನೆಯಲ್ಲಿದ್ದು ನೀವು ಆತನ ಆಶ್ರಯದಲ್ಲಿ ಬೆಳೆಯಬೇಕು; ಮತ್ತು ಬೆಳೆಯುತ್ತ ಬೆಳೆಯುತ್ತ ಕೊನೆಗೆ ಮನುಷ್ಯಜಾತಿಯೊಡನೆ ಅಂತಿಮ ಸ್ವರೂಪಕ್ಕೆ ತಲುಪಬೇಕೆಂದು ಅವನ ಅಪೇಕ್ಷೆ ಇರುತ್ತದೆ.'

ಈ ನಿಸರ್ಗಸಿದ್ಧ ಗೃಹವು ಇಟಾಲಿಯನ್ನರು ಬೆಳೆಯಲಿಕ್ಕೆ ಆಶ್ರಯಸ್ಥಾನವೆಂದು ಕೊಡಲ್ಪಟ್ಟಿದ್ದು, ಇದನ್ನು ಪರಕೀಯರೊಂದು ಸೆರೆಮನೆಯನ್ನಾಗಿ ಮಾಡಿಬಿಟ್ಟಿರುತ್ತಾರೆ. ಆದಕ್ಕೆಂದೇ ಇಟಲಿಯ ಪುತ್ರರ ಮೊದಲ ಗೆಲಸವೆಂದರೆ, ಸ್ವದೇಶವನ್ನು ಸ್ವತಂತ್ರಗೊಳಿಸುವದೇ ಆಗಿದೆ. ಮ್ಯಾಝಿ

ನಿಯು ತನ್ನ ಗುಪ್ತ ಸಂಸ್ಥೆಯ ದ್ವಾರಾ ಇದೇ ತತ್ತ್ವದ ಶಿಕ್ಷಣವನ್ನು ಮೊಟ್ಟ ಮೊದಲಿಗೆ ಕೊಟ್ಟನು. 'ಎಲ್ಲಕ್ಕೂ ಮೊದಲು ಸ್ವಾತಂತ್ರ್ಯ ದೊರೆಕಿಸ ಲಿಕ್ಕೆ ಬೇಕು; ದಾಸ್ಯವಿಮೋಚನವಾಗಲಿಕ್ಕೆ ಬೇಕು; ಅಂದರೆ ಆ ಮೇಲೆ ಇನ್ನುಳಿದ ಕಾರ್ಯಗಳೆಲ್ಲ ಸಹಜವಾಗಿ ಆದಾವು. ಏಳಿರಿ, ಆಲ್ಪ್ಸ ಪರ್ವತದ ಕಡೆಗೆ ಧಾವಿಸಿರಿ. ಆಸ್ಟ್ರಿಯದೊಡನೆ ಕಾದಿರಿ.' ಈ ಬಗೆಯ ಸ್ಪಷ್ಟರೀತಿಯಿಂದ ಇಟಲಿಯ ತರುಣರಲ್ಲಿ ಸ್ವಾತಂತ್ರ್ಯದ ಚೈತನ್ಯವುಂಟಾದ್ದರಿಂದ ಮ್ಯಾಝಿನಿಗಿಂತ ಮೊದಲು ಯಾವ ಹೊಲಸು ಮತಗಳು ಪ್ರಚಲಿತವಾಗಿದ್ದವೋ ಅವುಗಳೆಲ್ಲ ಒಮ್ಮೆಲೆ ನಾಶ ಹೊಂದಿದವು. 'ಇಂಥ ಕರ ರದ್ದಾಗಲೇಬೇಕು; ಇಂಥ ಹಕ್ಕು ದೊರೆಯಲೇ ಬೇಕು;' ಎಂದೆನ್ನುವ ಪಂಥವು ನಿರ್ಮಾಲ್ಯದಂತಾಯಿತು. ಯಾಕಂದರೆ 'ಇನ್ನು ನಮಗೆ ಅನೇಕ ಹಕ್ಕುಗಳು ಬೇಕಾಗಿರದೆ, ಒಂದೇ ಹಕ್ಕು ಬೇಕಾಗಿದೆ; ಮತ್ತು ಆ ಹಕ್ಕೆಂದರೆ ಪೂರ್ಣ ಸ್ವಾತಂತ್ರ್ಯವು; ದಾಸ್ಯವಿಮೋಚನವು-ಇದೇ ಆಗಿದೆ. ಹಾಗು ಈ ಸ್ವಾತಂತ್ರ್ಯವು ಲಾಭದಾಯಕವಿದೆ ಎಂದಿಷ್ಟೇ ಅಲ್ಲ; ಅದರೆ ಅದನ್ನು ಪಡೆಯುವದು ದೇಶವೀರರ ಕರ್ತವ್ಯವಾಗಿರುತ್ತದೆಂದು ದೊರೆಕಿಸಲೇಬೇಕು.'

'ಇಟಲಿಯಲ್ಲಿ ರೊಟ್ಟಿಯು ಅಗ್ಗವಾಗಿದೆ ಇಲ್ಲವೆ ತುಟ್ಟಿಯಾಗಿದೆ ಎಂಬದು ಮುಖ್ಯ ಪ್ರಶ್ನೆಯಾಗಿಲ್ಲ. ಆ ರೊಟ್ಟಿಯ ಮೇಲೆ ಪಾರತಂತ್ರ್ಯದ ಮುದ್ರೆಯಿದೆಯೋ ಇಲ್ಲವೋ ಎಂಬದೇ ಮುಖ್ಯವಾಗಿದೆ.' ಆಸ್ಟ್ರಿಯವು ಎಷ್ಟೇ ಹಕ್ಕುಗಳನ್ನಿತ್ತಿದ್ದರೂ ಕೂಡ ಇಟಲಿಯ ಜನರು ಪೂರ್ಣ ಸ್ವಾತಂತ್ರ್ಯ ದೊರೆಕಿಸದೆ ಬಿಡುತ್ತಿದ್ದಿಲ್ಲ. ಮ್ಯಾಝಿನಿಯು ಸ್ವಾತಂತ್ರ್ಯಕ್ಕೆ ಕರ್ತವ್ಯದ ಸ್ವರೂಪ ಕೊಟ್ಟದ್ದರಿಂದ ಆಸ್ಟ್ರೀಯಾ ದೇಶವು ಒಮ್ಮೆಲೆ ಹತವೀರ್ಯವಾಯಿತು. ಅದುವರೆಗೆ ತುಸ ಪ್ರಖರ ಚಟುವಟಿಕೆಗಳಾಗಹತ್ತಿದ ಕೂಡಲೆ ಆಸ್ಟ್ರಿಯವು ಚಿಕ್ಕಪುಟ್ಟ ಹಕ್ಕುಗಳನ್ನು ಕೊಟ್ಟು ಯುಕ್ತಿಯಿಂದ ಆ ಚಟವಟಿಕೆಗಳನ್ನು ಮುಂದಗೊಳಿಸಿಬಿಡುತ್ತಿತ್ತು; ಆದರೆ ಈಗ 'ಹಕ್ಕುಗಳಪ್ರಶ್ನೆಯಿರದೆ, ಹಕ್ಕಿನದಿರುತ್ತದೆ.' ಅಲ್ಲದೆ ತಾವು ಸ್ವಾತಂತ್ರ್ಯಸಂಪಾದನೆಯ ಸಲುವಾಗಿ ಒಂದು ಅತ್ಯಂತ ಪವಿತ್ರ ಕರ್ತವ್ಯವೆಸಗುತ್ತಿರುವೆವೆಂದು ನವಯುವಕರ ಭಾವನೆಯಾದುದರಿಂದ ಅವರುಗಳ ಉದಾತ್ತವೃತ್ತಿಯು ಜಾಗ್ರತವಾಯಿತು. ದೇಶವೀರರು ಸೆರೆಮನೆಯಲ್ಲೂ ರಾಷ್ಟ್ರಗೀತೆಗಳನ್ನು ಹಾಡಹತ್ತಿದರು; ಮತ್ತು 'ಯಾವನು ಸ್ವದೇಶಕ್ಕಾಗಿ ಸಾಯುತ್ತಾನೋ ಆತನು ಚಿರಂಜೀವಿಯಾಗು

ತ್ತಾನೆ' ಎಂಬ ಮಹಾಮಂತ್ರದ ಜಯಘೋಷವನ್ನು ಗಲ್ಲಿಗೇರುತ್ತಿರುವಾಗ ಅವರು ಮಾಡಹತ್ತಿದರು. 'ತರುಣರನ್ನು ಕರ್ತವ್ಯಬುದ್ಧಿಯಿಂದ ಹುರಿದುಂಬಿಸಿರಿ, ಧ್ಯೇಯದ ಭಕ್ತಿಯನ್ನು ಕಲಿಸಿರಿ; ಅಂದರೆ ಅವರಲ್ಲೆಷ್ಟು ಬಲವಿದೆ ಎಂಬದು ನಿಮಗೆ ಕಂಡು ಬಂದೀತು.' ಎಂದು ಮ್ಯಾಝಿನಿಯು ನುಡಿಯುತ್ತಿದ್ದುದು ಚೇಷ್ಟೆಗಾಗಿರಲಿಲ್ಲ.

ಇಟಲಿಯಲ್ಲಿ ೧೮೩೧ರಿಂದ ೧೮೭೦ರ ವರೆಗೆ ಪ್ರತಿವರ್ಷ ಎಲ್ಲಾದರೊಂದು ಬಂಡು ಎದ್ದೇಳುತ್ತಿತ್ತು. ಅಷ್ಟು ಜಿಗುಟನಿಂದ ಅಲ್ಲಿಯ ಸ್ವದೇಶಭಕ್ತರು ಕೊನೆಗೆ ವಿಜಯ ಸಂಪಾದಿಸಿದರು. ಬಂಡುಗಳಲ್ಲಿ ಅಲ್ಲಿಯ ಹೆಣ್ಣುಮಕ್ಕಳು ಎಂಥೆಂಥ ಪರಾಕ್ರಮಗೈದರೋ ಅವು ಇತರ ನಿರ್ಜೀವ ದೇಶಗಳೊಳಗಿನ ಮೀಸೆ ಹೊತ್ತಗಂಡಸರಿಗೆ ಕೂಡ ಲಜ್ಜೆಯನ್ನುಂಟುಮಾಡುವವು! ರೋಮದಲ್ಲಿ ೧೮೪೮ನೇ ವರ್ಷ ಫ್ರೆಂಚರೊಡನೆ ಯುದ್ಧ ನಡೆದಾಗ 'ಗ್ಯಾರೀಬಾಲ್ಡಿಯು ರಣದಲ್ಲಿ ಧುಮುಕಿ ಮೈ ಮೇಲೆ ಎಚ್ಚರಿಲ್ಲದೆ ಕಾದುತ್ತಿದ್ದನು. ಅಷ್ಟರಲ್ಲಿ ಆತನಿಗೆ ಸಿನೇಟನಿಂದ ಕರೆ ಬಂದ ಕಾರಣ ಆತನು ಅತ್ತ ಹೋದನು. ಆತನನ್ನು ಕಂಡ ಕೂಡಲೆ ಸಿನೇಟಿನವರು ಪ್ರಚಂಡವಾಗಿ ಚಪ್ಪಾಳೆ ಬಾರಿಸಿದರು. ಗ್ಯಾರೀಬಾಲ್ಡಿಗೆ ಮೊದಲು ಆ ಜಯನಾದದ ಕಾರಣವು ತಿಳಿಯಲಿಲ್ಲ. ಅಷ್ಟರಲ್ಲಿ ಆತನು ಸ್ವಂತದ ಕಡೆಗೆ ದೃಷ್ಟಿಸಿದನು. ಆಗ ಆತನ ಪ್ರತಿಯೊಂದು ದೇಹದ ಭಾಗದೊಳಗಿಂದ ನೆತ್ತರದ ಧಾರೆಗಳು ಹರಿಯುತ್ತಿವೆ. ಶಸ್ತ್ರಾಘಾತಗಳಿಂದಲೂ, ಜಾರ ಗುಂಡುಗಳ ಏಟುಗಳಿಂದಲೂ ಮೈಮೇಲಿನ ವಸ್ತ್ರಗಳೆಲ್ಲ ಜಾಳಿಗೆಯಂತಾಗಿ ಬಿಟ್ಟಿವೆ;' ಮತ್ತು ಕೈಯೊಳಗಿನ ಖಡ್ಗವು ಪ್ರಹಾರ ಮಾಡಿ ಮಾಡುತ್ತ ಹೆಚ್ಚಾಗಿ ಬಗ್ಗಿದ್ದರಿಂದ ಅದು ಒರೆಯಲ್ಲಿ ಅರ್ಧಮರ್ಧ ಕೂಡ ಹೊಗಲೊಲ್ಲದಾಗಿದೆ.' ಅಂಥ ಆ ವಿಜಯಿ ಖಡ್ಗಕ್ಕೆ ಅನಂತ ಪ್ರಣಾಮಗಳು! ಎಲ್ಲಿಯವರೆಗೆ ಅಂಥದೊಂದಾದರೂ ಕತ್ತಿಯು ಜಗತ್ತಿನಲ್ಲಿ ಸ್ಥಿರವಾಗಿದೆಯೋ ಅವರೆಗೆ ಪರತಂತ್ರದೇಶಗಳು ಸ್ವತಂತ್ರವಾಗುವ ಆಶೆ ಧರಿಸಲಿಕ್ಕೆ ಅಡ್ಡಿಯಿಲ್ಲ!

ಮಿಲನದಲ್ಲಿ ಬಂಡು ಪ್ರಾರಂಭಿಸುವ ಮೊದಲು ಮುಂದಾಳುಗಳು 'ಸೀವೀಗ ಬಂಡನ್ನೆಬ್ಬಿಸಬೇಡಿರಿ. ನಿಮ್ಮ ಬಳಿಯಲ್ಲಿ ಶಸ್ತ್ರಾಸ್ತ್ರಗಳಿರುವದಿಲ್ಲ.' ಎಂದು ಹೇಳಲು, ಮರುದಿನವೇ ತರುಣರ ಗುಂಪು 'ಏಳಿರೇಳಿರಿ! ಕಲ್ಲು, ಕೊಡ್ಲಿ, ಕಂದ್ಲಿ ತಕ್ಕೊಳ್ಳಿರಿ. ಚಾಕು ಚೂರಿಗಳನ್ನು ತಕ್ಕೊಳ್ಳಿರಿ; ಹಾಗು ಮುಂದೆ ಸಾಗಿರಿ. ನಿಮ್ಮ ಬಳಿಯಲ್ಲಿ ಬೇರೆ ಶಸ್ತ್ರಾಸ್ತ್ರಗಳಿರದಿದ್ದರೂ ಕೋಲು,

ಬಡಿಗೆಗಳನ್ನಾದರೂ ಹಿಡಿದುಕೊಂಡು ಮುನ್ನುಗ್ಗಿರಿ: ಆಂದರೆ ಶಸ್ತ್ರಾಸ್ತ್ರಗಳು ತಾವಾಗಿ ನಿಮ್ಮೆಡೆಗೆ ಓಡಿ ಬಂದಾವು.' ಕೂಡಲೆ ಅವರೆಲ್ಲರೂ ಹುರಿದುಂಬಿ ಎದ್ದು ಆಸ್ಟ್ರಿಯನ್ನರ ಮೇಲೆ ನುಗ್ಗಿ ಅವರ ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡಿ ತಂದರು! ಮ್ಯಾಝಿನಿಯ ಗುಪ್ತ ಸಂಘಟನಗಳ ಶಿಸ್ತು ಉತ್ತಮವಿದ್ದುದ ಹೆಂಗಸರು-ಹುಡುಗರಿಗೆ ಕೂಡಅವುಗಳ ತತ್ತ್ವಗಳೆಲ್ಲ ಮನದಟ್ಟಾಗಿ ಹೋಗಿದ್ದವು. ಮಿಲನ ಮತ್ತು ವ್ಹೆನಿಸಗಳಲ್ಲಿ ರಾಜ್ಯಕ್ರಾಂತಿಯ ನಗಾರಿ ಹೊಡೆಯುತ್ತಲೆ, 'ಹೆಂಗಸರು ಬೀದಿಬೀದಿಗಳಲ್ಲಿ ಸಜ್ಜಾಗಿ ನಿಂತುಕೊಂಡರು. ಒಬ್ಬ ದಿನಹೋದ ವೃದ್ಧನು ಕುಂಟುತ್ತ ಕುಂಟುತ್ತ ಒಂದು ಹುಲ್ಲ ಹೊರೆಯನ್ನು ಹೊತ್ತುಕೊಂಡು ಸರಕಾರೀ ಛಾವಣಿಗೆ ಹೋದನು; ಹಾಗು ಆತನು ಅಲ್ಲಿ ಆ ಹೊರೆಗೆ ಬೆಂಕಿ ಹಚ್ಚಿ ಆ ಇಡೀ ಛಾವಣಿಯನ್ನು ಸುಟ್ಟು ಸೂರೆಗೊಂಡು ಹಿಂದಿರುಗಿದನು! ನವಯುವಕರು ತಮ್ಮ ಓದಿನ ಪುಸ್ತಕಗಳನ್ನು ಬಿಸುಟಿ ಹೊರಬಿದ್ದರು. ನವಯುವತಿಯರು ಫಂಡು ಕೂಡಿಸುವದಕ್ಕೆಂದು ಬೀದಿಬೀದಿಗಳಲ್ಲಿ ಅಂಡಲೆಯತೊಡಗಿದರು. ಅಡಿಗೆ-ನೀರಿನವರು ತಮ್ಮ ಸನ್ನಾಹಗಳೊಡನೆ ದಾರಿ-ದಾರಿಗಳಲ್ಲಿ ತಿರುಗಾಡಹತ್ತಿದರು; ಹಾಗು ಆಸ್ಟ್ರಿಯನ್ ಶಿಪಾಯಿಗಳು ಪಟ್ಟಣಗಳಲ್ಲಿ ಅಡ್ಡಾಡಹತ್ತುತ್ತಲೆ ಅವರುಗಳ ಮೇಲೆ ಟೇಬಲ್, ಸ್ಟೂಲು, ಕುರ್ಚಿ, ಒಡಕು ಹಂಚು, ಚೂರಿ, ಬಡಿಗೆಗಳು, ಕಲ್ಲು, ಕೆಂಪಗೆ ಕಾಸಿದ ಸಲಾಕಿ, ಕುದಿಯುವ ಎಣ್ಣೆ ಇವುಗಳ ವರ್ಷಣ ಮಾಡಹತ್ತಿದರು.' ಈ ಬಗೆಯ ಕೃತನಿಶ್ಚಯದಿಂದ ಇಟಲಿಯು ಕಾದಿತು. ಅನಂತ ಅಪಜಯಗಳಾದರೂ ಅದು ಕಾದಿತು! ಯಾಕಂದರೆ ಪ್ರತಿಯೊಂದು ಅಪಜಯವು ಜಯದ ಒಂದು ಮೆಟ್ಟಿಲಾಗಿದೆ, ಎಂದು 'ತರುಣ ಇಟಲಿ' ಯು ಅವರಿಗೆ ದೀಕ್ಷೆ ಕೊಟ್ಟಿತ್ತು. ೧೮೨೧ರಲ್ಲಿ ಸೋಲಾಯಿತು. ೧೮೩೧ ರಲ್ಲಿ ಸೋಲು ಬಂತು. ಮತ್ತೆ ೧೮೪೮ರಲ್ಲಿ ಸೋಲುಂಟಾಯಿತು. ಆದರೂ ಮ್ಯಾಝಿನಿ ಹೇಳಿದ 'ಮತ್ತೆ ಪ್ರಯತ್ನಿಸಿರಿ. ಯಶ ಇಲ್ಲವೆ ಅಪಯಶ ಇವುಗಳ ವಿಚಾರವಿರದೆ, ಕರ್ತವ್ಯತೆಯ ವಿಚಾರವಿರಬೇಕಾಗುತ್ತದೆ. ನಿಮ್ಮ ಪಕ್ಷಕ್ಕೆ ಪರಮಾತ್ಮನಿದ್ದಾನೆ. ಕೊನೆಗೆ ನಿಮಗೆ ಜಯ ದೊರೆಯಲೇಬೇಕು.'

ಆ ಮಹರ್ಷಿಯ ಉಪದೇಶದಂತೆ ಇಟಲಿಯು ಮತ್ತೆ ಪ್ರಯತ್ನ ಮಾಡಿತು; ಹಾಗು ಅದು ಸ್ವಾರ್ಥತ್ಯಾಗ, ಶೌರ್ಯ, ತೇಜ, ತತ್ತ್ವನಿಷ್ಠೆ ಮೊದಲಾದ ಸದ್ಗುಣಗಳಿಂದ ಯುಕ್ತವಾಗಿರುತ್ತದೆಂಬದನ್ನು ಕಂಡು ೧೮೫೯

ನೇ ವರ್ಷದಿಂದ ಪರಮಾತ್ಮನು ಆದರ ಶ್ರಮಕ್ಕೆ ಫಲವೀಯಹತ್ತಿದನು. ಸ್ವಾತಂತ್ರ್ಯದ ಆ ಉತ್ತಮ ಫಲಗಳು ತಿನ್ನಲು ದೊರೆಯುವದಕ್ಕೆಂದು ಇಟಲಿಯು ಏನು ಬೆಲೆಗೊಡಬೇಕಾಯಿತೋ ಅದನ್ನು ತರುಣ ಇಟಲಿಯ ಬೊಕ್ಕಸದಿಂದಲೇ ಕೊಡಲಾಯಿತು. ಈ ಬಗೆಯಾಗಿ ಮ್ಯಾಝಿನಿಯು ಸ್ವಾತಂತ್ರ್ಯದ ಶಿಕ್ಷಣವನ್ನು ಇಟಲಿಯ ತರುಣರಿಗೆ ಕೊಟ್ಟನು; ಆದರೆ ಬರೀ ಸ್ವಾತಂತ್ರ್ಯ ಪ್ರಾಪ್ತಿಯು ಕೆಲಸವೆಂದರೇನೂ ಅಂತಿಮ ಕಾರ್ಯವಲ್ಲ. ಏಕೆಂದರೆ 'ಎಲ್ಲಿಯವರೆಗೆ ಯುದ್ಧವು ಸಾಗಿರುವದೋ ಅಲ್ಲಿಯವರೆಗೆ ಜನರು ಏಕತ್ರರಾಗಿದ್ದರು. ಆದರೆ ಅದು ಕಟ್ಟಾಗುತ್ತಲೇ ಇಟಲಿ ದೇಶದೊಳಗಿನ ಬೇರೆ ಬೇರೆ ಪ್ರಾಂತಗಳಲ್ಲಿ ಜಗಳಗಳೆದ್ದವು.' ಆದ್ದರಿಂದ ಮ್ಯಾಝಿನಿಯು ಎರಡನೇ ತತ್ವವೆಂದರೆ 'ರಾಷ್ಟ್ರೈಕ್ಯ'ವಾಗಿದ್ದಿತು. ಇಟಲಿಯ ಭಿನ್ನ ಭಿನ್ನ ಪ್ರಾಂತಗಳಲ್ಲ ಮೊದಲಿನಿಂದಲೂ ಹೆಚ್ಚಾಗಿ ಜಗಳ ತಂಟೆಗಳೇಳುತ್ತಿದ್ದುದರಿಂದ ಅವು ಭಿನ್ನ ಭಿನ್ನ ದೇಶಗಳೇ ಆಗಿದ್ದವು. ಸಣ್ಣ ಸಣ್ಣ ಸಂಸ್ಥಾನಗಳು ಪರಸ್ಪರರೊಡನೆ ಅಖಂಡ ಕಾದುತ್ತಿದ್ದವು. ಪಟ್ಟಣಗಳು ಪರಸ್ಪರರೊಡನೆ ಜಗಳಾಡುತ್ತಿದ್ದವು. ಇಂಥ ಸ್ಥಿತಿಯಲ್ಲಿ ಇಟಲಿ ದೇಶವು ದೊರಕಿಸಿದ ಸ್ವಾತಂತ್ರ್ಯವನ್ನು ಸ್ಥಿರಗೊಳಿಸಲಿಕ್ಕೆ ಆದರಲ್ಲಿ ರಾಷ್ಟ್ರೈಕ್ಯವಾಗುವದು ಅತ್ಯವಶ್ಯವಾಗಿತ್ತು. ಅಲ್ಲಿ ಸಂಯುಕ್ತಸಂಸ್ಥಾನ ಪದ್ಧತಿಯನ್ನಿಟ್ಟರೆ ನಡೆಯುವಂತಿದ್ದಿಲ್ಲ. ವಿಭಕ್ತಸಂಸ್ಥಾನಗಳಿಂದ ಪ್ರಾಂತೀಯ ಅಭಿಮಾನವೆದ್ದು ಆ ರಾಷ್ಟ್ರಗಳಲ್ಲಿ ಏಕರೂಪತೆಯ ಇಲ್ಲದಂತಾಗಿ ಅದು ಪರಕೀಯರ ಬಲೆಯಲ್ಲಿ ಬೇಗನೆಸಿಗುವದು. ಅದ್ದರಿಂದ ಮ್ಯಾಝಿನಿಯ ಬಲವಂತದ ಹೇಳಿಕೆಯೇನಂದರೆ, ಇಟಲಿಯು ಪ್ರಾಂತಿಕ ಅಭಿಮಾನವನ್ನುತೊರೆದು ಇಡೀ ದೇಶವು ಏಕೀಕೃತವಾಗಬೇಕು. ಈ ಸಂಗತಿಯು ಮ್ಯಾಝಿನಿಗಿಂತ ಮುಂಚೆ ಅಲ್ಲಿ ಯಾರಿಗೂ ತಿಳಿದಿರಲಿಲ್ಲ. ಇಷ್ಟೇ ಅಲ್ಲ, ಈ ಬಗ್ಗೆ ಎಲ್ಲರೂ ಮ್ಯಾಝಿನಿಗೆ ನಗಹತ್ತಿದ್ದರು; ಆದರೆ ಆದರ ಕಡೆಗೆ ಲಕ್ಷ್ಯವೀಯದೆ ಆ ಭವಿಷ್ಯಜ್ಞನು 'ತರುಣ ಇಟಲಿ'ಯ ಮುಖಾಂತರ ಇಟಲಿಯ ರಾಷ್ಟ್ರೈಕ್ಯವಾಗಲೇ ಬೇಕು. ಯಾಕಂದರೆ ಐಕ್ಯದಹೊರತು ದೇಶತ್ವವಿಲ್ಲ, ಐಕ್ಯದ ವಿನಃ ಶಕ್ತಿಯಿಲ್ಲ. ಇಟಲಿಯ ಸುತ್ತಲೂ ಬಲಿಷ್ಠರ ರಾಜ್ಯಗಳು ಹಬ್ಬಿರುವದರಿಂದ ಸ್ವಾತಂತ್ರ್ಯವು ಸ್ಥಿರವಾಗುಳಿಯಬೇಕೆಂದೇ ಇಚ್ಛೆಯಿದ್ದರೆ, ಇಟಲಿಯು ಒಂದು ರಾಷ್ಟ್ರವಾಗಬೇಕು ಎಂದು ಉಪದೇಶಿಸಿದನು.

'ಯಾವ ಯಾವಾಗ ಯಾವದೊಂದು ಪ್ರಾಂತವು ಯುದ್ಧವನ್ನು ಪ್ರಾರಂಭಿಸುವದೋ ಆಗಾಗ ಆ ಯುದ್ಧವು ಇಟಲಿಯ ಹೆಸರಿನಿಂದಲೆ ಮಾಡ ಲಾದೀತು; ಮತ್ತು ಆ ಯುದ್ಧದ ನಿಶಾನಿಯು ಇಟಲಿಯ ಏಕರಾಷ್ಟ್ರೀಯ ನಿಶಾನಿಯಿದ್ದೀತು.'' ಇಡೀ ಇಟಲಿಯಲ್ಲಿ ಯಾವದು ತೀರ ಮನೋರಾಜ್ಯ ವೆಂದು ಪರಿಗಣಿಸಲ್ಪಡುತ್ತಿತ್ತೋ ಆ ಇಟಲಿಯ ರಾಷ್ಟ್ರೈಕ್ಯವು ಆ ಮಹಾತ್ಮಾ ಮ್ಯಾಝಿನಿಯ ದಿವ್ಯ ದೃಷ್ಟಿಗೆ ಸ್ವಾಮ್ಯೋನದ ಸೆರೆಮನೆಯೊಳಗಿಂದಲೇ ಕಾಣಿಸಿತು. ಆತನು ತನ್ನ ದೇಶಬಂಧುಗಳಿಗೆ ಆ ಸಂಗತಿಯನ್ನು ತಿಳಿಸಿದನು. ಯಾರಿಗೆ ಆತನ ಬಗ್ಗೆ ವಿಶ್ವಾಸವೆನಿಸಿತೋ ಅಂತಹರು ಆತನ ಬೆನ್ನ ಹತ್ತಿ ದರು; ಹಾಗು ಕೊನೆಗೆ ಕಠಿಣವಾದ ಮಾರ್ಗವನ್ನು ತುಳಿಯುತ್ತ ತುಳಿಯುತ್ತ ಆ ಮನೋರಾಜ್ಯವು ನಿಜವಾದುದನ್ನು ನೋಡುವ ಧನ್ಯತೆಯು ಅವರಿಗೆ ಲಭಿಸಿತು!

ಈ ಬಗೆಯಾಗಿ ಮೊದಲು ದಾಸ್ಯವಿಮೋಚನ ,ಆ ಮೇಲೆ ರಾಷ್ಟ್ರೈಕ್ಯ ಈ ಎರಡು ತತ್ತ್ವಗಳನ್ನು ಮ್ಯಾಝಿನಿಯು ಆಚರಿಸಿ ತೋರಿಸಿರುವನು; ಆದರೆ 'ತಮ್ಮ ಕಾರ್ಯ ಬರೀ ವಿಘಾತಕವಲ್ಲ; ತಾವು ನಾಶಗೊಳಿಸಿದ ನಂತರ ಆ ನಾಶದೊಳಗಿಂದಲೇ ಹೊಸ ಸೃಷ್ಟಿಯನ್ನು ನಿರ್ಮಿಸಬೇಕು' ಅಂಥ ಸೃಷ್ಟಿಯನ್ನು ನಿರ್ಮಿಸಲಿಕ್ಕೆ ಇಟಲಿಯ ಸುದೈವದಿಂದ ಯೋಗ್ಯತಮ ನಾದಂಥ ಸೃಷ್ಟಿಕರ್ತನೇ ಲಭಿಸಿದ್ದನೆಂಬ ಬಗ್ಗೆ ಸಂದೇಹವಿಲ್ಲ. ರಾಷ್ಟ್ರವು ಸ್ವತಂತ್ರವಾದ ಬಳಿಕ ಆದರೊಳಗಿನ ಬೇರೆ ಬೇರೆ ಪ್ರಾಂತಿಕ ಭೇದಗಳನ್ನು ಕುಗ್ಗಿಸಿ, ದ್ವೇಷಗಳನ್ನು ನಶಿಸಿ, ಅದು ಐಕ್ಯವಾಯಿತೆಂದರೆ, ಬಳಿಕ ಅಲ್ಲಿ ಆ ಸ್ವಾತಂತ್ರ್ಯ ಮತ್ತು ಆ ಏಕರಾಷ್ಟ್ರೀಯತ್ವವು ಸ್ಥಿರವುಳಿಯಲಿಕ್ಕೆ ಅಂತ ರ್ಗತ ಸ್ವಾತಂತ್ರ್ಯ ದೊರೆಯಬೇಕು. ಒತ್ತಾಯವೆಂದ ಕೂಡಲೆ ಅದು ಪರಕೀಯರದೇ ಇರಲಿ, ಸ್ವಕೀಯರದೇ ಇರಲಿ ಸದೈವ ತ್ಯಾಜ್ಯವಿರುತ್ತದೆ. ಅದು ಧಾರ್ಮಿಕವಿದ್ದರೂ ಅಷ್ಟೇ, ರಾಜಕೀಯವಿದ್ದರೂ ಅಷ್ಟೇ. ಆದುದರಿಂದ ರಾಷ್ಟ್ರದಲ್ಲಿ ವ್ಯಕ್ತಿಸ್ವಾತಂತ್ರ್ಯ, ಧರ್ಮಸ್ವಾತಂತ್ರ್ಯ ಮತ್ತು ಮತ ಸ್ವಾ ತಂತ್ರ್ಯ ಇವುಗಳು ಅತ್ಯವಶ್ಯ ಇರಬೇಕು; ಆದರೆ ಎಲ್ಲಿ ರಾಜ್ಯಸತ್ತೆಯಿರು ವದೋ ಅಲ್ಲಿ ಅಸಮಾನತೆಯು ಉಂಟಾಗಿಯೇ ಉಂಟಾಗುತ್ತದೆ. ಮಾನವ ರಲ್ಲಿ ಸದ್ಗುಣ ಮತ್ತು ಯೋಗ್ಯತೆ ಈ ಯೋಗದಿಂದ ಎಷ್ಟು ಭೇದಗಳಾಗಿರು ವವೋ ಅಷ್ಟೇ ಭೇದಗಳು ನ್ಯಾಯ ಮತ್ತು ಉನ್ನತಿ ಮೂಲಕ ಇರುತ್ತವೆ.

ಮಿಕ್ಕ ಎಲ್ಲ ಬಗೆಯ ಅಸಮತೆಯು ಅತ್ಯಂತ ಗರ್ಹಣೀಯವು. ಅದಕ್ಕೆಂದೇ ರಾಜಸತ್ತೆಯೂ ಗರ್ಹಣೀಯವಾಗಿದೆ. ಮ್ಯಾಝಿನಿಯ ಎಲ್ಲ ರಾಜಕಾರಣವು ಹೇಗೆ ನೀತಿಮತ್ತೆಗನುಸರಿಸಿ ಇದ್ದಿತೋ ಹಾಗೆಯೇ ಆತನ 'ಲೋಕಸತ್ತಾವಾದಿತ್ವ'ವೂ ನೀತಿಯ ಭದ್ರವಾದ ನೆಲೆಗಟ್ಟಿನ ಮೇಲೆ ನಿಂತುಕೊಂಡಿದ್ದಿತು; ಅಲ್ಲದೆ ಇಟಲಿಯಂಥ ದೇಶಕ್ಕೆ ಸ್ಥೈರ್ಯವನ್ನುಂಟು ಮಾಡಲಿಕ್ಕೆ ಲೋಕಸತ್ತೆಯ ಹೊರತು ಅನ್ಯ ರಾಜ್ಯಪದ್ಧತಿಯು ಶಕ್ಯವಾಗಿರಲಿಲ್ಲ. ಸ್ವಂತ ಮ್ಯಾಝಿನಿಯು ರಾಷ್ಟ್ರದ ಬಹುಮತಕ್ಕೆ ವಿರುದ್ಧವಾಗಿರಲಿಲ್ಲ. 'ರಾಷ್ಟ್ರೀಯ ಆಜ್ಞೆ'ಗೆ ನಾನು ಶಿರಸಾ ವಹಿಸುತ್ತೇನೆ; ಆದರೆ ನನಗೆ ಖಾತ್ರಿಯಿರುವದೇನಂದರೆ 'ಲೋಕಸತ್ತೆಯ ವಿನಃ ಅನ್ಯ ಎಲ್ಲ ರಾಜ್ಯಪದ್ಧತಿಗಳೂ ಅನ್ಯಾಯಮೂಲಕ ಮತ್ತು ಅನೀತಿಕಾರಕಗಳಾಗಿರುತ್ತವೆ.'

ಇಟಲಿಯಲ್ಲಿ ಹಲವು ಪ್ರಾಂತಗಳು, ಎಷ್ಟೋ ಸಂಸ್ಥಾನಗಳು ಹಾಗು ಅನಂತ ದುರಭಿಮಾನಗಳು ಕೂಡಿರುವದರಿಂದ, ಅವುಗಳಿಗೆಲ್ಲ ಸಮಾನ ಹಕ್ಕುಗಳನ್ನು ಕೊಡದ ಹೊರತು ಅವುಗಳ ಐಕ್ಯವು ಹೆಚ್ಚು ದಿನ ಉಳಿಯಲಾರದೆಂದು ಮ್ಯಾಝಿನಿಯ ಖಂಡಿತವಾದ ಅಭಿಪ್ರಾಯವಿತ್ತು. ಒಬ್ಬ ಸಂಸ್ಥಾನದ ಅಧಿಪತಿಯನ್ನು ರಾಜನನ್ನಾಗ ಮಾಡಿದ ಕೂಡಲೆ ಇನ್ನುಳಿದ ಸಂಸ್ಥಾನಗಳು ಅವನ ಅಧೀನದಲ್ಲಿರಲಿಕ್ಕೆ ಒಪ್ಪಲಿಚ್ಛಿಸವು. ಒಂದು ಪ್ರಾಂತದ ಆಡಳಿತವನ್ನು ಸಮ್ಮತಿಸಿದ ಕೂಡಲೆ ಬೇರೆ ಪ್ರಾಂತಗಳ ಜನರು ತಮ್ಮಗಳ ಸತ್ತೆಯನ್ನು ಆ ಪ್ರಾಂತದ ವಶದಲ್ಲಿ ಕೊಡಲಾರರು. ಇಂಥ ಸ್ಥಿತಿಯಲ್ಲಿ ಕಟ್ಟುನಿಟ್ಟಿನ ರಾಜ್ಯಪದ್ಧತಿಯೆಂದರೆ ಲೋಕಸತ್ತೆಯೇ ಅಹುದು. ಲೋಕಸತ್ತೆಯನ್ನು ಸ್ಥಾಪಿಸಿತೆಂದರೆ ಯಾರಿಗಾದರೂ ವಿಶಿಷ್ಟಾಧಿಕಾರ ಕೊಟ್ಟಂತೆ ಇಲ್ಲವೆ ಪಕ್ಷಪಾತ ಮಾಡಿದಂತಾಗಲಿಕ್ಕಿಲ್ಲ. ಯಾವ ವ್ಯಕ್ತಿಯು ಸ್ವಂತ ಹಾಗು ಸಾರ್ವಜನಿಕ ನಡವಳಿಕೆಯಲ್ಲಿ ಯೋಗ್ಯತಮವಾಗಿರುವದೋ ಅದು ಸರ್ವಾನುಮತದಿಂದ ಅಧಿಕೃತವೆಂದು ಎಣಿಸಲಾದೀತು; 'ಅಲ್ಲದೆ ಮನುಷ್ಯಜಾತಿಯ ಉತ್ಕ್ರಾಂತಿಯ ಪ್ರಕಾರನೋಡಿದರೆ ಜನತೆಯಯುಗವು ಪ್ರಾಪ್ತವಾಗಿದೆ. ರಾಜನೇ ದೇವರೆಂಬ ತತ್ತ್ವವೀಗ ಅಳಿದಿದೆ. ಅರಸನ ಇಲ್ಲವೆ ಪೋಪನ ಆತ್ತಾಯವಿನ್ನು ಮುಂದೆ ನಡೆಯಲಾರದು. ಯುರೋಪದಲ್ಲೆಲ್ಲ ಲೋಕಸತ್ತೆಯ ಕಡೆಗೇ ಪ್ರವೃತ್ತಿಯುಂಟಾಗಿದೆ.' ಆದುದರಿಂದ ಇಟಲಿಯು ಲೋಕಸತ್ತೆಯ ಯೋಜನೆಯನ್ನೇ ಮಾಡಬೇಕೆಂದು ಮ್ಯಾಝಿನಿ

ಯ ಅತ್ಯಾಗ್ರಹವಿದ್ದಿತು. 'ನೀವು ಲೋಕಸತ್ತೆಯನ್ನು ಸ್ಥಾಪಿಸಿದರೆ ಮಾತ್ರ ಕೆಲ ದಿನಗಳವರೆಗೆ ಶಾಂತತೆಯುಳಿದೀತು; ಆದರೆ ಅದಾದರೂ ಸ್ಥಿರವಾಗುಳಿಯಲಾರದು. ಮೊದಲಿನ ರಾಜ್ಯಕ್ರಾಂತಿ ಮುಗಿದ ಕೂಡಲೆ ಎರಡನೇ ರಾಜ್ಯಕ್ರಾಂತಿ ಪ್ರಾರಂಭವಾದೀತು.' ಎಂಬ ವಿಷಯದಲ್ಲಿ ಅವನು ಆಗಾಗ್ಗೆ ಸೂಚಿಸಬೇಕು; ಮತ್ತು ಆ ಭವಿಷ್ಯದ ಖಾತ್ರಿಯು ಬಹುಜನರ ನಿದರ್ಶನಕ್ಕೆ ತನ್ನ ಜೀವಮಾನದಲ್ಲುಂಟಾಗದಿದ್ದರೂ ಭವಿಷ್ಯತ್ಕಾಲದಲ್ಲಿ ಅದಾಗದಿರದೆಂದು ಆತನ ದೃಢವಿಶ್ವಾಸವಿದ್ದಿತು. ಅದಕ್ಕಾಗಿ 'ತರುಣ ಇಟಲಿ' ಯಲ್ಲಿ ಲೋಕಸತ್ತೆಯ ತತ್ವವು ಅಂಗೀಕೃತ ಮಾಡಲಾಗಿತ್ತು. ಈ ರೀತಿಯಿಂದ 'ದಾಸ್ಯ ವಿಮೋಚನ, ರಾಷ್ಟ್ರೈಕ್ಯ, ಸಮತೆ ಮತ್ತು ಲೋಕಸತ್ತೆ' ಈ ತತ್ತ್ವ ಚತುಷ್ಟಯದ ಶಿಕ್ಷಣವು 'ತರುಣ ಇಟಲಿ'ಯೊಳಗೆ ಕೊಡಲ್ಪಡುತ್ತಿತ್ತು. ಈ ತತ್ತ್ವಗಳನ್ನು ಇಟಲಿಯ ಅಂತಃಕರಣದ ಮೇಲೆ ಮ್ಯಾಝಿನಿಯು ಚೆನ್ನಾಗಿಕೊರೆದಿಟ್ಟಿರುತ್ತಾನೆ. ಅವುಗಳ ವಿಜಯವು ಬಹುಮಟ್ಟಿಗೆ ಆಗಿಯೇ ಆಗಿದೆ; ಮತ್ತು ಯಾವ ಸ್ವಲ್ಪ ವಿಜಯವಾಗತಕ್ಕದ್ದು ಉಳಿದಿದೆಯೋ ಅದು ಭವಿಷ್ಯತ್ಕಾಲದಲ್ಲಿ ಆಗಿಯೇ ಆಗುವದೆಂಬದರಲ್ಲಿ ಯಾರಿಗೂ ಸಂದೇಹವಿಲ್ಲ.

ಇದು ತರಣ ಇಟಲಿಯ 'ಶಿಕ್ಷಣ'ದ ವಿಸ್ತಾರವಾಯಿತು. ಇನ್ನು 'ಯುದ್ಧಕಾಂಡ'ದ ವಿವೇಚನವನ್ನೂ ತುಸ ಮಾಡಬೇಕಾಗಿದೆ. ಆಸ್ಟ್ರೀಯರೊಡನೆ ಯುದ್ಧಮಾಡದ ಹೊರತು ತಮ್ಮ ಸ್ವರಾಜ್ಯವು ಮರಳಿ ದೊರೆಯಲಾರದೆ'ಂಬ ಬಗ್ಗೆ ಮ್ಯಾಝಿನಿಗೆ ಪೂರ್ಣ ಖಾತ್ರಿಯಿದ್ದಿತು. 'ಕಾಳಗದ ಹೊರತು ಸ್ವಾತಂತ್ರ್ಯ ದೊರಕದು. ಭಯಂಕರ, ಕಠಿಣ, ನಿಕರದ, ದೀರ್ಘ ಯುದ್ಧ ಮಾಡದ ವಿನಃ ನಮಗೆ ಅನ್ಯ ಮಾರ್ಗವಿಲ್ಲ.' ಇಂಥ ಪ್ರಸಂಗದಲ್ಲಿ ಕಾಳಗ ಮಾಡುವದು ಪಾಪವಲ್ಲ. 'ಯಾವಾಗ ಯಾವದೊಂದು ಸತ್ಯದ ಜಯಜಯಕಾರ ಮಾಡಬೇಕಾಗಿರುತ್ತದೆಯೋ ಇಲ್ಲವೆ ಯಾವದೊಂದು ಅಸತ್ಯವನ್ನು ವಿನಾಶಗೊಳಿಸದೇಕಾಗಿರುತ್ತದೆಯೋ ಆಗ ಯುದ್ಧವು ಪವಿತ್ರವಾಗಿರುತ್ತದೆ.' ಆ ಯುದ್ಧವನ್ನು ಇಟಲಿಯೊಳಗೆ ಮಾಡುವದು ಬಹು ಕಠಿಣವಾಗಿದ್ದಿತು. ಅದರ ಬಳಿಯಲ್ಲಿ ಯುದ್ಧೋಪಯುಕ್ತಗಳಾದ ಶಸ್ತ್ರಾಸ್ತ್ರಗಳಿದ್ದಿಲ್ಲ; ಅಥವಾ ಅವುಗಳನ್ನು ಸಂಗ್ರಹಿಸುವ ಪರವಾನಿಗೆ ಇರಲಿಲ್ಲ. ಅಂಥ ಪರಿಸ್ಥಿತಿಯಲ್ಲಿ ಇಟಲಿಯ ಹೊರತು ಮತ್ತಾವುದಾದರೂ ರಾಷ್ಟ್ರ ಸಿಕ್ಕಿದ್ದರೆ ಅದು ಸಂಪೂರ್ಣ ಅಂಜಿ, ಯುದ್ಧದ ಹೆಸರು ಕೂಡ ಎತ್ತುತ್ತಿರ

ಲಿಲ್ಲ; ಆದರೆ ಇಟಲಿಯು ಅಂಥ ಸಂಕಟಗಳಿಗೆ ಬಿಕ್ಕೆ ಹಾಕುವಂತಹದಿರು ಲಿಲ್ಲ. ಅದರೊಳಗಿನ ಶೂರ ಮತ್ತು ನವಯುವಕರು ಸ್ಪೇನ, ಅಮೇರಿಕೆ, ಜರ್ಮನಿ, ಪೋಲಂಡ ಮೊದಲಾದ ದೇಶಗಳಿಗೆ ಹೋಗಿ, ಅಲ್ಲಿ ಯುದ್ಧ ಕಲೆಯ ಜ್ಞಾನವನ್ನು ಸಂಪಾದಿಸಿದರು. ಗ್ಯಾರೀಬಾಲ್ಡೀ, ರಿಸೀಓಟಿ ಮುಂತಾದ 'ತರುಣ ಇಟಲಿ'ಯ ಸಭಾಸದರು ಇದೇ ರೀತಿಯಿಂದ ಯುದ್ಧ ಕಲೆಯಲ್ಲಿ ಪಾರಂಗತರಾದರು.

ಆಗ ಎರಡನೇ ಬೇತು ರಚಿಸಲ್ಪಟ್ಟಿತ್ತೇನಂದರೆ ಇಟಲಿಯು ಸೀಮೆಯ ಹೊರಗೆ, ಆದರೆ ಸಮಿಸಮೀಪದ ಜರ್ಮನಿ ಮುಂತಾದ ದೇಶಗಳೊಳಗಿಂದ ಶಸ್ತ್ರಾಸ್ತ್ರಗಳನ್ನು ಕೊಂಡು ಅವುಗಳ ಸಂಗ್ರಹವನ್ನಲ್ಲೇ ಮಾಡುವದು; ಮತ್ತು ಸ್ವದೇಶದಲ್ಲಿ ಗೊಂದಲವೆದ್ದ ಕೂಡಲೆ ಸೀಮೆಯನ್ನುಲ್ಲಂಘಿಸಿ ಸ್ವದೇಶ ದೊಳಗೆ ನುಗ್ಗುವ ಪ್ರಯತ್ನವನ್ನು ಸಿದ್ಧಿಸುವದು. ಒಮ್ಮೆ ಸೀಮೆಯ ನ್ನುಲ್ಲಂಘಿಸಿತೆಂದರೆ ಬಳಿಕ ಪರದೇಶಗಳೊಳಗಿಂದ ಶಸ್ತ್ರಗಳನ್ನು ದೇಶದಲ್ಲಿ ತರುವ ದಾರಿಯು ಸುಗಮವಾಗಿ ಬಿಟ್ಟೀತು. ಮ್ಯಾಝಿನಿಯ ಸ್ವಾವಾಹ್ನ ಯದ ಮೇಲಿನ ದಾಳಿಯಲ್ಲಿ ಇದೇ ರೀತಿಯನ್ನು ಅನುಸರಿಸಲಾಗಿತ್ತು. ಆ ರೀತಿಯು ಅತ್ಯುತ್ತಮವಾಗಿತ್ತು. ಈ ಹಂಚಿಕೆಯಿಂದ ಒಮ್ಮೆ ಸ್ವಾತಂತ್ರ್ಯ ಯುದ್ಧದ ನಿಶಾನಿಯು ನಿಲ್ಲಿಸಲಾಯಿತೆಂದರೆ, ಹೊರಗಿನಿಂದ ಶಸ್ತ್ರಾಸ್ತ್ರ ಗಳನ್ನು ಸುಲಭವಾಗಿ ಪೂರೈಸಿಕೊಳ್ಳಲು ಬರುತ್ತದೆ.

ಮೂರನೇ ಹಂಚಿಕೆಯೇನಂದರೆ ಸ್ವದೇಶದಲ್ಲಿ ಗುಪ್ತರೀತಿಯಿಂದ ಶಸ್ತ್ರಾಸ್ತ್ರಗಳನ್ನು ನಿರ್ಮಿಸುವ ಅನೇಕ ಸಣ್ಣ ಸಣ್ಣ ಗುಪ್ತಕಾರಖಾನಗಳನ್ನು ದೂರ ದೂರದಲ್ಲಿ ಪ್ರಾರಂಭಿಸಬೇಕು. ನಾಲ್ಕನೇ ಯುಕ್ತಿಯೆಂದರೆ ಗುಪ್ತ ಮಂಡಳದವರು ಬೇರೆ ದೇಶಗಳಲ್ಲಿ ಶಸ್ತ್ರಾಸ್ತ್ರಗಳನ್ನು ಕೊಂಡು ಅವು ಗಳನ್ನು ಸಾಮಾನುಗಳ ಹಡಗಗಳೊಳಗಿಂದ ಬಚ್ಚಿಟ್ಟು ಕಳಿಸಬೇಕು. ಹಲವು ಸಾರೆ ಅದು ಬಹಿರಂಗವಾಗುತ್ತಿತ್ತು. ಒಮ್ಮೆ ಒಬ್ಬ ಫ್ರೆಂಚ ಮಿತ್ರನು ಮಾರ್ಸೆಲಸದಿಂದ ಇಟಲಿಗೆ ಶಸ್ತ್ರಗಳನ್ನೊಯ್ಯುವ ಹೊಣೆಯನ್ನು ಹೊತ್ತುಕೊಂಡನು. ಅವನು ಶಸ್ತ್ರಗಳನ್ನು ತುಂಬಿಕೊಂಡು ತನ್ನ ಹಡಗ ವನ್ನು ಬಿಟ್ಟನು; ಆದರೆ ಆ ಹಡಗ ಇಟಲಿಯ ದಂಡೆಗೆ ತಲುಪುವದಕ್ಕೆ ಮುಂಚೆಯೇ ಅವನ ಮೇಲೆ ಪಾಳತಿಯಿಟ್ಟು, ಆತನನ್ನು ಸೆರೆಹಿಡಿಯಲಾ ಯಿತು. ಆ ಹಡಗವನ್ನು ಜಪ್ತಿ ಮಾಡಿ ಅದರೊಳಗಿನ ಎಲ್ಲ ಮಾಲನ್ನೂ

ಕಸಿದುಕೊಳ್ಳಲಾಯಿತು; ಆದರೆ ಸ್ವಾತಂತ್ರ್ಯಯುದ್ಧದಂತಹ ಮಹತ್ಕಾರ್ಯದಲ್ಲಿ ಸಂಕಟಗಳು ಉಂಟಾಗತಕ್ಕವೇ. ಅವುಗಳಿಗೆ ಅಂಜುವ ಹೇಡಿ ಜನರು ಪರದಾಸ್ಯದಲ್ಲೇ ಕೊಳೆಯುತ್ತಾರೆ; ಮತ್ತು ಆ ಸಂಕಟ ಪರಂಪರೆಗಳಿಗೆ ಎದೆಗೊಟ್ಟು ವೀರಪುರುಷರು ಸ್ವಾತಂತ್ರ್ಯವನ್ನು ಸಂಪಾದಿಸುತ್ತಾರೆ.

ಈ ಎಲ್ಲ ಉಪಾಯಗಳಿಗಿಂತ ಸೈನ್ಯವನ್ನು ಒಡಕೊಳ್ಳುವ ಮುಖ್ಯ ಉಪಾಯವನ್ನು ಮ್ಯಾಝಿನಿಯೂ ಆ ಕಾಲದ ಇಟಾಲಿಯನ್ ದೇಶಭಕ್ತರೂ ಯೋಜಿಸಿದರು. ಆಸ್ಟ್ರಿಯದ ದಂಡಿನಲ್ಲೆಷ್ಟು ಮಂದಿ ಇಟಾಲಿಯನ್ ಸೈನಿಕರಿದ್ದರೋ ಅವರ ಮೇಲಿನ ಎಲ್ಲ ಅಮಲದಾರರಿಗೆ 'ತರುಣ ಇಟಲಿ'ಯ ದೀಕ್ಷೆ ಕೊಡಲ್ಪಟ್ಟಿತ್ತು. ಪರಕೀಯ ಸರಕಾರಗಳಿಗೆ ತದ್ದೇಶೀಯ ಸೈನ್ಯವಿಡದ ಹೊರತು ಯಾವ ದೇಶದ ಮೇಲೂ ರಾಜ್ಯ ನಡೆಸಲು ಶಕ್ಯವಿರುವದಿಲ್ಲ. ಇಂಥ ಸ್ಥಿತಿಯಲ್ಲಿ ದಂಡಾಳುಗಳನ್ನು ಸ್ವದೇಶದ ಕಡೆಗೆ ಒಡಕೊಳ್ಳದೊರೆತರೆ, ಆದರಿಂದ ಇಬ್ಬಗೆಯ ಲಾಭವಾಗುತ್ತದೆ. ಅದರಿಂದ ಪರಕೀಯರ ನಂಬಿಗೆಯು ಹಾರಿ ಹೋಗುತ್ತದೆ; ಮತ್ತು ಆಯತ ಸಮಯದಲ್ಲಿ ಅವರು ಗಾಬರಿಗೊಳಗಾಗುತ್ತಾರೆ; ಅಲ್ಲದೆ ಮತ್ತೊಂದೆಂದರೆ ಮೊದಲು ಶಿಕ್ಷಣ ಪಡೆದ ಹಾಗು ಸಶಸ್ತ್ರರಾದ ದಂಡಾಳುಗಳು ರಾಷ್ಟ್ರೀಯ ಪಕ್ಷಕ್ಕೆ ಅನಾಯಾಸ ದೊರಕುತ್ತಾರೆ

'ದಂಡಾಳುಗಳನ್ನು ಒಡಕೊಳ್ಳಬೇಕಾದರೆ ಅವರ ಮೇಲಿನ ಅಧಿರಾರಿಗಳನ್ನಷ್ಟು ಒಡಕೊಂಡರೆ ತೀರಿತು. ಅವರೂ ತೀರ ಮೇಲಿನ ಅಧಿಕಾರಿಗಳಲ್ಲ; ಎರಡನೇ ವರ್ಗದ ಸುಭೇದಾದ, ಮೇಜರ ಮುಂತಾದ ಅಧಿಕಾರಿಗಳನ್ನೊಡಕೊಂಡರಾಯಿತು.' ದಂಡಾಳುಗಳನ್ನೊಡಕೊಳ್ಳುವ ಕೆಲಸವು ರಶಿಯಾದಲ್ಲಿ ಬಹು ಬಿಕ್ಕಟ್ಟಿನದಾಗುತ್ತದೆ. ಏಕೆಂದರೆ ಅಲ್ಲಿ ಎರಡೂ ಪಕ್ಷಗಳು ಒಂದೇ ಜಾತಿಯ ಮತ್ತು ಒಂದೇ ದೇಶದವಾಗಿವೆ; ಆದರೆ ಇಟಲಿಯಲ್ಲಿ ಮಾತ್ರ ಈ ಕೆಲಸವನ್ನು ಬಹು ಸುಲಭವಾಗಿ ನೆರವೇರಿಸಲಾಯಿತು. ಯಾಕಂದರೆ ಪರಕೀಯರ ಬಗ್ಗೆ ತಿರಸ್ಕಾರ ಹಾಗು ಸ್ವಕೀಯರ ಬಗ್ಗೆ ಲೋಭ ಇವುಗಳು ಮನುಷ್ಯ ಮಾತ್ರರಲ್ಲಿ ನಿಸರ್ಗತಃ ಸ್ಥಿರವಾಗಿರುತ್ತವೆ. ಅವಕ್ಕೆ ಚೇತನೆ ಕೊಡುವಂತಹ ಮ್ಯಾಝಿನಿ ಮಾತ್ರ ಬೇಕು. ಇರಲಿ. ಸಾರಾಂಶವೇನಂದರೆ, ಸ್ವಾತಂತ್ರ್ಯಯುದ್ಧದ ಸಿದ್ಧತೆಯನ್ನು ಈ ರೀತಿ ಮಾಡಬೇಕೆಂದು ಮ್ಯಾಝಿನಿಯ ಕಾರ್ಯಕ್ರಮವಿದ್ದಿತು; ಆದರೆ ಈ ಸಿದ್ಧತೆಯು

ಸಾಧಾರಣವಾಯಿತೆಂದರೆ ಯಾವ ಯುದ್ಧ ಮಾಡಬೇಕಾಗುವದೋ ಅದರಲ್ಲಿ ದೊಡ್ಡ ದೊಡ್ಡ ಕಾಳಗಗಳನ್ನು ಮಾಡುವದಿರದೆ, 'ಗನೀಮೀ ಕಾವಾ= ಹೊಂಚು ಯುದ್ಧ'ದ್ದಾಗಿರಬೇಕು.

ವ್ಯಾಝಿನಿಗೆ ಈ ಹೊಂಚು ಯುದ್ಧದಲ್ಲಿ ಹೆಚ್ಚು ನಂಬಿಗೆಯಿದ್ದಿತು. ಗ್ಯಾರೀಬಾಲ್ಡಿಯೂ ಹೊಂಚು ಯುದ್ಧದಲ್ಲಿ ಪಾರಂಗತನಿದ್ದನು. ಪರಕೀಯರ ಆಕ್ರಮಣವನ್ನು ಬಿಸುಟಿ ದಿಡುವ ಇಚ್ಛೆಯು ಯಾರಿಗಿದ್ದೀತೋ ಅವರು ಆ ರಾಷ್ಟ್ರಗಳು ಹೊಂಚು ಯುದ್ಧದ ಪದ್ಧತಿಯನ್ನೇ ಆಶ್ರಯಿಸಬೇಕು.' ವೈರಿಗಳ ದಂಡಾಳುಗಳಂತೆ. ತಮ್ಮ ಕಡೆಯ ಸೈನಿಕರಿಗೆ ಕವಾಯತು ಬರದಿರುವ ಕೊರತೆಯು ಹೊಂಚು ಯುದ್ಧದಲ್ಲಿ ತುಂಬಿ ಬರುವದು; ಅಲ್ಲದೆ ಲೋಕಪಕ್ಷದ ಸಣ್ಣ ಪುಟ್ಟ ಗುಂಪುಗಳನ್ನು ನಾಲ್ಕು ಕಡೆಗೆ ಹಬ್ಬಿಸಿ ಬಿಟ್ಟೆವೆಂದರೆ ಹಗೆಗಳ ವಿಸ್ತೀರ್ಣವಾದ ದಂಡನ್ನು ದೇಶಭಕ್ತರ ಅತ್ಯಲ್ಪ ಸೈನ್ಯದಿಂದ ತಡೆಗಟ್ಟಲಾಗುತ್ತದೆ. ಹೊಂಚು ಯುದ್ಧಕ್ಕೆ ಯುದ್ಧ ಕಲೆಯ ಹೆಚ್ಚಿನ ಜ್ಞಾನ ಬೇಕಾಗದ್ದರಿಂದ ದೃಢನಿಶ್ಚಯದ ಹಾಗು ಕಟ್ಟುನಿಟ್ಟಿನ ದೇಶಭಕ್ತರು ಮನಸ್ಸು ಮಾಡಿದೊಡನೆಯೇ ಆ ಹೊಂಚು ಯುದ್ಧವನ್ನು ಪ್ರಾರಂಭಿಸಲಿಕ್ಕೆ ಬರುತ್ತದೆ; ಮತ್ತು ಆ ಯುದ್ಧವು ಎಷ್ಟೆಷ್ಟು ಮುಂದುವರಿಯುತ್ತ ಹೋಗುವದೋ, ಅಷ್ಟಷ್ಟು ಆ ದೇಶಭಕ್ತರಿಗೆ ಆ ಹೊಂಚು ಯುದ್ಧದ ಜ್ಞಾನವೂ ಅನುಭವವೂ ದೊರಕ ಹತ್ತುತ್ತವೆ. 'ಹೊಂಚು ಯುದ್ಧಗಳಿಂದ ದೊಡ್ಡ ಅಪಜಯದ ಅಂಜಿಕೆಯಿಲ್ಲ' ಹೊಂಚು ಯುದ್ಧದ ಸೈನ್ಯವು ಆಳವಿನೊಳಗಿನದಿದ್ದುದರಿಂದ ಅದು ಗಾಳಿಯಂತೆ ನಾಲ್ಕು ಕಡೆಗೆ ಸಂಚರಿಸಹತ್ತುತ್ತವೆ; ಮತ್ತು ವೈರಿಗಳ ಮಂದವಾದ ದಂಡು ಹಿಂದಿನಿಂದ ಮುಂದೆ, ಮುಂದಿನಿಂದ ಎಡತಾಕ ಹತ್ತುತ್ತದೆ. ಇದಲ್ಲದೆ ಪರಕೀಯರಿಗೆ ಹೊಂಚು ಯುದ್ಧವನ್ನು ಎಂದಿಗೂ ಆಶ್ರಯಿಸಲಿಕ್ಕೆ ಬರುವದಿಲ್ಲ; ಏಕೆಂದರ ಅವರಿಗೆ ಈ ನಾಡಿನ ಜ್ಞಾನವಿರುವದಿಲ್ಲ; ಹಾಗು ಅವರಿಗೆ ಈ ದೇಶದ ಜನರು ಅನುಕೂಲವಾಗಿರುವದಿಲ್ಲ. ಒಂವು ವೇಳೆ ಅವರು ಹೊಂಚು ಯುದ್ಧವನ್ನೇ ಮಾಡಬೇಕೆಂದು ನಿರ್ಧರಿಸಿ ದಂಡಿನ ಸಣ್ಣ-ಸಣ್ಣ ಭಾಗಗಳನ್ನು ಮಾಡಿದರೆಂದರೆ, ಅವರುಗಳ ನಾಶವು ಆರೆಕ್ಷಣದಲ್ಲೇ ಆಗಿಬಿಡುವದೆಂದೆನ್ನಬಹುದು. ಈ ಮೇರೆಗೆ ಪರತಂತ್ರದೇಶಗಳಿಗೆ ಹೊಂಚು ಯುದ್ಧವು ಅತ್ಯಂತ ಲಾಭದಾಯಕವಿರುತ್ತದೆಂಬದನ್ನರಿತು

ಪ್ಯಾಝುನಿಯು ಈ ಯುದ್ಧದ ಯೋಜನೆ ಮಾಡಿದನು. ಈ ಯುದ್ಧ ಪದ್ಧತಿಯ ಬಗ್ಗೆ ಆತನು ಎಷ್ಟು ಆಳವಾಗಿ ಅಭ್ಯಾಸಿಸಿದ್ದನೆಂಬದು ಮುಂದಿನ ಲೇಖದಿಂದ ತಿಳಿದೀತು. ಈ ರೀತಿ ಇಡಿ ದೇಶದಲ್ಲೆಲ್ಲ ಕಾಳಗ ಪ್ರಾರಂಭವಾಯಿತೆಂದರೆ ಆಸ್ಟ್ರಿಯಕ್ಕೆ ಇಟಾಲಿಯಲ್ಲಿರುವದು ಅಶಕ್ಯವಾಗುವಂತೆ ಮ್ಯಾಝಿನಿಯ ಯುದ್ಧ ಸಿದ್ಧತೆಯಿತ್ತು.

ಸಾರಾಂಶವೇನಂದರೆ, ಮೊಟ್ಟ ಮೊದಲು ರಾಜಕಾರಣಕ್ಕೆ ನೀತಿಯಿದೆ ಮತ್ತು ತಮ್ಮ ಸ್ವಾತಂತ್ರ್ಯವನ್ನು ದೊರಕಿಸುವದು ನ್ಯಾಯವಾಗಿದೆ ಎಂದು ಇಟಾಲಿಯ ಮನಃಪ್ರವೃತ್ತಿಯಾದ ಬಳಿಕ ಹೊಂಚು ಯುದ್ಧವನ್ನು ಪ್ರಾರಂಭಿಸಬೇಕೆಂಬ ಕಾರ್ಯಕ್ರಮವಿದ್ದಿತು. ಮೇಲಿನ ವಿವೇಚನದ ಮಥಿತಾರ್ಥವನ್ನು ಈ ಬಗೆಯಾಗಿ ತೆಗೆಯಬಹುದು:—ರಾಜಕಾರಣವು ನೀತಿಗೆ ಸರಿಯಾಗಿರಬೇಕು. ರಾಜಕಾರಣದೊಳಗಿನ ಮೊದಲ ಕರ್ತವ್ಯವು ಸ್ವಾತಂತ್ರ್ಯ ಸಂಪಾದನೆ. ಯಾವ ರಾಷ್ಟ್ರದಲ್ಲಿ ಈ ಸತ್ಯಪ್ರತಿಪಾದನಕ್ಕೆ ಅಡ್ಡಿಯಾಗಿರುವದೋ ಅಲ್ಲಿಯವರು ಗುಪ್ತಸಮಿತಿಯನ್ನು ಸ್ಥಾಪಿಸಬೇಕು. ಆ ಗುಪ್ತ ಸಂಘಗಳ ಕರ್ತವ್ಯವು ಇಬ್ಬಗೆಯಾಗಿರಬೇಕು. ಮೊದಲನೇ ಕರ್ತವ್ಯವೆಂದರೆ ಮಾನಸಿಕ ಶಿಕ್ಷಣವು. ಆ ಮಾನಸಿಕ ಶಿಕ್ಷಣದಿಂದ ಗುಪ್ತ ಮತ್ತು ಡಾಣಾಡಂಗುರವಾಗಿ ನಾಲ್ಕು ತತ್ವಗಳ ಶಿಕ್ಷಣವನ್ನು ಪ್ರಾಮುಖ್ಯವಾಗಿ ಕೊಡಬೇಕು. ಸ್ವಾತಂತ್ರ್ಯ, ಸಮತೆ, ರಾಷ್ಟ್ರೈಕ್ಯ ಮತ್ತು ಲೋಕಸತ್ತೆ ಇವೇ ಆ ನಾಲ್ಕು ತತ್ವಗಳು. ಎರಡನೇ ಕರ್ತವ್ಯವೇನಂದರೆ, ಈ ನಾಲ್ಕು ತತ್ವಗಳ ವಿಜಯಕ್ಕಾಗಿ ಧರ್ಮಯುದ್ಧ ಮಾಡುವ ಸಿದ್ಧತೆ ಮಾಡುವದು. ಅದನ್ನು ಹೊಂಚು ಯುದ್ಧ ಪದ್ಧತಿಯಿಂದಲೇ ಮಾಡತಕ್ಕದ್ದು. ಮಾನಸಿಕ ಶಿಕ್ಷಣದಿಂದ ಯುದ್ಧಕ್ಕೆ ಸಹಾಯವುಂಟಾದೀತು; ಮತ್ತು ಯುದ್ಧದಿಂದ ಮಾನಸಿಕ ಶಿಕ್ಷಣ ಹೆಚ್ಚೀತು. ಈಬಗೆಯಾಗಿ ಸ್ವದೇಶವು ಪರಕೀಯರ ಕೈಯೊಳಗಿಂದ ಮುಕ್ತವಾದ ಬಳಿಕ ಆ ದೇಶವು ತನ್ನ ನಡವಳಿಕೆಯನ್ನು ಮಾನವ ಜಾತಿಯ ಉನ್ನತಿಗೂ ಪ್ರಗಮನಕ್ಕೂ ಸಹಾಯವಾಗಿರಿಸಬೇಕು. ತನಗೆ ಸಾಮರ್ಥ್ಯವುಂಟಾದ ಕೂಡಲೆ ಬೇರೆ ಸಂತ್ರಸ್ತ ರಾಷ್ಟ್ರಗಳನ್ನು ಮುಕ್ತಗೊಳಿಸಬೇಕು; ಮತ್ತು ಎಲ್ಲ ಮನುಷ್ಯಜಾತಿಯೂ ಸ್ವತಂತ್ರವಾಗಿ ಸಮತೆಯಿಂದ ಹಾಗು ಬಂಧು ಭಾವದಿಂದ ಈಶ್ವರೀ ಆಜ್ಞೆಯನ್ನು ಪಾಲಿಸಬೇಕು.

ಮ್ಯಾಝಿನಿಯ ರಾಜಕೀಯ ಮತಗಳ ಮತ್ತು ಕಾರ್ಯಕ್ರಮದ ಮಥಿತಾರ್ಥವು ಹೀಗಿದೆ. ಈ ನಕಾಶವನ್ನು ಮುಂದಿಟ್ಟುಕೊಂಡೇ ಇಟಲಿಯು ಸ್ವತಂತ್ರವಾಯಿತು. ಈ ಕಾರ್ಯದಲ್ಲಿ ಮ್ಯಾಝಿನಿಯಂತೆಯೇ ಅನೇಕ ದೊಡ್ಡ ಜನರು ದಿವ್ಯ ಕೃತಿಗಳನ್ನು ಮಾಡಿರುತ್ತಾರೆ. ಅವರೆಲ್ಲರೂ ಇತಿಹಾಸಕ್ಕೆ ವಂದನೀಯರಾಗಿರುತ್ತಾರೆ. ಇ ಟ ಲಿ ಯ ಭಾಗ್ಯವೇ ಧನ್ಯವು! ಎಲ್ಲಿ ಭಗವಾನ ಮ್ಯಾಝಿನಿ ಅವತರಿಸುವನೋ, ಯಾವುದಕ್ಕೆ ಗ್ಯಾರೀಬಾಲ್ಡಿಯ ರಕ್ತ ಬಿಂದುಗಳು ಖರ್ಚಾಗುವವೋ, ಯಾವುದರ ಸೇವೆಗೆಂದು ಮಾಸಿನನು ಬದ್ಧ ಪರಿಕರವಾಗಿ ಸಜ್ಜಾಗುವನೋ, ಯಾವ ದೇಶದ ಬಗ್ಗೆ ಮಾಮೇಲಿ ಎಂಬ ಕವಿಯು ಗೀತಗಳನ್ನು ರಚಿಸುವನೋ ಮತ್ತು ಯಾವದಕ್ಕೆ ಸ್ವಾತಂತ್ರ್ಯದೇವಿಯು ವಶಳಾಗುವಳೋ, ಆ ಇಟಲಿಯ ಭಾಗ್ಯದ ಧನ್ಯತೆಯೇ ಧನ್ಯತೆಯು! ಅನೇಕ ದೇಶಗಳು ಪಾರತಂತ್ರ್ಯದಲ್ಲಿ ಕೊಳೆಯುತ್ತಿರಲು, ತನ್ನ ಸಂಸ್ಕೃತ್ಯದಿಂದ ಯಾವ ಭೂಮಿಯು ಸ್ವಾತಂತ್ರ್ಯಲಕ್ಷ್ಮಿಯನ್ನು ಎಲ್ಲರಿಗಿಂತಲೂ ಮುಂಚೆ ತನ್ನ ಕಡೆಗೆ ಜಗ್ಗಿಕೊಂಡಿತೋ ಆ ಇಟಲಿಯ ಭಾಗ್ಯದ ಬಗ್ಗೆ ಧನ್ಯತೆ ಎನಿಸುವದು! ಯಾರ ಹುಟ್ಟು ಪಾರತಂತ್ರ್ಯದೊಳಗೆ ಆಗಿರುತ್ತದೋ; ಆದರೆ ಯಾರು ತಮ್ಮ ಪರಾಕ್ರಮದಿಂದ ಆ ಪಾರತಂತ್ರ್ಯವನ್ನು ನೀಗಿಸಿ ತಮ್ಮ ಸ್ವದೇಶವು ಸ್ವತಂತ್ರವಾದುದನ್ನು ಕಾಣುವರೋ ಮತ್ತು ಸ್ವಂತದ ಆ ಕರ್ತೃತ್ವದಿಂದ ದಾಸ್ಯಮುಕ್ತಮಾಡಿದಂತಹ ಭೂದೇವಿಯ ತೊಡೆಯ ಮೇಲೆ ಶುಭ್ರ ಮಸ್ತಕವನ್ನಿರಿಸಿ ಚಿನ್ಮಯರಾಗುತ್ತಾರೋ ಅಂಥವರ ಆನಂದಕ್ಕೆ ಮೇರೆಯಿಲ್ಲ!

ಲೋಕದಲ್ಲಿ ನಿರ್ಮಲ ಸುಖದ ಕ್ಷಣಗಳೇನಾದರೂ ಇದ್ದರೆ ಅವುಗಳೊಳಗೆ ಆ ಕ್ಷಣವು ಶುದ್ಧ ಸುಖದ ಪರಮ ಸೀಮೆಯನ್ನೇ ತಲುಪೀತು. ಅದಾವುದೆಂದರೆ, ತನ್ನ ಅತ್ಯಂತ ಪ್ರಿಯ ದೇಶಜನನಿಗೆ ಯಾವನು ಅಸಹ್ಯವಾದ ದುಃಖವಿತ್ತನೋ ಆ ಹಗೆಯು ಹೊಡೆತ ತಿನ್ನುತ್ತ ತಿನ್ನುತ್ತ ದೇಶದ ಮೇರೆ ದಾಟಿ ಓಡಿಹೋಗುತ್ತಿರುವದನ್ನು ನೋಡುವದು. ಯಾವದೊಂದು ಅತ್ಯಂತವಾದ ಧನ್ಯತೆಯ ದಿನವೆಂದರೆ ಯಾವ ದಿವಸ ದೇಶಜನನಿಗೆ ಪೂರ್ಣ ಸ್ವಾತಂತ್ರ್ಯ ದೊರಕಿಸಿಕೊಂಡು ದೇಶಭಕ್ತರು ರಣಭೂಮಿಯಿಂದ ಮರಳಿ ಬರುತ್ತಿರುವರೋ ಹಾಗು ಆ ಸ್ವಾತಂತ್ರ್ಯಕ್ಕಾಗಿ ಪತನಗೊಂಡ ದೇಶವೀರರ ಆತ್ಮಗಳನ್ನುದ್ದೇಶಿಸಿ—'ಎಲೈ ದೇಶವೀರರೇ, ನಮ್ಮ ದೇಶವು ಸ್ವತಂತ್ರವಾ

ಗಿರುತ್ತದೆ! ನಿಮ್ಮ ನೆತ್ತರದ ಸೇಡು ತೀರಿಸಿಕೊಂಡಿರುತ್ತೇವೆ!' ಎಂದು ಗರ್ಜಿ ಸುತ್ತಿರುವ ಸುಖ ಮತ್ತು ಧನ್ಯತೆ ಯಾವ ಸ್ವಲ್ಪ ಮಂದಿ ಮಹಾತ್ಮರ ದೈವ ದಲ್ಲಿರುವದೋ ಅವರುಗಳಲ್ಲಿ ಭಗವಾನ್ ಮ್ಯಾಝಿನಿಯ ಗಣನೆಯಿರುತ್ತದೆ.

ಮುಂದಿನ ಲೇಖಗಳಲ್ಲಿ ೧೮೪೮ರ ವರೆಗಿನ ಆತ್ಮವೃತ್ತಾಂತಾಂತರ್ಗತ ಸಂಗತಿ ಬಂದಿದೆ. ತದನಂತರದ ಸಂಗತಿಯನ್ನು ಮ್ಯಾಝಿನಿಯು ಬರೆದಿಟ್ಟಿ ರುವದಿಲ್ಲ. ೧೮೫೯ರಲ್ಲಿ ಇಟಲಿಯಲ್ಲಿ ರಾಜ್ಯಕ್ರಾಂತಿಯ ಎರಡನೇ ತೆರೆಯು ಎದ್ದಿತು. ಮ್ಯಾಝಿನಿ ಮತ್ತೆ ರಣಕುಂಡದಲ್ಲಿ ಧುಮುಕಿದನು ಆ ಮೇಲೆ ೧೮೬೬ರಲ್ಲಿ ವ್ಹೆನಿಸ್ಸು ಸ್ವತಂತ್ರವಾಯಿತು; ಮತ್ತು ೧೮೭೦ರಲ್ಲಿ ರೋಮ ಸ್ವತಂತ್ರವಾಯಿತು. ೧೮೭೧ರಲ್ಲಿ ಮ್ಯಾಝಿನಿಯ ಆಯುಷ್ಯದ ಮುಕ್ಕಾಲು ಪಾಲು ಕನಸುಗಳು ನಿಜದಾದವು. ೧೮೭೧ರ ಕೊನೆಯಲ್ಲಿ ಆ ಮಹಾತ್ಮನ ಕಣ್ಣುಗಳ ಪಾರಣೆಯು ಬಹುಮಟ್ಟಿಗೆ ಆದಂತಾಯಿತು! ಇಡೀ ಇಟಲೀ ದೇಶವು ಸ್ವತಂತ್ರವಾಯಿತು. ಇಡೀ ಇಟಲಿಯು ಏಕರಾಷ್ಟ್ರವಾಯಿತು. ಇಡೀ ಇಟಲಿಯಲ್ಲಿ ಜೀವಕಳೆ ತುಂಬಿತು; ಮತ್ತು ಆ ಸ್ವತಂತ್ರ, ಏಕ ರಾಷ್ಟ್ರೀಯ ಹಾಗು ಚೈತನ್ಯಯುಕ್ತ ಇಟಲಿಗೆ ರೋಮಪಟ್ಟಣವು ರಾಜ ಧಾನಿಯಾಯಿತು. ಈ ಮೊದಲು ಸಾವಿರಾರು ವರ್ಷ ಇಟಲಿಗೂ ರೋಮಕ್ಕೂ ಫಾರೀಕತ್ತಾಗಿ ಹೋಗಿತ್ತು. ಆ ಫಾರೀಕತ್ತು ತೀರಿ ಆ ಭಾಗ್ಯಶಾಲಿಯಾದ ದಿವಸ ರೋಮದ ಮೇಲೆ ಸ್ವತಂತ್ರ ಇಟಲಿಯ ನಿಶಾನಿ ಮೆರೆಯಹತ್ತಿತು! ಮೂವತ್ತು ವರ್ಷಗಳ ಮುಂಚೆ ಯಾವ ರೋಮದಲ್ಲಿ ಲೋಕಸತ್ತೆಯು ಪ್ರತಿನಿಧಿತ್ವದ ಅಧಿಕಾರವನ್ನು ಮೆರೆಯಿಸಿದ್ದಿತೋ, ಯಾವ ರೋಮದ ಸಲುವಾಗಿ 'ರೋಮ, ರೋಮ! ರೋಮದಲ್ಲಿ ಮೃತ್ಯುವಿಲ್ಲ; ರೋಮದಲ್ಲಿ ಅಶುಭಗಳಿಲ್ಲ; ರೋಮವೇ ನನ್ನ ಪ್ರೀತಿಯಾಗಿದೆ, ರೋಮವೇ ನನ್ನ ಪ್ರಾಣವಾಗಿದೆ!' ಎಂದು ಯಾವಾಗಲೂ ಕಂಠಶೋಷ ಮಾಡಲಾಗುತ್ತಿತ್ತೋ ಆ ರೋಮದಲ್ಲಿ ಮ್ಯಾಝಿನಿಯು ಪ್ರವೇಶ ಮಾಡಿದನು! ಆ ಕಾಲಕ್ಕೆ ಆತನ ಹೃದಯದಲ್ಲಿ ಯಾವ ವಿಚಾರಗಳುಂಟಾಗಿರಬಹುದು? ಕೊನೆಗೆ ಇಟ ಲಿಯು ಸ್ವತಂತ್ರವಾಯಿತು! ರೋಮ ನಗರದ ಮೇಲೆ ಸ್ವಾತಂತ್ರ್ಯದ ನಿಶಾನಿಯು ಅಲ್ಲಾಡುತ್ತಿದೆ; ಆಸ್ಟ್ರಿಯದ ನಿಶಾನಿಯ ಚೂರುಗಳು ಬೀದಿ-ಬೀದಿಗಳಲ್ಲಿ ಹುಡುಗರು-ಹುಪ್ಪಡಿಗಳ ಕಾಲುಗಳಿಂದ ತುಳಿಯಲ್ಪಡಹತ್ತಿವೆ. ಅದನ್ನು ಕಂಡು ನಾಲ್ವತ್ತು ವರ್ಷಗಳ ವರೆಗೆ ಸ್ವಂತದ್ದೆಂಬ ದೇಶವಿರ

ದಿದ್ದರೂ ಸ್ವತಃ ಗಡಿಪಾರು ಮಾಡಲ್ಪಟ್ಟು ಕಂಡ ಕಂಡಲ್ಲಿ ಅಂಡಲೆದು ಇಡಿ ಆಯುಷ್ಯವು ವ್ಯಯವಾಗಿ ಹೋಗಿದ್ದರೂ ಕೂಡ ಆ ಕಠಿಣ ದೇಶವ್ರತದ ಪಾರಣೆಯು ಆಧಿನ ಆಯಿತೆಂದು ಅವನಿಗನಿಸಿರಲಾರದೇ? ಸ್ಯಾವ್ಹೋನದ ಸೆರೆಮನೆಯಲ್ಲಿ ೧೮೩೧ರಲ್ಲಿ ಬಂಧಿಸಲ್ಪಟ್ಟ ಮ್ಯಾಝಿನಿ ಮತ್ತು ೧೮೭೧ರಲ್ಲಿ ಸ್ವತಂತ್ರ ಇಟಲಿಯ ಏಕರಾಷ್ಟ್ರೀಯ ಇಟಲಿಯ ಆ ಸ್ವತಂತ್ರ ರಾಜಧಾನಿ ಯೊಳಗೆ-ರೋಮದೊಳಗೆ ಪ್ರವೇಶ ಮಾಡುವ ಮ್ಯಾಝಿನಿ! ಇಟಲಿಯ ಯಾವನೊಬ್ಬ ಚಿತ್ರಕಾರನು ಇವೆರಡೂ ಚಿತ್ರಗಳನ್ನು ರೇಖಿಸಬಹುದೇ?

ಇಟಲೀ ದೇಶವು ಸ್ವತಂತ್ರ ಮತ್ತು ಏಕೀಕೃತವಾದ ಮೇಲೆ ಮ್ಯಾಝಿನಿಯ ಒಂದು ಇಚ್ಛೆಯು ಉಳಿದಿತ್ತು. ಅದೆಂದರೆ ಲೋಕಸತ್ತೆಯೇ ಅಹುದು; ಆದರೆ ಆತನಿಗೆ ಆ ಲೋಕಸತ್ತೆಯ ಬಗ್ಗೆ ಅಷ್ಟು ಅವಸರವೆನಿಸಿರಲಿಲ್ಲ. 'ಈ ಜನ್ಮದಲ್ಲಿಲ್ಲದಿದ್ದರೂ ಬೇರೆ ಎಲ್ಲಿ ಇದ್ದಾಗಲಾದರೂ ಇಟಲಿಯೊಳಗೆ ಲೋಕಸತ್ತೆಯ ನಿಶಾನಿ ಹಾರಾಡುತ್ತಿರುವದನ್ನು ಕಂಡು ನಾನು ಕೃತಕೃತ್ಯನಾದೇನು.' ಎಂದು ಆತನ ಖಾತ್ರಿಯಿತ್ತು; ಆದರೆ ದುಃಖದ ಸಂಗತಿಯಿರುವದೇನಂದರೆ, ಬಹುತರ ಎಲ್ಲ ಇಂಗ್ಲಿಷ ಗ್ರಂಥಕಾರರು ಮ್ಯಾಝಿನಿಯ ಆ 'ಹುಚ್ಚಿ'ನ ಬಗ್ಗೆ ದೋಷ ವೀಯುತ್ತಿರುತ್ತಾರೆ. ಅವರ ಅಭಿಪ್ರಾಯದಂತೆ ಮ್ಯಾಝಿನಿಯು ದೊಡ್ಡ ತತ್ತ್ವಜ್ಞನೂ ಭವಿಷ್ಯವಾದಿಯೂ ಆಗಿದ್ದನು; ಆದರೆ ಆತನಿಗೆ ವ್ಯವಹಾರಜ್ಞಾನವಿರಲಿಲ್ಲ. ಅವನಿಗೆ 'ಲೋಕಸತ್ತೆ'ಯು 'ಭ್ರಮೆ'ವಾಗಿದ್ದಿತು! ಲೋಕಸತ್ತೆಯದಷ್ಟೇ ಏಕೆ, ಆ ಕಾಲದ ಜನರು ಮ್ಯಾಝಿನಿಯ ಎಲ್ಲಮಹತ್ವಾಕಾಂಕ್ಷೆಗಳಿಗೂ ಮನೋರಾಜ್ಯಗಳೆಂದೇ ಅಂದಿರಲಿಲ್ಲವೇ? ಆದರೆ ಆ ಮನೋರಾಜ್ಯಗಳು ಇಂದಿಗೆ ಸತ್ಯವಾದವು ಕಾಣಿಸುತ್ತದೆ. ಅವುಗಳಂತೆಯೇ ಈ ಲೋಕಸತ್ತೆಯ 'ಭ್ರಮೆ'ನಾದರೂ ಸತ್ಯವಾಗಲಿಕ್ಕಿಲ್ಲೆಂದು ಹೇಗೆ ಹೇಳಬೇಕು? ಯಾವನು ಬೂದಿಯ ಗುಡ್ಡೆಯೊಳಗಿಂದ ಸಜೀವ ರಾಷ್ಟ್ರವನ್ನು ನಿರ್ಮಿಸಿದನೋ ಆ ಮ್ಯಾಝಿನಿಗೆ ಇಂಗ್ಲಿಷ ಗ್ರಂಥಕಾರರು 'ವ್ಯವಹಾರ ಚತುರತೆ'ಯ ಶಿಕ್ಷಣವೀಯುತ್ತಿರುವರು! ಮ್ಯಾಝಿನಿಯ ಮಹತ್ವಾಕಾಂಕ್ಷೆಯು ಲೋಕಸತ್ತೆಯವರೆಗೆ ತಲ್ಪಿದ್ದರಲ್ಲಿಯೇ ಆತನ ಭವಿಷ್ಯವಾದಿತ್ವದ ವಿಜಯವಿರುತ್ತದೆ. ಅದು ಹಾಗೆ ತಲುಪಿರದಿದ್ದರೆ ಮಾತ್ರ ಆತನ ದೃಷ್ಟಿಯು ಇಂಗ್ಲಿಷ ರಾಷ್ಟ್ರದಷ್ಟೇ ಸಂಕುಚಿತ ದೃಷ್ಟಿಯದಾಗುತ್ತಿತ್ತು; ಮತ್ತು ಅದು ರಾಜಸತ್ತೆಯ ಆಚೆಗೆ ಹೋಗಲಿಲ್ಲೆಂ-

ದೆನ್ನಬೇಕಾಗುತ್ತಿತ್ತು; ಆದರೆ ಮ್ಯಾಝಿನಿಯ ನೀತಿ ಮೀಮಾಂಸೆಯು ಇಂಗ್ಲಿಷರ ನೀತಿ ಮೀಮಾಂಸೆಯಂತೆ ಹೊಟ್ಟೆ ಹೊರೆಯುವದಾಗಿರಲಿಲ್ಲ. ಆತನು ಇಂಗ್ಲಿಷ ರಾಷ್ಟ್ರದಲ್ಲಿಯ ಅನೀತಿಯುಕ್ತ ಹಾಗು ಪಾಪಕಾರಕ ರಾಜನೀತಿಯ ಬಗ್ಗೆ ಮತ್ತೆ-ಮತ್ತೆ ಖಂಡಿಸಿರುತ್ತಾನಾದ್ದರಿಂದೇನು ಆತನು ವ್ಯವಹಾರ ಕುಶಲನೆಂದು ನಿರ್ಧರಿಸಲಾರನೇ?

ಮ್ಯಾಝಿನಿಯು ವ್ಯವಹಾರಕುಶಲನಲ್ಲವೆಂಬುದು ಸ್ಪಷ್ಟವೇ ಇದೆ. ಯಾಕೆಂದರೆ ಅವನು ಬೇರೆಯವರ ಕಾಗದಗಳನ್ನೊಡೆದು, ಓದಿ ಮತ್ತು ಅವುಗಳೊಳಗಿನ ಸಂಗತಿಯನ್ನು ಬೇರೆಯವರಿಗೆ ತಿಳಿಸಿ ತನ್ನ ವ್ಯವಹಾರ ಕೌಶಲ್ಯವನ್ನೆಲ್ಲಿ ಮೆರೆಯಿಸಿದ್ದಾನೆ! ಮ್ಯಾಝಿನಿ ವ್ಯವಹಾರ ಕುಶಲನಿರಲಿಲ್ಲೆಂಬುದು ಸ್ಪಷ್ಟವೇ ಇದೆ. ಏಕೆಂದರೆ ಆತನು 'ಇಟಲಿಯು ಸ್ವತಂತ್ರವಾದ ಕೂಡಲೆ ಅದು ಬೇರೆ ಎಲ್ಲ ರಾಷ್ಟ್ರಗಳನ್ನು ದಾಸ್ಯಪಂಕದಲ್ಲಿ ಕೆಡವಲು ಹೊರಡಬೇಕು' ಎಂದು ಹೇಳುವ ಬದಲು, ತಾವು 'ಸ್ವತಂತ್ರವಾದಷ್ಟಕ್ಕೆ ಕಾವ್ಯವಾಗುವದಿಲ್ಲ; ಆದರೆ ತಾವು ಬೇರೆ ದೇಶಗಳನ್ನು ಸ್ವತಂತ್ರವಾಗ ಮಾಡಬೇಕು.' ಎಂದು ಘೋರಣವಿಲ್ಲದೆ ಹೇಳಿದ ಮ್ಯಾಝಿನಿಯ ಪರೀಕ್ಷೆಯು ಸ್ವಾರ್ಥಲಂಪಟಗಳಾದ ರಾಷ್ಟ್ರಗಳಿಗೆಂತಾಗಬೇಕು? ಆದರೆ ಅವರುಗಳೆಲ್ಲ ಆತನನ್ನು ಹುಚ್ಚನೆಂದು ನಿರ್ಧರಿಸಿದರೂ ಕೂಡ ಆತನು ಕೊನೆಗೆ ಇತಿಹಾಸದೇವಿಯ ತಾಯಿತವೇ ಆಗಿ ಬಿಟ್ಟ. ಮ್ಯಾಝಿನಿಯು ಲೋಕಸತ್ತೆಗಾಗಿ ಅವಿಶ್ರಾಂತ ಶ್ರಮ ವಹಿಸಿದರೂ ಕೂಡ ಆತನು ಸಾವಿರಾರು ಸಾರೆ 'ಮೊಟ್ಟ ಮೊದಲು ಸ್ವಾತಂತ್ರ್ಯ, ಬಳಿಕ ಐಕ್ಯ, ಆ ಮೇಲೆ ಲೋಕಸತ್ತೆ' ಹೀಗೆಂದು ಪ್ರಕಟಪಡಿಸಿದ್ದಂತೆಯೇ ಶಕ್ಯವಾದಾಗಲೆಲ್ಲ ಅವನು ವರ್ತಿಸಿದನು; ಮತ್ತು ಇಟಲಿಯು ಸ್ವತಂತ್ರವಾದ ಬಳಿಕ ಆತನು ಲೋಕಸತ್ತೆಯ ಬಗ್ಗೆ ಯಾವ ಉಪದೇಶಕೊಟ್ಟನೋ ಅದನ್ನು ಪ್ರಸಿದ್ಧವಾಗಿಯೇ ಕೊಟ್ಟಿರುತ್ತಾನೆ. ಕಾರಣ ಆತನ ಹಾಗು ಮನುಷ್ಯಜಾತಿಯ ಸೂಕ್ಷ್ಮ

ನಿರೀಕ್ಷಣವನ್ನು ಯಾರ್‍ಯಾರು ಮಾಡಿರುತ್ತಾರೋ ಅವರೆಲ್ಲರ ಖಾತ್ರಿಯಾಗಿ ರುವದೇನಂದರೆ—'ಇನ್ನು ಜನತೆಯ ಯುಗ ಬಂದಿರುವದು' ಇನ್ನು ಇಂದಿಲ್ಲದಿದ್ದರೂ ನಾಳೆಯಾದರೂ ಲೋಕಸತ್ತೆಯ ಜಯ ಜಯಕಾರವೇ ಆಗಲಿದೆ!


ವ್ಯಾಧ್ಯುನಿಯು ಯಾವ ನಿಶಾನೆಯನ್ನು ನಿಲ್ಲಿಸಿದ್ದನೋ ಅದು ಪರ ಮಾತ್ಮನವರೆಗೆ ಮುಟ್ಟುವ ನಿಶಾನೆಯಾಗಿತ್ತು. ಆ ನಿಶಾನಿಯ ತುದಿಯು ಅದೂರ ದೃಷ್ಟಿಯುವರಿಗೆ ಒಂದು ವೇಳೆ ಕಾಣಿಸದಿದ್ದರೂ, ಅದು ಸ್ವತಃ ಆವ ನಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಸಣ್ಣ ಹಕ್ಕಿಯು ಯಾವದೊಂದು ದಿನ್ನೆಯ ಮೇಲೆ ಹಾರಿ ಹೋಗಿ ಕುಳಿತಿತೆಂದರೆ, ಅದಕ್ಕೆ ಕೃತಕೃತ್ಯ ಮಾಡಿದಂತೆನಿಸು ವದು. ವ್ಯಾಧ್ಯುನಿಯು ಗರುಡಪಕ್ಷಿಯಂತಿದ್ದನು. ಆತನು ಆ ಪುಟ್ಟ ದಿನ್ನೆಯಲ್ಲೇ ಸಮಾಧಾನವನ್ನೆಂತು ತಾಳಬೇಕು? ಆತನು ಕಾಲರೂಪೀ ಆಕಾಶದಲ್ಲಿ ಹಾರುತ್ತ-ಹಾರುತ್ತ ನಡೆದನು; ಹಾಗು ಅಲ್ಲಿಂದ ಲೋಕ ಸತ್ತೆಯ ಸ್ತೋತ್ರದ ಗೀತವನ್ನು ಹಾಡಹತ್ತಿದನು. ವ್ಯಾಧ್ಯುನಿಯ ಆಯು ಷ್ಯದಲ್ಲಿ ಎರಡು ಸಲ ಲೋಕಸತ್ತೆಯ ವಿಜಯವಾಗುವ ಸಂಧಿ ಪ್ರಾಪ್ತವಾಗಿತ್ತು ಆಗಲದು ಬೇರೆ ಜನರ ಸ್ವಾರ್ಥಪರಾಯಣತೆಯ ಮೂಲಕ ತಪ್ಪಿರದಿದ್ದರೆ, ವ್ಯಾಧ್ಯುನಿಯ ಬೇರೆ 'ಕನಸು' ಗಳಂತೆಯೇ ಆ ಇನಿಗನಸೂ ಅಂದು ನಿಜ ವಾಗುತ್ತಿತ್ತು. ಅದು ಆಗ ಹಾಗಾಗಲಿಲ್ಲೆಂದರೇನಾಯಿತು? ವ್ಯಾಧ್ಯುನಿಗೆ ಆತ್ಮದ ಅಮರತ್ವದಲ್ಲೂ ಕಾಲನ ಅನಂತತೆಯಲ್ಲೂ ನಂಬುಗೆಯಿದ್ದಿತು; ಮತ್ತು ಲೋಕಸತ್ತೆಯು ನೀತಿಯುಕ್ತ ರಾಜಪದ್ಧತಿಯಿದೆ ಎಂಬದನ್ನಾತನು ಸಿದ್ಧಪಡಿಸಿದ್ದನು. ಆತನ ಆ ತತ್ತ್ವವು ನಿಜವೋ-ಸುಳ್ಳೋ ಎಂಬದೇ ಮುಖ್ಯ ಪ್ರಶ್ನೆ. ಆ ತತ್ತ್ವದ ವಿಜಯವು ಇಂದಾದೀತೋ ನಾಳೆಯಾದೀತೋ ಎಂಬದು ಗೌಣ ಭಾಗವು.

"ಆತ್ಯಾನಂದದ ಸಂಗತಿಯಾಗಿರುವದೇನಂದರೆ, ಮ್ಯಾಝಿನಿಯ ಉಚ್ಚ ಯೋಗ್ಯತೆಯನ್ನು ಇತರರಾರೂ ಅರಿಯದಿದ್ದರೂ ಅವನ ಸ್ವದೇಶ ಬಂಧುಗಳು ಸಂಪೂರ್ಣ ಅರಿತಿರುತ್ತಾರೆ. ಆ ಮಹಾತ್ಮನು ಯಾವ ದಿನ ಇಹಲೋಕದ ತನ್ನ ಎಲ್ಲ ಕರ್ತವ್ಯಗಳನ್ನು ಪೂರೈಸಿ ಆಸ್ಟ್ರಿಯದ ನಿಶಾನಿಯ ಕೆಳಗಲ್ಲ; ಆದರೆ ಸ್ವತಂತ್ರ ಇಟಲಿಯ ನಿಶಾನಿಯ ಕೆಳಗೆ ಪಂಚತ್ವವನ್ನೈದಿದನೋ, ಆ ದಿವಸ ರೋಮ ಪಟ್ಟಣದಲ್ಲಿ ಇಟಲಿಯ ಪಾರ್ಲಮೆಂಟು 'ರಾಷ್ಟ್ರೀಯ ಸೂತಕ' ಪಾಲಿಸುವ ನಿರ್ಧರ ಕೈಕೊಂಡಿತು. ಆತನ ಅಪರಿಮಿತ ಸ್ವಾರ್ಥತ್ಯಾಗದ ಮತ್ತು ಅವನ ಅನವರತ ಸ್ವದೇಶ ಸೇವೆಗಳನ್ನು ಕುರಿತು ಮುಖ್ಯ ಅಮಾತ್ಯನು ವಕ್ತೃತ್ವಪೂರ್ಣ ಭಾಷೆಯಲ್ಲಿ ಪ್ರಶಂಸಿಸಿದನು. ಜಿನ್ಹೋವಾದಲ್ಲಿ ಆ ಮಹಾತ್ಮನ ಜಡದೇಹದ ಉತ್ತರಕ್ರಿಯೆ ನಡೆದಿರುವಾಗ ಲಕ್ಷಾವಧಿ ಇಟಾಲಿಯನ್ನ ಜನರು ತಮ್ಮ ದೇಶದ ತಂದೆಯ ಕೊನೆಯ ದರ್ಶನಕ್ಕೆಂದು ಕಿಕ್ಕಿರಿದರು; ಮತ್ತು ಆ ಅಂತ್ಯದರ್ಶನವಾದ ಕೂಡಲೇ ಚಿಕ್ಕ ಮಕ್ಕಳಂತೆ ಅಳತೊಡಗಿದರು ಒಬ್ಬ ಮನುಷ್ಯನ ಸಾವಿಗಾಗಿ ಅಷ್ಟು ಅಶ್ರುವರ್ಷಣವು ಲೋಕದಲ್ಲೆಲ್ಲೂ ಆಗಿರಲಿಕ್ಕಿಲ್ಲ.'

ಪರಮಾತ್ಮನ ಮನೆಯಲ್ಲಿ ಪ್ರತಿಯೊಂದು ದೇಶಕ್ಕಾಗಿ ಒಬ್ಬೊಬ್ಬ ಮ್ಯಾಝಿನಿಯನ್ನಿಟ್ಟಿದ್ದರೆ ಇಟಲಿಯನ್ನು ಯಾರೂ ಹೊಗಳುವ ಕಾರಣವಿರಲಿಲ್ಲ!

ಲಂಡನ್,
ಇಂಡಿಯಾ ಹೌಸ,
೨೮-೫-೧೯೦೭

ವಿನಾಯಕ ದಾಮೋದರ
ಸಾವರಕರ.



# ಕೊನೆಗೆ ಮ್ಯಾಝಿನಿಯ ಮೂರನೇ ಕನಸೂ ನಿಜವಾಯಿತು.

ಒಮ್ಮೊಮ್ಮೆ ನೈಸರ್ಗಿಕ ಚಮತ್ಕಾರಗಳಷ್ಟೇ ಆಶ್ಚರ್ಯಕಾರಗಳಾದಂಥ ಐತಿಹಾಸಿಕ ಚಮತ್ಕಾರಗಳೂ ಘಟಿಸುತ್ತವೆ. ಅಂಥದೇ ಒಂದು ಚಮತ್ಕಾರವು (೧೯೪೬ನೇ ಜೂನ ತಿಂಗಳಲ್ಲಿ ಇತ್ತೀಚೆಗೇನೇ) ಇಟಲಿಯಲ್ಲಿ ಘಟಿಸಿರುತ್ತದೆ. ಇಟಲಿಯಲ್ಲಿ ರಾಜಸತ್ತೆಯನ್ನು ವಿಸರ್ಜಿಸಿ, ಕೊನೆಗೆ ರೋಮದಲ್ಲಿ ೧೮೪೮-೪೯ರಲ್ಲಿ ಯಾವ ಸ್ವತಂತ್ರ ಪ್ರಾಜಕದ ಲೋಕಸತ್ತೆಯ ಧ್ವಜವನ್ನು ನಿಲ್ಲಿಸಲಾಗಿದ್ದಿತೋ, ಅದನ್ನು ಹಳೇ ಸಂಗ್ರಹಾಲಯಗಳಲ್ಲೆಲ್ಲಾದರೂ ತುರುಕಿಟ್ಟಿದುದನ್ನು ಆ ಸಮಯದಲ್ಲಿ ಹುಡುಕಿ ತೆಗೆಯಲಾಯಿತು. ಅದು ಹಲವೆಡೆಗಳಲ್ಲಿ ಹರಿದು ಹೋಗಿತ್ತು. ಅದನ್ನು ದುಂಡ ಸೂಜಿಗಳಿಂದ ಅಲ್ಲಲ್ಲೇ ಕೂಡಿಸಲಾಯಿತು; ಮತ್ತು ಮ್ಯಾಝಿನೀ ಗ್ಯಾರೀಬಾಲ್ಡಿಯರ ಸ್ವತಂತ್ರ ಪ್ರಾಜಕದ ಅದೇ ಧ್ವಜವನ್ನೇ ಲಕ್ಷ ಗಟ್ಟಲೆ ಇಟಾಲಿಯನ್ನ ನಾಗರಿಕರ ಪ್ರಚಂಡ ಜಯಘೋಷದೊಡನೆ ರೋಮ ನಗರದಲ್ಲಿ ತುಸ ಹೆಚ್ಚುಕಡಿಮೆ ನೂರು ವರ್ಷಗಳ ನಂತರ ಮತ್ತೆ ನಿಲ್ಲಿಸಲಾಯಿತೆಂಬದು ಎಷ್ಟು ಆಶ್ಚರ್ಯಕರವು!!!

ಪ್ರತಿಯೊಂದು ಸ್ವಾಭಿಮಾನೀ ರಾಷ್ಟ್ರಕ್ಕೆ ತನ್ನ ಅಭಿಮಾನದ ಪರಂಪರೆ ಎಷ್ಟಿರುತ್ತದೆಂಬದನ್ನು ನಿರೀಕ್ಷಿಸಿರಿ! ಅಥವಾ ಈ ಐತಿಹಾಸಿಕ ಸ್ಮೃತಿ ಸಂತತಿಯೂ ಈ ಪರಂಪರಾಗತ ಅಭಿಮಾನವೂ ಅಂದರೇನೇ ರಾಷ್ಟ್ರೀಯ ಜೀವನವು, ರಾಷ್ಟ್ರೀಯ ತತ್ವದ ಅರಿವು, ರಾಷ್ಟ್ರೀಯ ಆತ್ಮವು.

——

# ಸ್ವಾತಂತ್ರ್ಯವೀರ ಸಾವರಕರ.

ದೇಶಭಕ್ತ, ಸ್ವಾತಂತ್ರ್ಯವೀರ ಬ್ಯಾರಿಸ್ಟರ ಸಾವರಕರ ಇವರಿಗೆ ಮೊನ್ನೆ ವೈಶಾಖ ಬಹುಳ ಷಷ್ಠಿ (ದಿನಾಂಕ ೧೮-೫-೧೯೬೪)ಗೆ ೮೧ ವರ್ಷ ತುಂಬಿದವು. ಅವರ, ಅವರ ಹೆಂಡತಿಯ ಮತ್ತು ಅವರ ಲಕ್ಷಾವಧಿ ಅಭಿಮಾನಿ-ಅನುಯಾಯಿಗಳ ಮಹದ್ಭಾಗ್ಯವೆಂದೇ ಅವರು ಗಾಂಧೀವಧೆ ಕಟ್ಟಿನ ಆರೋಪದೊಳಗಿಂದ ನಿಷ್ಕಲಂಕ ಮತ್ತು ನಿರ್ದೋಷಿಗಳೆಂದು ಮುಕ್ತರಾಗಿರುವರು. ೪-೬ ವರ್ಷ ಶಾರೀರಿಕ ವ್ಯಾಧಿಯಿಂದ ಅವರು ಮೊದಲೇ ಜರ್ಜರಿತರಾಗಿದ್ದರು. ಅದರ ಮೇಲೆ ಕಳೆದ ಇಡೀ ವರ್ಷ ಅವರು ಅತ್ಯಂತ ಮಾನಸಿಕ ಯಾತನೆಗಳನ್ನನುಭವಿಸಬೇಕಾಯಿತು. ಅವರ ಎಲ್ಲ ಗುಣಗಳೂ ಚರಿತ್ರವೂ ಮಣ್ಣುಗೂಡುವ ಪ್ರಸಂಗವೊದಗಿತ್ತು. ಖಟ್ಲೆ ನಡೆದಾಗ ಅವರ ಅಂತಃಕರಣವನ್ನು ಕಂಡು ಪ್ರತ್ಯಕ್ಷ ನ್ಯಾಯದೇವತೆಯೂ ಮರುಗಿದಳು. ಅವರ ಬಿಡುಗಡೆಯಾಗುತ್ತಲೇ ಎಲ್ಲರೂ ಸಮಾಧಾನದ ನಿಟ್ಟುಸಿರುಗರೆದರು.

ಸಾಹಿತ್ಯಿಕ ಮತ್ತು ಕವಿಗಳೆಂದು ಸಾವರಕರರ ಯೋಗ್ಯತೆಯನ್ನು ಸಮಸ್ತ ಸುಬುದ್ಧ, ಸ್ವತಂತ್ರ ವಿಚಾರದ ಮತ್ತು ರಸಿಕ ಜನರು ತಿಳಿದೇ ತಿಳಿದಿರುತ್ತಾರೆ. ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗುವ ಸನ್ಮಾನವು ಅವರಿಗೆ ದೊರೆತಿತ್ತೆಂದು ಹೇಳಿಬಿಟ್ಟರೆ, ಅವರ ಸಾಹಿತ್ಯ ಪ್ರಶಂಸೆಯನ್ನು ಮತ್ತೆ ಮಾಡುವ ಕಾರಣ ಉಳಿಯಲಾರದು.

'ಸಾಹಿತ್ತಿಕ' ಇದು ಸಾವರಕರರ ಬಗೆಬಗೆಯ ಬಣ್ಣದ ಕೀರ್ತಿಧ್ವಜದ ಒಂದೊಂದೇ ಬಣ್ಣಕ್ಕೆ ಪುನಸೋತು, ಒಂದೊಂದು ಸ್ಫೂರ್ತಿದಾಯಕ ಗ್ರಂಥ ರಚಿಸುವಷ್ಟು ಆ ಮಹಾಪುರುಷನ ಯೋಗ್ಯತೆಯಿರುತ್ತದೆ. ಸಾವರಕರರ ಪ್ರತಿಭೆಯು ಮಹಾಕವಿಯಂತೆ ಹೇಗಿರುವದೋ ಅದರಂತೆಯೆ ಅವರ ಚರಿತ್ರವಾದರೂ ಮಹಾಕಾವ್ಯದ ವಿಷಯವೇ ಆಗಿರುತ್ತದೆ. ಚಲಚ್ಚಿತ್ರ ತೆಗೆಯಲು ಯೋಗ್ಯವಾದಂಥ ಚರಿತ್ರವು ಆಧುನಿಕ ಕಾಲದಲ್ಲಿ ಯಾರದಾದರೂ ಇದ್ದರೆ ಅದು ಸಾವರಕರರದೇ. ಸಾವರಕರರ ಚರಿತ್ರವೆಂದರೆ

ಬೌದ್ಧಿಕ, ಶಾರೀರಿಕ ಮತ್ತು ದೈವಿಕ ಹೀಗೆ ತ್ರಿವಿಧವಾದ ಅದ್ಭುತ ಪರಾಕ್ರಮಗಳ ಮಿಶ್ರಣವಾಗಿದೆ. ಅವರ ಸಾಹಿತ್ಯ, ಅವರು ಅನುಭವಿಸಿದ ಕಷ್ಟನಷ್ಟಗಳು ಮತ್ತು ಆಪತ್ತಿಗಳಿಂದ ಮುಕ್ತಗೊಳಿಸುವ ಅವರ ಸುದೈವ ಇವುಗಳು ಅವರ ಪರಾಕ್ರಮಗಳ ಪ್ರತೀಕಗಳಾಗಿವೆ.

ಪ್ರತಿಭಾಸಂಪನ್ನ ಕಲ್ಪಕ ಕವಿ, ಚರಾಚರಗಳೊಳಗಿಂದ ಚೈತನ್ಯವನ್ನುಂಟು ಮಾಡುವ ಅಸಾಮಾನ್ಯ ವ್ಯಕ್ತಿ, ಅತ್ಯಂತ ಧೈರ್ಯಶಾಲಿ, ಬುದ್ಧಿವಂತ, ತ್ಯಾಗೀ, ಸಹನಶೀಲ ಮತ್ತು ಆಶಾವಾದೀ ದೇಶಭಕ್ತ, ಅಸ್ಪೃಶ್ಯೋದ್ಧಾರಕ, ಧರ್ಮ, ಇತಿಹಾಸ, ಸಮಾಜ, ಸಂಸ್ಕೃತಿ ಮೊದಲಾದ ವಿಷಯುಗಳ ಬಹು ದೊಡ್ಡ ತಜ್ಞ, ಆಧುನಿಕ ದೃಷ್ಟಿಯ ವಿಚಾರವಂತ ಮತು ಸಂಪೂರ್ಣ ಲೋಕಶಾಹಿಯುಳ್ಳ ಹಿಂದುರಾಷ್ಟ್ರ ಕರ್ಮಯೋಗೀ ಪ್ರವರ್ತಕ ಹೀಗೆ ವಿವಿಧ ಬಗೆಯಿಂದ ಸಾವರಕರರು ಸುವಿಖ್ಯಾತರಿರುತ್ತಾರೆ. ಹಿಂದುತ್ವವೇ ರಾಷ್ಟ್ರೀಯತ್ವ, ಎಂಬ ಮಹಾಮಂತ್ರದ ಘೋಷಣೆಯನ್ನು ಮಾಡಿ, ಭಾರತೀಯ ರಾಜಕಾರಣದಲ್ಲಿ ಹಿಂದುತ್ವದ ಹೊಸ ಯುಗವನ್ನು ಪ್ರಾರಂಭಿಸುವ ಮತ್ತು ಒಂದು ಹೊಸ ತತ್ವಜ್ಞಾನದ ಕಾರ್ಯಕ್ರಮವನ್ನು ಮುಂಡಿಸುವ, ಹಿಂದು ಮಹಾಸಭೆಯ ನೇತೃತ್ವವನ್ನು ಸ್ವೀಕರಿಸುವ ಈ ಮಹಾಪುರುಷನು ಮುಂದಾಳುವೆಂದು ಲೋಕದೆದುರು ಇನ್ನು ಮುಂದೆ ನಿಲ್ಲುವದು ದುಸ್ತರವಾಗಿದೆ.

ಸಾವರಕರರಂಥ ಸದ್ಗುಣೀ ಮಹಾಪುರುಷರು ಮಹಾರಾಷ್ಟ್ರದಲ್ಲೇ ಏಕೆ, ಇಡೀ ಭರತಖಂಡದಲ್ಲಿ ಇದುವರೆಗೆ ಆಗಿಲ್ಲವೆಂದು ಪ್ರಾಂಜಲತನದಿಂದ ಒಪ್ಪಬೇಕಾಗುವದು; ಆದರೆ ಹೀಗಿದ್ದರೂ ಕೂಡ ಅವರ ಯೋಗ್ಯತೆಯ ಮಾನದಿಂದ ಅವರಿಗೆ ಲೋಕಪ್ರಿಯತೆಯು ಲಭಿಸಿರುವದಿಲ್ಲವೆಂಬದೂ ಕಠೋರ ಸತ್ಯವಾಗಿದೆ. ವಿವಿಧ ಕ್ಷೇತ್ರದೊಳಗಿನ ಅವರ ಕಾರ್ಯ ಮತ್ತು ಆ ಕಾರ್ಯಕ್ಕೆ ವಿಘ್ನವಾಗುವ ಪ್ರತಿಕೂಲ ಪರಿಸ್ಥಿತಿಯ ಪರ್ವತ ಇವರ ಚನ್ನು ನಿರೀಕ್ಷಿಸಿದರೆ, ಅವರ ಇದುವರೆಗಿನ ಜೀವನವು ಖಂಡಿತವಾಗಿಯೂ ಧನ್ಯವಾಗಿದೆ ಎನ್ನಬೇಕಾಗುವದು. ಅವರ ಪಕ್ಷವು ಇಂದಿಗೆ ಮೃತವತ್ತಾಗಿ ತೋರುತ್ತಿದರೂ ಅವರ ವಿಚಾರಗಳು ಸಜೀವವಾಗಿವೆ. ಅವು ಸಜೀವವಾಗಿಯೇ ಉಳಿಯುವವು; ಯಾಕಂದರೆ ಸನ್ಮಾನದಿಂದ ಜೀವಿಸಲು ಹೇಳುವ ವಿಚಾರಸರಣಿಯೇ ಅವಾಗಿವೆ. ಸಾವರಕರರು ತತ್ವತಃ ಪೂರ್ಣ ವಿಜಯಿಗಳಾಗಿರು

ತ್ತಾರೆ; ಆದರೆ ವ್ಯವಹಾರಲ್ಲಿ ಅವರು ಪರಾಭೂತರಾದಂತೆ ಭಾಸವಾಗುತ್ತಿದೆ. ಅವರು ಹೇಳಿರುವಂತೆ ಎಲ್ಲ ಹಿಂದುಗಳು ಒಂದು ವೇಳೆ ಸಂಘಟಿತ ಮತ್ತು ಸಾಮರ್ಥ್ಯಶಾಲಿಗಳಾಗಿದ್ದರೆ ಪಾಕಿಸ್ತಾನವುಂಟಾಗುತ್ತಿರಲಿಲ್ಲ, ಲಕ್ಷಗಟ್ಟಿ ಹಿಂದುಗಳು ಪ್ರಾಣಕ್ಕೆರವಾಗುತ್ತಿರಲಿಲ್ಲ; ಮತ್ತು ಸಾವಿರಾರು ಮಂದಿ ಹಿಂದೂ ಸ್ತ್ರೀಯರು ಮುಸಲ್ಮಾನ ಪುಂಡರ ವಶವಾಗುತ್ತಿರಲಿಲ್ಲ.

ಯಾವ ಕಾಂಗ್ರೆಸ್ಸು ಅವರನ್ನು ಜಾತೀಯರೆಂದು ಹೀಯಾಳಿಸಿತೋ ಅದೇ ಕಾಂಗ್ರೆಸ್ಸೇ ಜಾತೀಯ ತತ್ವದ ಅಡಿಗಲ್ಲ ಮೇಲಿರುವ ಪಾಕಿಸ್ಥಾನಕ್ಕೆ ಸಮ್ಮತಿಯಿತ್ತಿತು. 'ಕತ್ತಿಗೆ ಕತ್ತಿ' ಎಂದು ಗರ್ಜಿಸುವವರು ಕೊನೆಗೆ ಪುಂಡರ ಅತ್ಯಾಚಾರಕ್ಕೆ ತಲೆ ತಗ್ಗಿಸಿದರು. ಕಾಂಗ್ರೆಸ್ಸು ಅಖಿಲ ಭಾರತದ ಮತ್ತು ಜಾತಿ-ಧರ್ಮಗಳ ಪ್ರಾತಿನಿಧಿಕ ಸಂಸ್ಥೆಯಾಗುಳಿಯಲಿಲ್ಲ; ಇಷ್ಟೇ ಅಲ್ಲ, ಅದು ರಾಷ್ಟ್ರೀಯವೂ ಆಗಿಲ್ಲ. ಮಧ್ಯವರ್ತಿ ಮತ್ತು ಪ್ರಾಂತಿಕ ವಿಧಿ ಮಂಡಳ ಗಳಲ್ಲಿ ಒಂದೂ ಮುಸ್ಲೀಮ ಸ್ಥಳವು ರಾಷ್ಟ್ರೀಯ ಕಾಂಗ್ರೆಸ್ಸಿಗೆ ದೊರೆಯಲಿಲ್ಲ, ಒಬ್ಬಿಬ್ಬ ಮುಸಲ್ಮಾನ ಮಧ್ಯವರ್ತೀ ಸರಕಾರದ ಮಂತ್ರಿಗಳನ್ನು ಬೇರೆ ಬೇರೆ ಪ್ರಾಂತಗಳಿಂದ ಕಾಂಗ್ರೆಸ್ಸೇ ಆರಿಸಿ ತರಬೇಕಾಯಿತು!

ಇಂದಿಗೆ ವಿಧಿಮಂಡಲಗಳಲ್ಲಾಗುವ ಕಾಯಿದೆಗಳು ಕೇವಲ ಹಿಂದು ಗಳ ಮಟ್ಟಿಗೇ ಆಗಿರುತ್ತವೆ. ಕಾಂಗ್ರೆಸ್ಸು ಹೆಸರಿಗೆ ಮಾತ್ರ ರಾಷ್ಟ್ರೀಯ ವೆಂದಿದೆ. ಅಹಿಂಸೆಯಿಂದ ಸ್ವರಾಜ್ಯಸಂಪಾದಿಸಿದೆವೆನ್ನುವವಷ್ಟು ಹಾಸ್ಯಾಸ್ಪದ, ತರ್ಕದುಷ್ಟ ಮತ್ತು ಮೋಸಗೊಳಿಸುವ ಕಲ್ಪನೆಯಾಗಿಲ್ಲ; ಮತ್ತು ಒಂದು ವೇಳೆ ಅದನ್ನು ಅಹಿಂಸೆಯಿಂದಲೇ ಸಂಪಾದಿಸಿದ್ದೆಂದು ತಿಳಿದರೂ ಅದರ ರಕ್ಷಣೆಯು ಮಾತ್ರ ಹಿಂಸ್ರಕ ಸಾಧನೆಗಳಿಂದಲೇ ನಡೆದಿರುತ್ತದೆ. ಸತ್ಯ, ಅಹಿಂಸೆ, ದಯೆ, ಕ್ಷಮೆ, ಪರಮತ ಸಹಿಷ್ಣುತೆ ಮೊದಲಾದ ಗಾಂಧೀಜೀ ಯವರ ತತ್ತ್ವಗಳು ಎಷ್ಟರಮಟ್ಟಿಗೆ ಆಚರಿಸಲ್ಪಡುತ್ತಿರುವವೆಂಬದನ್ನು ವಿಚಾರವಂತ ಓದುಗರಿಗೆ ಹೇಳುವ ಅವಶ್ಯಕತೆಯಿಲ್ಲ. ಫಂಡು, ಗುಂಡ ಮತ್ತು ವೃತ್ತ ಪತ್ರಗಳ ವಿಷಾರಿ ಪ್ರಚಾರ ಇವುಗಳ ಬಿರುಗಾಳಿಯಿದುಃ ಸಾವರಕರರ ರಾಜಕೀಯ ತತ್ವಜ್ಞಾನವು ಮಸಮುಸಕಾಗಿದ್ದರೂ ಕಾಲಾಂ ತರದಲ್ಲಿ ಹಿಂದುಗಳು ಜಾಗ್ರತರಾದ ಕೂಡಲೆ ಅದು ಮತ್ತೆ ಉಜ್ವಲವಾಗಿ ಬೆಳಗತೊಡಗುತ್ತದೆ.

ಸಮಸ್ತ ಹಿಂದುಗಳು ಎಲ್ಲಿಯವರೆಗೆ ಸಂಘಟಿತ ಮತ್ತು ಸಾಮರ್ಥ್ಯ ಸಂಪನ್ನರಾಗುವದಿಲ್ಲವೋ ಅಲ್ಲಿಯವರೆಗೂ ಈ ದೇಶದಲ್ಲಿ ಸ್ವಾಸ್ಥ್ಯ, ಸುಖ ಮತ್ತು ಸಮೃದ್ಧಿಗಳುಂಟಾಗುವದು ಶಕ್ಯವಿಲ್ಲ. ಜಾತಿ ಜಾತಿಗಳಲ್ಲಿಯ ವೈಮನಸ್ಸು, ಭಾಷಿಕ ವಾದ, ದಾರಿದ್ರ್ಯ, ಅನ್ನ-ವಸ್ತ್ರ, ಸಾಮ್ಯವಾದಿಗಳ ಅತ್ಯಾಚಾರಗಳು ಮುಂತಾದ ವಿವಿಧ ಆಪತ್ತಿಗಳಿಂದ ತ್ರಸ್ತಗೊಂಡ ವಿಭಕ್ತ ಳಿದ ಹಿಂದುಸ್ತಾನವು ಲೋಕದಲ್ಲಿ ಸನ್ಮಾನದಿಂದ ಜೀವಿಸಿರಬೇಕಾದರೆ ಹಿಂದುಗಳೆಂದೇ ಏಕತ್ರಿತವಾಗಬೇಕಾದೀತು.

'ಲೋಕಸಂಖ್ಯೆಯನುಗುಣವಾಗಿ ಪ್ರಾತಿನಿಧಿತ್ವ, ಗುಣಾನುಸಾರ ವಾಗಿ ನೌಕರಿಗಳು' ಈ ಸಾವರಕರರ ವಿಚಾರಸರಣಿಯಲ್ಲಿ ಯಾವ ಜಾತೀ ಯತ್ವವಿದೆ? ಸಾವರಕರರು ಹಿಂದುಗಳಿಗೆಂದು ಏನು ಹೆಚ್ಚಿಗೆ ಬೇಡಿದರು? ಮುಸಲ್ಮಾನರನ್ನು ಮುಸಲ್ಮಾನರೆಂದೇ ದ್ವೇಷಿಸಬೇಕೆಂದು ಅವರು ಹೇಳಿ ದ್ದೆಂದು? ಹಿಂಸೆಯನ್ನು ಪ್ರವೃತ್ತಿ ಎಂದು ಯಾವಾಗ ಉತ್ತೇಜನವಿತ್ತರು? ಅವರ ಹಿಂಸೆಯು ಆಕ್ರಮಣಾತ್ಮಕವಾಗಿರದೆ ಸಂರಕ್ಷಣಾತ್ಮಕವಾಗಿದೆ.

ವರಂ ಜನಹಿತಂ ಧ್ಯೇಯಂ ಕೇವಲಾ ನ ಜನಸ್ತುತಿಃ! ಎಂಬ ಗೀತೆ ಯೊಳಗಿನ ತತ್ವಜ್ಞಾನವೇ ಅವರ ಧ್ಯೇಯವಾಗಿದೆ. ಜಾತೀಯ, ಹಿಂಸ್ರ, ಗಾಂಧೀ ನಿಂದಕ ಮುಂತಾಗಿ ಬೈದು, ಅವರ ಬಗ್ಗೆ ಪ್ರತಿಪಕ್ಷಿಗಳು ಜನ ತೆಯ ಮನಸ್ಸನ್ನು ಬುದ್ಧಿಪುರಸ್ಸರವಾಗಿ ಕಲುಷಿತಗೊಳಿಸಿದರು. ಅವರು ಅಂತಃಕರಣದಿಂದ ಅದೆಷ್ಟು ಮೃದು, ಸಹಿಷ್ಣು, ರಸಿಕ ಮತ್ತು ಶ್ರೇಷ್ಠ ರಿರುತ್ತಾರೆಂಬುದರ ಕಲ್ಪನೆಯು ಅವರ ಸಮಗ್ರ ಸಾಹಿತ್ಯವನ್ನೋದುವವರಿ ಗಾದೀತು. ಸಾವರಕರರಿಗೆ ಆರ್ಥಿಕ ಸಮತ್ವದ ದೃಷ್ಟಿಯಿಲ್ಲೆಂದು ಯಾರಿಗೆ ತಿಳುವಳಿಕೆಯಾಗಿದೆಯೋ ಅಂಥವರು ಸಾವರಕರರ 'ಗೋಮಂತಕ' ಕಾವ್ಯ ದೊಳಗಿನ ಗ್ರಾಮಸಂಸ್ಥೆಯ ವರ್ಣನೆಯನ್ನು ಅವಶ್ಯ ಓದಬೇಕು; ಆ ಕಾವ್ಯವನ್ನವರು ೧೯೨೨ಕ್ಕಿಂತ ಮೊದಲೇ ಬರೆದಿರುತ್ತಾರೆಂಬುದನ್ನು ಲಕ್ಷ್ಯ ದಲ್ಲಿಡಬೇಕು.

ತಮ್ಮ ಅನುಯಾಯಿಗಳ ರೋಷವನ್ನು ಸಹಿಸಿಯೂ ಸಾವರಕರರು ಸ್ವಂತದ ಸದನ-ನಿವಾಸಸ್ಥಳದ ಮೇಲೆ ಸ್ವಾತಂತ್ರ್ಯದ ದಿವಸ ಅಶೋಕ ಚಕ್ರಾಂಕಿತ ರಾಷ್ಟ್ರಧ್ವಜವನ್ನು ಹಚ್ಚಿ ಸಮಸ್ತ ದೇಶಭಕ್ತರಿಗೂ ಮತ್ತು ಒಡಮೂಡುವ ಸ್ವಾತಂತ್ರ್ಯಕ್ಕೂ ವಂದಿಸಿದರು. ಬ್ಯಾರಿಸ್ಟರ ಜಿನ್ನಾ ಇವರ

ಮೇಲೆ ಖಾಕಸಾರರು ಮುತ್ತಿಗೆಗೆಯ್ದ ಕಾಲಕ್ಕೆ ನಿಷೇಧದ ಮೊದಲನೇ ಪತ್ರವು ಸಾವರಕರರದೇ ಆಗಿದೆ ಮಹಾತ್ಮಾಜಿಯವರ ಆಗಾಖಾನ ಪ್ಯಾಲೇಸದಲ್ಲಿಯ ಉಪೋಷಣ ಪ್ರಸಂಗದಲ್ಲಿ ಇಲ್ಲವೆ ಕೈ. ವಾ. ಕಸ್ತೂರಿಬಾಯಿಯವರ ನಿಧನ ಸಮಯದಲ್ಲಿ ಸಾವರಕರರು ಹೊರಡಿಸಿದ ಭಾವನೋತ್ಕಟ ಪತ್ರಕಗಳು ಸರ್ವಶ್ರುತಗಳೇ ಆಗಿವೆ. ಜಾತೀಯರೆಂದು ಇವರನ್ನು ಬ್ಯಾ. ಜಿನ್ನಾನ ಜೊತೆಗೆ ಕೂರಿಸುವ ಜಾತೀಯ ಪ್ರಚಾರಕರು ಗಾಂಧೀವಧೆಯ ನಂತರದ ಬ್ಯಾ. ಜಿನ್ನಾ ಇವರ ಕ್ಷುದ್ರ ಪತ್ರಕವನ್ನು ಮತ್ತೊಮ್ಮೆ ಓದಬೇಕು; ಅಂದರೆ **ಅವರಿಗೆ ತಮ್ಮ ಜಾತಿ ಯಾವುದೆಂಬುದಾದರೂ ತಿಳಿದೀತು.**

ಇತರ ಸಾಮಾನ್ಯ ಪ್ರಾಪಂಚಿಕ ಮನುಷ್ಯರಂತೆ ಅವರು ಇನ್ನು ತಮ್ಮ ಶೇಷಾಯುಷ್ಯವನ್ನು ವಿಶ್ರಾಂತಿಯಲ್ಲಿ ಕಳೆಯಬೇಕು. ಅವರಿಂದ ಇನ್ನಾವ ಮಾರ್ಗದರ್ಶನದ ಅಪೇಕ್ಷೆಯನ್ನು ಯಾರೂ ಮಾಡಲಾಗದು ಅವರು ಹೇಳದಂತಹ ಯಾವ ಮುಖ್ಯ ಪ್ರಶ್ನೆಯೂ ಬಾಕಿಯುಳಿದಿಲ್ಲ. ಲೆಕ್ಕಣಿಕೆ ಮತ್ತು ವಾಣಿ ಇವುಗಳ ಮೂಲಕ ಅವರು ಏನೇನು ಹೇಳಿರುವರೋ, ಅದನ್ನೆಲ್ಲ ಕಣ್ತೆರೆದು ತಿಳಿದುಕೊಂಡು ಅವರ ಅಭಿಮಾನಿ—ಅನುಯಾಯಿಗಳೆನಿಸಿಕೊಳ್ಳುವವರು ಅದರಂತೆ ನಡೆದರೆ, ಸಾವರಕರರ ಋಣದಿಂದ ಅವರೆಲ್ಲರೂ ಮುಕ್ತರಾದಂತಾದೀತು.

---

## ೨

ಬ್ಯಾರಿಸ್ಟರ ವಿನಾಯಕ ದಾಮೋದರ ಸಾವರಕರ ಎಂಬ ಹೆಸರನ್ನು ಉಚ್ಚರಿಸುತ್ತಲೇ ಹಲವು ರೋಮಹರ್ಷಕ ಪ್ರಸಂಗಗಳ ನೋಟಗಳು ಕಣ್ಣಿಗೆ ಕಟ್ಟುತ್ತವೆ. ಅವರು ಸ್ಥಾಪಿಸಿದ 'ಮಿತ್ರಮಂಡಲಿ'ಯ ಸದಸ್ಯರ ಕಾರ್ಯಗಳು, ಕ್ರಾಂತಿಕಾರರ ಸಂಘಟನೆಯಲ್ಲಿ ಭಾಗ ವಹಿಸಿದ ಬಗ್ಗೆ ಸಾವರಕರರಿಗೆ ಇಂಗ್ಲಂಡದಲ್ಲಾದ ಬಂಧನ, ಅಲ್ಲಿಂದ ಅವರನ್ನು ಹಡಗದೊಳಗಿಂದ ಹಿಂದುಸ್ಥಾನಕ್ಕೆ ಕರೆತರುವಾಗ ತಪ್ಪಿಸಿಕೊಳ್ಳಲಿಕ್ಕೆಂದು ಅವರು ಸಮುದ್ರದೊಳಗೆ ಹಡಗಿನಿಂದ ಹಾರಿದ ರೋಮಾಂಚಕರ ಪ್ರಸಂಗ, ಅಂದಮಾನ ದ್ವೀಪದಲ್ಲಿ ಎರಡು ಜನ್ಮಾವಧಿ ಶಿಕ್ಷೆ ಭೋಗಿಸಲಿಕ್ಕೆ ಅಟ್ಟಿದಾಗ ಆ ಸೆರೆಮನೆಯೊಳಗಿನ ಸ್ವಾಭಿಮಾನೀ

ವರ್ತನ ಮುಂತಾದ ಅನೇಕ ಸಂಗತಿಗಳು ನೆನಪಾಗದಿರವು. ನಮ್ಮ ಹಿಂದು ದೇಶವು ಸ್ವತಂತ್ರವಾಗುವದಕ್ಕೆಂದು ಅವರು ಅನಂತ ಕಷ್ಟನಷ್ಟಗಳನ್ನು ಸಹಿಸಿರುವರು. ಅಂಥ ಆ ದೇಶಭಕ್ತರ ಸಂಕ್ಷಿಪ್ತ ಚರಿತ್ರವನ್ನು ನಾವಿಲ್ಲಿ ಕೊಡುತಿರುವೆವು.

ಸ್ವಾತಂತ್ರ್ಯವೀರ ಬ್ಯಾರಿಷ್ಟರ ಸಾವರಕರರು ೨೮ನೇ ಮೇ ೧೮೮೩ ವೈಶಾಖ ಬಹುಳ ೬ ಶಕೆ ೧೮೦೫ ಈ ದಿವಸ ನಾಶಿಕ ತಾಲೂಕಿನೊಳಗಿನ ಭಗೂರ ಎಂಬ ಊರಲ್ಲಿ ಹುಟ್ಟಿದರು. ಇವರ ತಂದೆಯ ಹೆಸರು ದಾಮೋದರ ಪಂತ. ತಾಯಿಯ ಹೆಸರು ರಾಧಾಬಾಯಿ. ಪೂರ್ವದಲ್ಲಿ ಪೇಶ್ವಾಯಿ ಕಾಲಕ್ಕೆ ಘೋಪಾವಕರ ಮತ್ತು ಸಾವರಕರ ಎಂಬೆರಡು ಬಡ ಕುಟುಂಬಗಳು ತಮ್ಮ ಭಾಗ್ಯೋದಯ ಮಾಡಿಕೊಳ್ಳಬೇಕೆಂದು ಕೊಂಕಣ ಪ್ರಾಂತದೊಳಗಿನ ಚಿಪಳೂಣ ತಾಲೂಕಿನಿಂದ್ದ ದೇಶದ ಮೇಲೆ ಹೋದವು. ಭಗೂರ ಬಳಿಯ 'ರಾಹೂರೀ' ಎಂಬ ಗ್ರಾಮವು ಪೇಶ್ವೆಯರಿಂದ ಆ ಉಭಯ ಕುಟುಂಬದವರಿಗೆ ಇನಾಮಾಗಿ ದೊರಕಿತು. ಕೊಂಕಣದೊಳಗಿನ ಸಾವರವಾಡಿಯು ಇವರ ಮೂಲ ಪುರುಷರ ನಿವಾಸಸ್ಥಾನವಾದ್ದರಿಂದ ಇವರ ಮನೆತನಕ್ಕೆ 'ಸಾವರಕರ' ಎಂದು ಅಡ್ಡ ಹೆಸರು ಬಂದಿರಬೇಕು.

ರಾಹೂರಿ ಗ್ರಾಮದ ಆದಾಯವನ್ನು ಸಾವರಕರ ಘೋಪಾವಕರ ಈ ಉಭಯತರೂ ತಮ್ಮ ಮೊದಲಿನ ಸಂಕೇತದಂತೆ ಸಮಭಾಗವಾಗಿ ಹಂಚಿಕೊಂಡು ಉಪಭೋಗಿಸುತ್ತಿದ್ದರು. ಇವರ ಪೂರ್ವಜರು ಸಂಸ್ಕೃತ ವಿದ್ಯಾಪಾರಂಗತರೂ ಯಜ್ಞಯಾಗಾದಿಗಳನ್ನು ಮಾಡಿದ ದೀಕ್ಷಿತರೂ ಆಗಿದ್ದು ಪೇಶ್ವೆಯರಿಂದ ಪಲ್ಲಕ್ಕಿ ಪದಸ್ಥರಾಗಿದ್ದರಂತೆ.

ದಾಮೋದರಪಂತರಿಗೆ ೩ ಜನ ಗಂಡುಮಕ್ಕಳು ಹಾಗು ಒಬ್ಬ ಹೆಣ್ಣು ಮಗಳು. ಗಣೇಶ, ವಿನಾಯಕ, ನಾರಾಯಣ ಎಂದು ಅವರ ಗಂಡುಮಕ್ಕಳ ಅನುಕ್ರಮ ಹೆಸರುಗಳು ಮಾಯಿ ಎಂಬುದು ಹೆಣ್ಣುಮಗಳ ಹೆಸರು. ದಾಮೋದರ ಪಂತರ ಹೆಂಡತಿಯು ಆಕಾಲದಲ್ಲೇ ಅಂದರೆ ಅವರ ಚಿಕ್ಕ ಮಗನು ೩-೪ ವರ್ಷದವನಿರುವಾಗಲೆ ಕಾಲರಾ ಬೇನೆಗೆ ತುತ್ತಾದಳು. ಅವರ ನಾಲ್ಕು ಹುಡುಗರಲ್ಲಿ ತಾತ್ಯಾ (ವಿನಾಯಕ) ರಾಯನೇ ಬಹು ಚುರುಕು ಬುದ್ಧಿಯವನು. ತನ್ನ ವಯಸ್ಸಿನ ೬-೮ ವರ್ಷಗಳಿಂದಲೇ ಈತನು ಅತ್ಯುತ್ತಮ ಪದ್ಯಗಳನ್ನು ರಚಿಸ ಹತ್ತಿದನು.

ಇವರ ಕುಲದೇವತೆಯು ಅಷ್ಟಭುಜಗಳುಳ್ಳ ಭವಾನಿ ಮೂರ್ತಿಯು. ವಿನಾಯಕನು ಚಿಕ್ಕಂದಿನಿಂದಲೇ ಆ ತನ್ನ ಕುಲದೇವತೆಯ ಪೂಜೆ-ಅರ್ಚನೆಗಳಲ್ಲಿ ಬಹು ಲೀನನಾಗುತ್ತಿದ್ದನು. ಅವರ ಹಿರಿಯರು ನವರಾತ್ರಿಯಲ್ಲಿ ಆ ದೇವಿಯನ್ನು ಷೋಡಶೋಪಚಾರಗಳಿಂದ ಅರ್ಚಿಸಿ, ಸಪ್ತಶತಿಯನ್ನು ಪಾಠ ಮಾಡುತ್ತಿರುವಾಗ ಅವರ ಬಾಯಿಂದ 'ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ। ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈನಮೋ ನಮಃ|| ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ| ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋನಮಃ॥ ಎಂದೆನ್ನುತ್ತಿರುವಾಗ ವಿನಾಯಕನು ಗಾನಪ್ರಿಯ ನಾಗದಂತೆ ತಲೆದೂಗುತ್ತ ಕೇಳುತ್ತಿದ್ದನು. ಚಿಕ್ಕಂದಿನಿಂದಲೇ ಇವನಿಗೆ ಆ ದೇವಿಯಲ್ಲಿ ಅತಿ ಭಕ್ತಿ.

ಅಕಾಲದಲ್ಲಿ ಹೆಂಡತಿ ತೀರಿಕೊಂಡರೂ ದಾಮೋದರಪಂತರು ದ್ವಿತೀಯ ಲಗ್ನವಾಗಲು ಮನಸ್ಸು ಮಾಡಲಿಲ್ಲ. ಮನೆಯೊಳಗೆ ನಾಲ್ಕು ಜನ ಸಣ್ಣ-ಪುಟ್ಟ ಹುಡುಗರು. ಅಡಿಗೆ ಮಾಡುವವರು ಕೂಡ ಬೇರೆ ಯಾರೂ ಇರಲಿಲ್ಲ. ಇಂಥ ಸ್ಥಿತಿಯಲ್ಲೂ ನಡು ಹರೆಯದ ದಾಮೋದರ ಪಂತರು ತಮ್ಮ ಮಕ್ಕಳ ಹಿತಕ್ಕೆಂದು ಬೇರೆ ಲಗ್ನವಾಗದೆ, ಶೇಷಾಯುಷ್ಯವನ್ನೆಲ್ಲ ವಿಧುರಾವಸ್ಥೆಯಲ್ಲೇ ಕಳೆಯಲು ಸಿದ್ಧರಾದರು; ಹಾಗು ಅಡಿಗೆ,ಮಕ್ಕಳ ಲಾಲನ-ಪಾಲನ, ಮನೆಯ ಬೇರೆ ಎಲ್ಲ ಕೆಲಸಗಳನ್ನೂ ತಾವೇ ನಿಯಮಿತವಾಗಿ ಮಾಡುತ್ತ ಮಕ್ಕಳನ್ನು ಶಾಲೆಗೆ ಹಾಕಿದರು. ಮುಂದೆ ದಾಮೋದರಪಂತರ ಹಿರಿಯ ಮಗನಾದ ಗಣೇಶರಾಯನ ಮದುವೆಯನ್ನು ಆತನ ೧೬ನೇ ವಯಸ್ಸಿನಲ್ಲೇ ಮಾಡಿದರು. ಆ ಸೊಸೆಯು ಈಗಿನ ವಧುಗಳಂತೆ ಪ್ರೌಢಳಾಗಿರಲಿಲ್ಲ. ಹತ್ತೇ ವರ್ಷದ ಕಿಶೋರಿಯು.

ದಾಮೋದರ ಪಂತರ ಹಿರಿಯ ಮಗನಿಗಿಂತ ೨ನೇ ಮಗನಾದ ವಿನಾಯಕನೇ ಹೆಚ್ಚು ಜಾಣನು. ಇವನಿಗೆ ಭವಾನಿಯ ಕೃಪೆಯಿಂದ ಕವಿ ಕಾಳಿದಾಸನಂತೆ ಬಾಲ್ಯದಿಂದಲೇ ಕವಿತ್ವರಚಿಸುವ ನಾದವುಂಟಾಯಿತು. ಈತನು ಬರಿಯ ದೇವತಾಸ್ತೋತ್ರ ಮುಂತಾದ ವಿಷಯಗಳ ಕವಿತ್ವಗಳನ್ನಷ್ಟೇ ರಚಿಸುತ್ತಿರಲಿಲ್ಲ. ದೇಶಸೇವೆ, ಸ್ವಾತಂತ್ರ್ಯ ಪ್ರಾಪ್ತಿಯ ಉಪಾಯ, ಪರಕೀಯರ ನಾನಾ ಬಗೆಯ ಕಾಟ, ಅವಹೇಲನೆ ಮುಂತಾದ ವಿಷಯಗಳುಳ್ಳ ಅತ್ಯಂತ ಸ್ಫೂರ್ತಿದಾಯಕ ಪದ್ಯಗಳನ್ನು ರಚಿಸುವನು.

ವಿನಾಯಕನು ಭಗೂರಲ್ಲೇ ಪ್ರಾಥಮಿಕ ಶಿಕ್ಷಣ ಪಡೆದನು. ಈತನು ತನ್ನ ೬ ನೇ ವರ್ಷದಿಂದಲೇ ಬಗೆಬಗೆಯ ಕವಿತ್ವಗಳನ್ನು ರಚಿಸ ಹತ್ತಿದನು. ಮರಾಠೀ ಭಾಷೆಯೊಳಗಿನ 'ಹರಿವಿಜಯ' 'ಪಾಂಡವ ಪ್ರತಾಪ' ಮುಂತಾದ ಪುಸ್ತಕಗಳನ್ನು ಓದಿ ಈತನು ಅದೇ ಪದ್ಧತಿಯ ಮೇರೆಗೆ ಸಣ್ಣ-ಸಣ್ಣ ಓಲೆಗಳ ಪುಸ್ತಕಗಳನ್ನು ಮಾಡಿ, ತಾನು ರಚಿಸಿದ ಕವಿತ್ವಗಳನ್ನು ಅದರಲ್ಲಿ ಸ್ಫುಟವಾಗಿ ಬರೆಯುತ್ತಿದ್ದನು. ಈತನು ಓವಿ, ಅಭಂಗ. ಘಟಿಕೆ, ಆರ್ಯಾ ಮುಂತಾದವುಗಳನ್ನೆಷ್ಟೋ ರಚಿಸುವನು.

ಈತನಿಗೆ ಮರಾಠಿಯೊಳಗಿನ ಆರ್ಯಾವೃತ್ತದ ಮಾಹಿತಿ ಬೇಕಾಗಿತ್ತು. ಆ ಬಗ್ಗೆ ಆತನು ತನ್ನ ಬಾಲ ಚಿಕಿತ್ಸೆಯ ಮೇರೆಗೆ ಬಹು ಪ್ರಯತ್ನಿಸಿದನು. ಎಲ್ಲಿಯೂ ಸರಿಯಾದ ಮಾಹಿತಿ ದೊರೆಯಲಿಲ್ಲ. ಆಗ ಆತನು ಭಗೂರಿಗೆ ಆಗ ತಾನೇ ಬಂದಿದ್ದ ಒಬ್ಬ ೩ನೇ ವರ್ಷದ ಟ್ರೇಂಡ ಶಿಕ್ಷಕನೆದುರು ಈ ವಿಷಯ ತೆಗೆಯಲು, ಆ ಶಿಕ್ಷಕ ಮಹಾಶಯನು ಈತನಿಗೆ ತಕ್ಕ ಮಾಹಿತಿಯೊದಗಿಸಿ ಉತ್ತೇಜನ ಕೊಡುವ ಬದಲು 'ಸಣ್ಣ ಬಾಯಿಗೆ ದೊಡ್ಡ ತುತ್ತು' ಎಂಬಂತೆ ಬಾಲಕನೂ ಅಲ್ಪಜ್ಞನೂ ಆದ ನಿನಗೇಕೆ ಉಸಾಬರಿ ಏಕೆ? ದೊಡ್ಡವನಾದಬಳಿಕ ನೋಡಿಕೊಳ್ಳುವಿಯಂತೆ, ಎಂದೆಂದು ಅತ್ಯಂತ ನಿರುತ್ಸಾಹಗೊಳಿಸಿದನು. ಬಾಲವಿನಾಯಕನಿಗೆ ಮಾಸ್ತರರ ಆ ಮಾತು ಹೃದಯಕ್ಕೆ ನೆಟ್ಟಿತು. ಆತನು ಮುಂದೆ ಕೆಲ ದಿವಸಗಳಲ್ಲೇ ಅನೇಕ ಪುಸ್ತಕಗಳನ್ನೋದಿ ಆರ್ಯಾವೃತ್ತದ ಚರಣಗಳ ಮಾತ್ರಾಗಣಗಳನ್ನು ತಾನೇ ಶೋಧಿಸಿಕೊಂಡನು; ಹಾಗು ಈ ಮೊದಲು ರಚಿಸಿದ ತನ್ನ ಆರ್ಯಾವೃತ್ತಗಳು ಅದರಂತೆಯೇ ಇರುವದನ್ನು ಕಂಡು ಸಮಾಧಾನಪಟ್ಟನು.

ವಿನಾಯಕನು ೧೩-೧೪ ನೇ ವರ್ಷದವನಾದಾಗಲೇ ಆತನ ಭವಾನಿಯ ಮೇಲಿನ ಭಕ್ತಿಯು ವೃದ್ಧಿಂಗತವಾಯಿತು. ಆ ಅಷ್ಟಭುಜಾದೇವಿಯು ರುಧಿರ ಪ್ರಿಯಳೆಂದು ಆ ದೇವಿಯ ವಿಗ್ರಹವನ್ನು ಭಗೂರೊಳಗಿನ ಖಂಡೋಬನ ದೇವರಲ್ಲೇ ಸ್ಥಾಪಿಸಿದ್ದರು. ಅದರಿಂದ ಖಂಡೋಬನಿಗೆ ಬಲಿಗಳನ್ನರ್ಪಿಸುವಾಗ ದೇವಿಗೆ ಸಹಜವಾಗಿ ರುಧಿರದಿಂದ ಸಮಾಧಾನವಾಗುವದೆಂದು ಆ ಊರವರ ನಂಬಿಗೆಯು. ಮುಂದೆ ದೇವಿಯ ದೃಷ್ಟಾಂತದ ಮೂಲಕ ಆ ವಿಗ್ರಹವನ್ನು ದಾಮೋದರಪಂತರು ತಮ್ಮ ಹೊಸ ಮನೆಗೆ ತಂದು, ತಮ್ಮ ದೇವರ ಮನೆಯಲ್ಲೇ ಸ್ಥಾಪಿಸಿದರು. ಅಂದಿನಿಂದ ವಿನಾಯಕನು ಆ ದೇವಿಯ ಮೂರ್ತಿ

ಯನ್ನು ತಾನೇ ಬಹು ವಿಜೃಂಭಣೆಯಿಂದ ಮಾಡುತ್ತ ತಾಸು ತಾಸುಗಟ್ಟಲೆ ಆ ದೇವಿಯ ವಿಗ್ರಹದೆದುರು ಧ್ಯಾನಾಸಕ್ತನಾಗಿ ಕೂರುವನು. ಆತನು ದುರ್ಗಾದೇವಿಯ ಪರಮ ಭಕ್ತನಾದ ದುರ್ಗಾದಸನೇ ಆದನು ಅದೇ ಕಾಲಕ್ಕೆ ಬಾಲ ವಿನಾಯಕನು 'ದುರ್ಗಾದಾಸ' ಎಂಬ ಸಾಂಕೇತಿಕ ಹೆಸರನ್ನಿಟ್ಟು ಕೊಂಡು ತನ್ನ ಆತ್ಮಚರಿತ್ರವನ್ನು ಬರೆಯಹತ್ತಿದನು.

ಮುಂದೆ ಕೆಲ ದಿನಗಳಲ್ಲಿ ಆತನು 'ದೇವರು ತನ್ನ ಭಕ್ತರನ್ನು ಯಾವಾಗಲೂ ಕಾಯುತ್ತಾನೆಂತಲ್ಲ' ಎಂಬ ಸಿದ್ಧಾಂತಕ್ಕೆಬಂದ. ತಲುಪಿದ. ಆತನು ಆ ವಿಷಯದ ಬೇರೆ ಬೇರೆ ಸಂತರ ಅನುಭವೋಕ್ತಿಗಳನ್ನು ತನ್ನ ಸ್ವಾನುಭವಕ್ಕೆ ಒರೆ ಹಚ್ಚಿ ಹಚ್ಚಿ ನೋಡಿ, ಆ ನಿರ್ಧರಕ್ಕೆ ತಲುಪಿದನು. ಆತನು ಆಗ ಶ್ರದ್ಧಾಯುಕ್ತನಾಗಿಯೂ ಸಂಶಯ ಮನಸ್ಕನಾಗಿಯೂ ಹೀಗೆ ಉಭಯ ಕಣ್ಣುಗಳಿಂದಲೂ ಹಲವು ಉದ್ಗ್ರಂಥಗಳನ್ನುನಿರೀಕ್ಷಿಸಿದನು. ಆಯಾ ಗ್ರಂಥಗಳೊಳಗಿನ ಉಪಯುಕ್ತ ವಿಚಾರಗಳಿಂದ ಆತನಲ್ಲಿಯ ಶ್ರದ್ಧೆಯು ಹೆಚ್ಚಿದರೂ, ಎಷ್ಟೋ ನೀರಸ ಹಾಗು ಆಶಾಪ್ರದೀಪ್ತವಾದ ವಿಷಯಗಳ ವಾಚನ-ಮನನಗಳಿಂದ ಆತನಲ್ಲಿಯ ಪುರಾಣಗಳಲ್ಲಿಯ ಅಶಂಕಿನೀಯ ಶ್ರದ್ಧೆಯೂ ಬರ ಬರುತ್ತ ಹಾರಹತ್ತಿತು.

ಭಗೂರಲ್ಲಿಯ ಪ್ರಾಥಮಿಕ ಶಿಕ್ಷಣವು ಮುಗಿದ ಬಳಿಕ ವಿನಾಯಕನು ಮನೆತನದ ಅಡಚಣಿಗಳ ಸಲುವಾಗಿ ೧-೨ ವರ್ಷ ಇಂಗ್ಲಿಷ ಕಲಿಯಲು ಹೋಗದೆ ಮನೆಯಲ್ಲೇ ಇದ್ದನು. ಆಗ ಆತನು ಮನೆಯಲ್ಲಿ ಸುಮ್ಮನೆ ಕೂಡದೆ, ಸ್ವಂತದ ಪರಿಶ್ರಮದಿಂದ ಇಂಗ್ಲಿಷ ಮೂರನೇ ಇಯತ್ತೆಯ-ವರೆಗಿನ ಅಭ್ಯಾಸವನ್ನು ಮನೆಯಲ್ಲೇ ಮಾಡಿದನು. ವಿನಾಯಕನಿಗೆ ಗದ್ಯ, ಪದ್ಯ, ಭೂಗೋಲು, ಇತಿಹಾಸ, ಭಾಷಾವಿಷಯ ಇವೆಲ್ಲ ಸರಾಗವಾಗಿದ್ದಂತೆ ಗಣಿತ ವಿಷಯವು ಯಾವಾಗಲೂ ಮಂದವೇ ಇರುತ್ತಿತ್ತು. ಅದು ಕೊನೆಯವರೆಗೂ ಹೆಚ್ಚು ಸುಧಾರಿಸಲಿಲ್ಲ; ಆದರೆ ಅದರಲ್ಲೂ ಪಾಸಿನ ಮಟ್ಟಿಗೆ ಮಾರ್ಕುಗಳನ್ನು ದೊರೆಕಿಸುವಂತೆ ಆತನು ಪ್ರಯತ್ನಿಸದಿರುತ್ತಿರಲಿಲ್ಲ.

ಬಾಲ ವಿನಾಯಕನಿಗೆ ಸಾಧಾರಣ ಓದು ಬರೆಹ ಬರುತ್ತಿದ್ದಾಗಿನಿಂದಲೆ ಆತನು ವೃತ್ತಪತ್ರಗಳನ್ನೋದುವ ಪರಿಪಾಠವಿಟ್ಟಿದ್ದನು. ಆದರಿಂದ ಆತನಿಗೆ ಚಿಕ್ಕಂದಿನಿಂದಲೇ ದೇಶ ವಿದೇಶಗಳೊಳಗಿನ ಅದ್ಯಾವತ್ ಸಂಗತಿಗಳು ಗೊತ್ತಾಗಹತ್ತಿದವು. ಆತನು ತನ್ನಷ್ಟಕ್ಕೆ ತಾನು ಓದು ಬರೆಹ ನಡೆಸದ್ದೆ,

ತನ್ನ ಮಿತ್ರ-ಸಹಪಾಠಿಗಳನ್ನೂ ಜಾಣರನ್ನಾಗಿ ಮಾಡುತ್ತಿದ್ದನು. ಆದ್ದರಿಂದ ಭಗೂರೊಳಗಿನ ಸರ್ವಸಾಧಾರಣ ಜನರಿಗಿಂತ ವಿನಾಯಕರಾಯನೂ ಆತನ ಮಿತ್ರರೂ ಪ್ರತಿಯೊಂದು ವಿಷಯದಲ್ಲಿ ಮುಂದಾಳುಗಳಾದರು.

ವಿನಾಯಕನು ಹುಟ್ಟಾ ಹಿಂದೂ ಅಭಿಮಾನಿಯು; ಸ್ವದೇಶಪ್ರೀತಿಯುಳ್ಳವನು; ಪರದಾಸ್ಯಕ್ಕೆ ಹೇಸುವವನು. ಅವನು ಓದು ಬರೆಹ ಕಲಿತ ಮೇಲೆ ಶಿವಛತ್ರಪತಿಯ ಚರಿತ್ರ, ತಾನಾಜಿ, ನೇತಾಜಿ, ಬಾಜೀಪ್ರಭು ಮುಂತಾದ ವೀರರ ಚರಿತ್ರಗಳನ್ನು ಓದಿ ಮೈ ಮರೆಯಹತ್ತಿದನು. ವಿನಾಯಕನು ಹತ್ತು ವರ್ಷ ವಯಸ್ಸಿನಲ್ಲೇ ರಚಿಸಿದ 'ಸಿಂಹಗಡಾಚಾ ಪೋವಾಡಾ' ಎಂಬ ಅತ್ಯುಜ್ವಲ ಲಾವಣೀಪದವು ಬಹು ಉತ್ತಮವಾಗಿದೆ. ಈಗಲೂ ಅದನ್ನು ಓದಿದವರ ಮೈಯಲ್ಲಿ ಒಂದು ಬಗೆಯ ವೀರರಸವು ತನ್ನಷ್ಟಕ್ಕೆ ತಾನೇ ಪ್ರಾದುರ್ಭವಿಸುವದು. ಆ ಲಾವಣೀ ಪದಕ್ಕೆ ಮುಂದೆ ೧೯೦೬-೭ನೇ ಸಾಲಿನ ಸ್ವದೇಶೀ ಚಳವಳಿಯ ಕಾಲಕ್ಕೆ ಅದರ ತೀಕ್ಷ್ಣತೆಯ ಮೂಲಕ ಸರಕಾರದಿಂದ ಮುಟ್ಟುಗೋಲು ಹಾಕಲಾಯಿತು.

ವಿನಾಯಕನು ಬಾಲಕನಿದ್ದಾಗ ಮುಂಬಯಿ ಪಟ್ಟಣದಲ್ಲಿ ಬಹು ದೊಡ್ಡ ಹಿಂದೂ ಮುಸಲ್ಮಾನರ ಗಲಭೆಯಾಯಿತು. ಅದರ ಪ್ರತಿಧ್ವನಿಯು ಊರೂರಲ್ಲಿ ಕೇಳಹತ್ತಿತು. ಅದೇ ಸಂಧಿಯಲ್ಲಿ ವಿನಾಯಕನು ತನ್ನ ಊರ ಮುಸಲ್ಮಾನರು ಗಲಭೆ ಮಾಡದಂತೆ ತನ್ನ ಸಮವಯಸ್ಕ ಬಾಲಕರ ಗುಂಪಿನಿಂದಲೇ ಅವರಿಗೆ ಬೆದರಿಕೆಯುಂಟಾಗುವ ರೀತಿಯಲ್ಲಿ ವರ್ತಿಸಿ, ಆ ಗಲಭೆಯು ತಮ್ಮ ಊರಲ್ಲಿ ಏಳದಂತೆ ಮಾಡಿದನು.

---

## ೩

ಮುಂದೆ ತುಸ ದಿನಗಳಲ್ಲಿ ಹಿಂದುಸ್ತಾನಕ್ಕೆ ತೀರ ಹೊಸದಾದ ಗಂಟು ಬೇನೆ (ಪ್ಲೇಗು)ಯು ಮುಂಬಯಿ-ಪುಣೆಗಳಲ್ಲಿ ತಲೆದೋರಿತು. ಆ ಬೇನೆಯು ಕಾಡ ಬೇಗೆಯಂತೆ ದೇಶದಲ್ಲೆಲ್ಲ ಹರಡಿತು. ಪ್ಲೇಗು ಬಂದವರು ಬಹುಶಃ ಆಗ ಬದುಕುತ್ತಿರಲಿಲ್ಲ; ಅಲ್ಲದೆ, ಅದು ಸಾಂಸರ್ಗಿಕ ರೋಗ. ಅಂದಮೇಲೆ ಕೇಳುವದೇನು? ಯಾವ ದುರ್ಬೀಣಿನಿಂದ ನೋಡಿದರೆ ಇರುವೆಯು ಆನೆಯಷ್ಟು ದೊಡ್ಡದಾಗಿ ಕಾಣುವದೋ, ಅದೇ ದುರ್ಬೀಣಿಯಿಂದ ಪ್ಲೇಗು ಜಂತು

ವನ್ನು ನೋಡಿದರೆ ಅದು ಇರುವೆಗಿಂತಲೂ ಸೂಕ್ಷ್ಮವಾಗಿ ಕಾಣುವದು. ಪ್ಲೇಗು ಬರುವ ಮೊದಲು ಊರೊಳಗಿನ ಇಲಿಗಳು ಸಾಯಹತ್ತುವವು. ಆ ಬೇನೆಯ ಜಂತುಗಳು ಎಲ್ಲಕ್ಕೂ ಮೊದಲು ಮೂಷಕಗಳ ದೇಹದಲ್ಲೇ ಸುಲಭವಾಗಿ ಸೇರುವವು. ಅವು ಕ್ಷಣಕ್ಷಣಕ್ಕೆ ರಕ್ತಾಸುರರಂತೆ ಅಸಂಖ್ಯವಾಗಿ, ವಾಯುವಿನೊಡನೆ ಊರ ತುಂಬ ಹಬ್ಬುವವು ಪ್ಲೇಗು ಬೇನೆಗೆ ತಡೆಯೆಂದರೆ ಊರವರೆಲ್ಲರೂ ಕೆಲ ದಿನ ಊರು ಬಿಟ್ಟು ದೂರ ವಾಸಿಸುವದು; ಊರೊಳಗಿನ ಯಾವ ಜೀನಸನ್ನೂ ಉಪಯೋಗಿಸದಿರುವದು. ಗಂಧಕ ಮೊದಲಾದ ಜಂತುನಾಶಕ ದ್ರವ್ಯಗಳ ಹೊಗೆ ಕೊಡುವದರಿಂದ ಪ್ಲೇಗಿನ ಪ್ರಸರಣ ಬಹುಮಟ್ಟಿಗೆ ಕಡಿಮೆಯಾಗುವದೆಂದು ಮುಂದೆ ಮುಂದೆ ಡಾಕ್ಟರ ಜನರು ಅನುಭವದಿಂದ ಹೇಳಹತ್ತಿದರು.

ಮೊದಲನೇ ಸಾರೆ ಪ್ಲೇಗು ಬಂದಾಗ ಪ್ರತಿಊರಲ್ಲಿ 'ಕ್ವಾರಂಟೈನ್' ಇಡುತ್ತಿದ್ದರು. ಕ್ವಾರಂಟೈನ್ ಅಂದರೆ ಪ್ಲೇಗು ಬಂದ ರೋಗಿಯನ್ನು ಊರ ಹೊರಗೆ ಬಹು ದೂರದ ಒಂದು ಚಪ್ಪರದಲ್ಲಿರಿಸಿ ಉಪಚರಿಸುವದು; ಹಾಗು ಪ್ಲೇಗಿನ ಸಂಸರ್ಗದ ಜನರನ್ನು ಊರಲ್ಲಿಟ್ಟುಕೊಳ್ಳದೆ ಹತ್ತು ದಿನಗಳ ವರೆಗೆ ಊರ ಹೊರಗೆ ಇರಿಸಿ, ಆ ಅವಧಿಯಲ್ಲಿ ಅವರಿಗೆ ಪ್ಲೇಗು ಸೋಂಕದಿದ್ದರೆ ನಂತರ ಅವರನ್ನು ಊರೊಳಗೆ ಬರಗೊಡುವದು. ಪ್ರಥಮ ಸಾರೆ ಪ್ಲೇಗು ಬಂದಾಗ ಸರಕಾರದ ನಿಯಂತ್ರಣ ಬಲು ತ್ರಾಸದಾಯಕವಾಗಿತ್ತು. ಯಾರೊಬ್ಬರಿಗೆ ಪ್ಲೇಗು ಬಂದ ಕೂಡಲೆ ಸರಕಾರೀ ಜನರು ಆ ಮನೆಯವರಿಗೆ ಕೊಡುತ್ತಿದ್ದ ಚಿತ್ರಹಿಂಸೆಯನ್ನು ಹೇಳಲಾಸಲ್ಲ. ರೋಗಿಯನ್ನು ಊರ ಹೊರಗೆ ಕಳಿಸುವದು, ಅವರ ಮನೆಯೊಳಗಿನ ಸಾಮಾನುಗಳನ್ನೆಲ್ಲ ಹೊರಗೆ ಕಿತ್ತು ಹಾಕುವದು, ಮನೆಯ ಮಾಳಿಗೆಯನ್ನು ಹಾರಿಹೊಡೆಯುವದು, ಗೋಡೆಗಳಿಗೆ ಖಿಂಡಿಗಳನ್ನು ಕೆಡಹುವದು, ಸಂಶಯಯುಕ್ತ ಸಾಮಾನುಗಳನ್ನು ಸುಟ್ಟು ಬಿಡುವದು ಇವು ಆಗಿನ ನಿತ್ಯಕ್ರಮಗಳಾಗಿದ್ದವು.

ಅದೇ ಕಾಲಕ್ಕೆ ವ್ಹಿಕ್ಟೋರಿಯಾ ಮಹಾರಾಣಿಯ ಜ್ಯುಬಿಲೀ ಉತ್ಸವ ಬಂದಿತ್ತು. ಪುಣೆ ಪಟ್ಟಣದಲ್ಲಿಯ ಜನರು ಪ್ಲೇಗಿನ ಸಲುವಾಗಿ ಸರಕಾರದ ಉಪಟಳದಿಂದ ಅತ್ಯಂತ ತ್ರಸ್ತರಾಗಿದ್ದರು. ಸಾಮಾನ್ಯ ನೌಕರರಿಂದ ಆ ಕೆಲಸವಾಗದೆಂದು ತಿಳಿದು ಸರಕಾರದವರು ಆ ಕೆಲಸಕ್ಕಾಗಿ ದಂಡಿನೊಳಗಿನ ಸೋಲ್ಜರರನ್ನು ನಿಯಮಿಸಿದ್ದರು. ಆ ಅಡಮುಟ್ಟ ಸಿಪಾಯಿಗಳು ಸರ

ಕಾರದ ಹುಕುಮಿಗಿಂತ ಹೆಚ್ಚಿಗೆಯೇ ನಡೆದು ಜನರಿಗೆ ವಿಪರೀತ ತೊಂದರೆ, ನಷ್ಟ ಹಾಗು ಅವಮಾನ ಮಾಡಹತ್ತಿದರು. ಅದರ ಪ್ರತಿಫಲವೆಂದು ವ್ಹಿಕ್ಟೋರಿಯಾ ರಾಣಿಯ ಜ್ಯುಬಿಲೀ ದಿನದ ರಾತ್ರಿ ೧೦ ಗಂಟೆಯ ಸಮಯಕ್ಕೆ ಪ್ಲೇಗ ಆಫೀಸರನಾಗಿದ್ದ ರ್‍ಯಾಂಡ ಸಾಹೇಬನ ಕೊಲೆಯನ್ನು ಪುಣೆಯ ತರುಣರಿಬ್ಬರು ಮಾಡಿದರು. ಅದರಿಂದ ಸರಕಾರವು ರೊಚ್ಚಿಗೆದ್ದು ಪುಣೆಯ ಜನರ ಮೇಲೆ ನಾನಾ ಬಗೆಯ ಅತ್ಯಾಚಾರ ನಡೆಸಿತು.

ಈ ಎಲ್ಲ ವೃತ್ತಾಂತವನ್ನು ನಮ್ಮ ವಿನಾಯಕನು ವೃತ್ತಪತ್ರಮೂಲಕ ತಿಳಿದು, ಸರಕಾರದ ಆ ನಿಂದ್ಯ ಕೃತಿಯ ಬಗ್ಗೆ ರೋಷಗೊಂಡನು. ಆ ೧೪ ವರ್ಷದ ಬಾಲಕನು ಅಂದೇ ತನ್ನ ಸಹಪಾಠಿ ವಿದ್ಯಾರ್ಥಿಗಳ ಸಹಾಯದಿಂದ ಭಗೂರಲ್ಲೊಂದು ನಿಷೇಧ ಪ್ರದರ್ಶಕ ಸಭೆಯನ್ನು ಕೂಡಿಸಿ, ಅಲ್ಲಿಯ ಜನರಿಗೆ ಆ ಕ್ಷೋಭದಾಯಕ ವೃತ್ತಾಂತವನ್ನು ಅರುಹಿ ಅವರನ್ನೆಲ್ಲ ಜಾಗ್ರತಗೊಳಿಸಿದನು. ಮತ್ತೆ ಕೆಲ ದಿನಗಳಲ್ಲೇ ರ್‍ಯಾಂಡ ಸಾಹೇಬನನ್ನು ಕೊಂದ ಆ ವೀರ ಚಾಫೇಕರ ಬಂಧುಗಳು ಹಿಡಿಯಲ್ಪಟ್ಟು ಗಲ್ಲಿನ ಶಿಕ್ಷೆಗೆ ಗುರಿಯಾದರು. ಆ ಚಾಫೇಕರ ಬಂಧುಗಳನ್ನು ೧೦ ಸಾವಿರ ರೂಪಾಯಿ ಬಹುಮಾನದ ಆಶೆಗಾಗಿ ಸರಕಾರದವರಿಂದ ಹಿಡಿಸಿದ ಫಿತೂರೀ ದ್ರವಿಡ ಬಂಧುಗಳನ್ನು ಗಲ್ಲಿಗೇರಲ್ಪಟ್ಟ ಚಾಫೇಕರ ಬಂಧುಗಳ ಮೂರನೇ ತಮ್ಮನೂ ರಾನಡೆ ಎಂಬವನೂ ಪುಣೆ ಪಟ್ಟಣದಲ್ಲಿ ಹಗಲು ಹಾಡೇ ಕೊಲೆಗೆಯ್ದರು.

ಆಗಿನ ಕಾಲದ ಈ ಎಲ್ಲ ಸಂಗತಿಯು ವೃತ್ತಪತ್ರಿಕೆಗಳಿಗೆ ಬಹುದೊಡ್ಡ ಅನ್ನವಾಗಿದ್ದಂತೆ ದೇಶದೊಳಗಿನ ಪ್ರತಿಯೊಂದು ವ್ಯಕ್ತಿಯ ಜಿಜ್ಞಾಸೆಗೂ ಕಾರಣವಾಗಿತ್ತು. ಸಾವರಕರ ವಿನಾಯಕನಿಗಂತೂ ಆ ಎಲ್ಲ ವೃತ್ತವನ್ನು ಓದಿ ಆಗಿನ ಸರಕಾರದ ಬಗ್ಗೆ ಬಲು ಕ್ಷೋಭವುಂಟಾಯಿತು. ಆತನು ಆಗಲೇ ಆ ವೀರ ಚಾಫೇಕರರ ಮೇಲೊಂದು ಅತ್ಯುತ್ಕೃಷ್ಟ ಲಾವಣೀ ಪದವನ್ನು ರಚಿಸಿ ದೇಶದಲ್ಲೆಲ್ಲ ಅದನ್ನು ಹುಲುಬಿಸಿದನು.

ವಿನಾಯಕನು ನಾಶಿಕದೊಳಗಿನ ಇಂಗ್ಲಿಷ ಶಾಲೆಯಲ್ಲಿ ೩ನೇ ಇಯತ್ತೆಗೆ ಹೆಸರು ಹಚ್ಚಿಸಿದನು. ೨-೩ ತಿಂಗಳಲ್ಲೇ ಅವನ ಪರೀಕ್ಷೆ ತಕ್ಕೊಂಡು ೪ನೇ ಇಯತ್ತೆಗೆ ಸೇರಿಸಿದರು; ಹಾಗು ಮುಂದಿನ ೬ ತಿಂಗಳಲ್ಲಿ ಆತನು ೪ನೇ ಇಯತ್ತೆಯ ಅಭ್ಯಾಸವನ್ನು ಪೂರ್ಣಗೊಳಿಸಿ, ಮರುವರ್ಷ ೫ನೇ ಇಯತ್ತೆಗೆ ಹೋದನು. ನಾಶಿಕದಲ್ಲಿ ಆತನ ಅಣ್ಣ ಗಣೇಶಪಂತನು ಈ ಮೊದಲೇ

ಇಂಗ್ಲಿಷ ಶಾಲೆಗೆ ಸೇರಿದ್ದನು. ವಿನಾಯಕನು ಬಂದ ಮೇಲೆ ಅವರಿಬ್ಬರೂ ಕೂಡಿ ಅಡಿಗೆಮಾಡಿಕೊಂಡಿದ್ದು ಓದಹತ್ತಿದರು.

ಭಗೂರಿಗಿಂತ ನಾಸಿಕವು ದೊಡ್ಡ ಊರು, ಅಲ್ಲದೆ ಜಿಲ್ಲಾಸ್ಥಳ; ಆದರೆ ವಿನಾಯಕನ ಬಾಲ್ಯದಲ್ಲಿ ಅದೊಂದು ಮೂರನೇ ವರ್ಗದ ತೀರ ಸಾಮಾನ್ಯ ನಗರವಾಗಿತ್ತು. ಅದು ಕ್ಷೇತ್ರಸ್ಥಳವಾದ್ದರಿಂದ ಅಲ್ಲಿ ಉಚ್ಚ ಶಿಕ್ಷಣ ಪಡೆದ ಜನರು ಅಲ್ಪವಾಗಿದ್ದರು. ಉಳಿದ ಮೇಲ್ತರಗತಿಯವರೆಂದರೆ ಯಾತ್ರಿಕರ ತೀರ್ಥ-ಕ್ಷೇತ್ರ ವಿಧಿಗಳನ್ನು ಮಾಡಿಸುವ ಭಟ್ಟ-ಭಿಕ್ಷುಕರೇ. ಇವರಿಗೇನು, ಕೈ ತುಂಬ ದಕ್ಷಿಣೆ, ಹೊಟ್ಟೆತುಂಬ ಸುಗ್ರಾಸ ಭೋಜನ ದೊರೆತರೆ ತೀರಿತು. ವಸ್ತುಸ್ಥಿತಿಯು ಬಹುಮಟ್ಟಿಗೆ ಹೀಗಿದ್ದರೂ ಆ ಊರಲ್ಲಿ ಒಬ್ಬ ಸುಪ್ರಸಿದ್ಧ ಕವಿಯೂ ಸಾರ್ವಜನಿಕ ಕಾರ್ಯಕರ್ತರಾದ ೨-೩ ಜನ ವಕೀಲರೂ ಬೇರೆ ಸ್ವಲ್ಪ ಜನ ಗುಣಗ್ರಾಹಕರೂ ಇದ್ದರು.

ವಿನಾಯಕನು ಬಂದ ಕೆಲ ದಿನಗಳಲ್ಲೇ ನಾಶಿಕದಲ್ಲೊಂದು ನೈಮಿತ್ತಿಕ ಸಭೆ ಸೇರಿತು. ಅದರಲ್ಲಿ ಭಾಷಣ ಮಾಡಲಿಚ್ಛಿಸುವವರು ತಮ್ಮ ಭಾಷಣ ವನ್ನು ನಾಲ್ಕುದಿನ ಮೊದಲೇ ಬರೆದು ಕಳಿಸಬೇಕಾಗುತ್ತಿತ್ತು. ವಿನಾಯಕನ ಕವಿತ್ವದ ಅಭಿರುಚಿಯನ್ನು ಬಲ್ಲ ಹಾಗು ಆ ಅಲ್ಪ ವಯದಲ್ಲಿ ಆತನ ಭಗೂರೊಳಗಿನ ಸಾರ್ವಜನಿಕ ಕೆಲಸಗಳನ್ನರಿತ ನಾಶಿಕದ ಒಬ್ಬಿಬ್ಬ ಗುಣಗ್ರಾಹಿಗಳು ವಿನಾಯಕನಿಗೂ ಆ ಸಭೆಯಲ್ಲಿ ಭಾಷಣ ಮಾಡುವ ಪರವಾನಿಗೆ ದೊರಕಿಸಿದರು. ಕೂಡಲೇ ವಿನಾಯಕನು ತನ್ನ ಭಾಷಣವನ್ನು ಕೆಲ ಗಂಟೆಗಳಲ್ಲೇ ಬರೆದು ಆ ಸಭೆಯ ಪ್ರಮುಖರಿಗೊಪ್ಪಿಸಿದನು. ಮರುದಿವಸ ಸಭೆಯಲ್ಲಾದ ಪ್ರಕಟ ಭಾಷಣಗಳಲ್ಲಿ ವಿನಾಯಕನ ಭಾಷಣವೇ ಎಲ್ಲಕ್ಕೂ ಮೇಲ್ತರದ್ದೂ, ಸ್ಫೂರ್ತಿದಾಯಕವೂ ಎಂದು ನಿರ್ಧರಿಸಲ್ಪಟ್ಟು ಆತನಿಗೆ ಮೊದಲನೇ ತರಗತಿಯ ಪಾರಿತೋಷಕ ಕೂಡ ದೊರಕಿತು. ಅಂದಿನಿಂದ ವಿನಾಯಕನ ಛಾಪು ಆ ಊರ ಜನರ ಮೇಲೆ ಚೆನ್ನಾಗಿ ಕೂತಿತು.

ಬಾಲ ವಿನಾಯಕನಿಗೆ ತನ್ನ ದೇಶವು ಎಂದಿಗೆ ಸ್ವತಂತ್ರವಾದೀತೋ ಎಂದಿಗೆ ಪರಕೀಯರ ದಾಸ್ಯದಿಂದ ಮುಕ್ತವಾದೀತೋ ಎಂದು ಹಗಲಿರುಳೂ ಧ್ಯಾಸಹತ್ತಿತ್ತು. ಅದರಿಂದ ಆತನು ಇಂಗ್ಲಿಷ ಸಾಲೆಗೆ ಹೋಗಿ ತನ್ನ ನಿತ್ಯದ ಓದು ಓದುತ್ತಿರುವಾಗಲೇ ತನ್ನ ದೇಶವು ಬೇಗನೆ ಹೇಗೆ ಸ್ವತಂತ್ರವಾಗ ಬೇಕೆಂಬ ಒಗ್ಗೆ ಆಲೋಚಿಸುತ್ತಿದ್ದನು. ಭಗೂರಲ್ಲಿರುವಾಗಲೇ ಆತನು ತನ್ನ ಕುಲದೇವಿಯ ಎದುರಿಗೆ ಕುಳಿತು ತನ್ನ ದೇಶವನ್ನು ಪರದಾಸ್ಯದಿಂದ ಮುಕ್ತ ಗೊಳಿಸುವ ಬಗ್ಗೆ ಆಣೆ ತೊಟ್ಟಿದ್ದನೇನಂದರೆ—

'ಇನ್ನು ಮುಂದೆ ನನ್ನ ದೇಶದ ಸ್ವಾತಂತ್ರ್ಯವನ್ನು ಮರಳಿ ದೊರೆಕಿ ಸುವ ಸಲುವಾಗಿ ಸಶಸ್ತ್ರಕ್ರಾಂತಿಯ ಧೂಮಕೇತುವನ್ನೆಬ್ಬಿಸಿ,-ಹೊಡೆಯುತ್ತ-ಹೊಡೆಯುತ್ತ, ಸಾಯುವವರೆಗೂ ಕಾದುತ್ತೇನೆ.'

ನಾಶಿಕದಲ್ಲಿ ಆತನು ತನ್ನ ವರ್ಚಸ್ಸನ್ನು ತನ್ನ ಮಿತ್ರರಲ್ಲೂ, ಊರೊಳ ಗಿನ ಪ್ರಮುಖ ಜನರ ಮೇಲೆ ಸ್ಥಾಪಿಸಹತ್ತಿದನು; ಹಾಗು ತನ್ನ ಸ್ವೀಕೃತ ಕಾರ್ಯಕ್ಕೆ ದಿನ ಹೋದ ಜನರಿಗಿಂತ ತರುಣ ಯುವಕರೇ ತಕ್ಕವರೆಂದು ನಿರ್ಧರಿಸಿ, ಅವರದೊಂದು 'ಮಿತ್ರ ಸಮಾಜ' ಎಂಬ ಪುಟ್ಟ ಸಂಸ್ಥೆಯನ್ನು ಸ್ಥಾಪಿಸಿದನು. ಆ 'ಮಿತ್ರ ಸಮಾಜ'ದಿಂದಲೇ 'ಅಭಿನವ ಭಾರತ' ಎಂಬ ಗುಪ್ತ ಸಮಿತಿಯನ್ನು ಇಟಲಿಯೊಳಗಿನ 'ತರುಣ ಇಟಲಿ'ಯ ಧ್ಯೇಯದಂತೆ ಪ್ರಸ್ಥಾಪಿಸಿದನು. ಮಿತ್ರಸಮಾಜದೊಳಗಿನ ಪ್ರಮುಖ ಜನರಿಂದ ತಾನು ತನ್ನ ಕುಲದೇವತೆಯೆದುರು ಆಣೆ ತೊಟ್ಟಂತೆ 'ನನ್ನ ದೇಶದ ಸ್ವಾತಂತ್ರ್ಯ ವನ್ನು ಮರಳಿ ದೊರೆಕಿಸುವ ಸಲುವಾಗಿ ಸಶಸ್ತ್ರ ಕ್ರಾಂತಿಯ ಧೂಮಕೇತುವ ನ್ನೆಬ್ಬಿಸಿ, ಹೊಡೆಯುತ್ತ ಹೊಡೆಯುತ್ತ ಸಾಯುವವರೆಗೂ ಕಾದುತ್ತೇನೆ'ಂದು ಪ್ರಮಾಣ ಮಾಡಿಸುವನು.

ಸಾವರಕರ ವಿನಾಯಕನ ಮಿತ್ರ ಸಮಾಜನಲ್ಲಿ ಬರೀ ಬ್ರಾಹ್ಮಣರೇ ಇದ್ದರೆಂತಲ್ಲ; ಬ್ರಾಹ್ಮಣರಿಗಿಂತ ಇತರ ಹಿಂದುಗಳೇ ಹೆಚ್ಚಾಗಿದ್ದರು. ವಿನಾ ಯಕನಿಗೆ ಬಾಲ್ಯದಿಂದಲೂ ಜಾತಿ ಭೇದವು ಬರ್ಸ್ತ. ಎಲ್ಲ ಹಿಂದುಗಳಲ್ಲಿ ಊಟ-ಉಪಚಾರಗಳಿಗಾಗಿ ಆತನು ಎಂದೂ ಸಂಕೋಚಗೊಳ್ಳುತ್ತಿರಲಿಲ್ಲ. ಚಿಕ್ಕಂದಿನಲ್ಲಿ ಆತನ ಮನೆಯ ಋಣಾನುಬಂಧಿಕರಾದ ಹಲವು ಜನ ಅಬ್ರಾ ಹ್ಮಣ ಹಿಂದೂ ಕುಟುಂಬಗಳಲ್ಲಿ ನಿಸ್ಸಂಕೋಚದಿಂದ ಊಟ ಮಾಡುತ್ತಿದ್ದನು.

ಜಾತಿಭೇದವಿರಬಾರದೆಂದೇ ಆತನ ಹಂಬಲ. ಆತನ ಸಹಕಾರಿಗಳಲ್ಲಿ ಬ್ರಾಹ್ಮಣರು, ಮರಾಟರು, ಸಿಂಪಿಗರು, ಹಡಪದವರು, ಅಗಸರು ಮೊದಲಾದ ಎಲ್ಲ ಹಿಂದುಗಳ ಸಮಾವೇಶವಾಗಿತ್ತು. ಅವನ ಗುಪ್ತಸಮಿತಿಯಲ್ಲಿ ಕೆಲ ಜನ ಓದಿದವರಿದ್ದಂತೆ ಹಲವು ಜನ ನಿರಕ್ಷರಿಗಳೂ ಕಲೆತಿದ್ದರು; ಆದರೆ ಅವರೆಲ್ಲರೂ ಬಾಲವಿನಾಯಕನ ಉಜ್ವಲ ಆದೇಶದಂತೆ ನಡೆಯುತ್ತಿದ್ದರು. ಅವರೆಲ್ಲರಿಗೂ ಬೌದ್ಧಿಕ ಹಾಗು ಸಾಂಘಿಕ ಶಿಕ್ಷಣ ಒಬ್ಬವಿನಾಯಕನಿಂದಲೆ ದೊರೆಯುತ್ತಿತ್ತು.

ನಾಶಿಕದ ಮಿತ್ರ ಸಮಾಜ, ಅಭಿನವ ಭಾರತದ ಗುಪ್ತ ಕಟ್ಟು, ಬೇರೆ ಗುಪ್ತ ಸಮಿತಿಗಳ ತಮ್ಮ ತಮ್ಮ ನಿರ್ದಿಷ್ಟ ಕೆಲಸಗಳನ್ನು ಮಾಡಹತ್ತಿದಾಗ ಪುಣೆಯಲ್ಲಿ 'ಕಾಳ' ಎಂಬ ಕ್ರಾಂತಿ ಪ್ರೋತ್ಸಾಹಕ ವೃತ್ತಪತ್ರವನ್ನು ಪ್ರೊ. ಶಿವರಾಮಪಂತ ಪರಾಂಜಪೆ ಎಂಬ ವಿದ್ವಾಂಸರು ಹೊರಡಿಸುತ್ತಿದ್ದರು. ಆಗಿನ ಅದರೊಳಗಿನ ಲೇಖಗಳನ್ನೋದಿದವರು ಈಗಲೂ ಹುರುಪುಗೊಳ್ಳಬಹುದು. ಅಷ್ಟು ಪ್ರಖರ ಲೇಖಗಳು ಅದರಲ್ಲಿ ಪ್ರಕಟವಾಗುತ್ತಿದ್ದವು. ವಿನಾಯಕನು ಕಾಳ ಪತ್ರವನ್ನು ತಾನು ಓದುವನಲ್ಲದೆ, ತನ್ನ ಅನುಯಾಯಿಗಳಿಂದಲೂ ಅದನ್ನು ಅಭ್ಯಾಸಪೂರ್ವಕವಾಗಿ ಓದಿಸಿಕೊಳ್ಳುತ್ತಿದ್ದನು. ಆ ಪತ್ರದ ವಾಚನ, ವಿನಾಯಕನ ಉದ್ಬೋಧಕ ಭಾಷಣಗಳಿಂದ ಆತನ ಅನುಯಾಯಿಗಳು ಒಳ್ಳೇ ಉತ್ಸಾಹದಿಂದ ತಮ್ಮ ಕೆಲಸಗಳನ್ನು ಜರುಗಿಸಹತ್ತಿದರು.

ಇದೇ ಕಾಲಕ್ಕೆ ಭಗೂರಲ್ಲಿ ಪ್ಲೇಗು ಬಂತು. ಆ ಊರಿಗೆ ಅದೇ ಮೊದಲನೇ ಸಲದ ಪ್ಲೇಗು. ಆ ಪ್ಲೇಗಿನಲ್ಲಿ ಭಗೂರೊಳಗಿನ ಸಾವರಕರರ ಒಬ್ಬಿಬ್ಬನಿಷ್ಠಾವಂತ ಮಿತ್ರರು ತೀರಿಕೊಂಡರಲ್ಲದೆ, ವಿನಾಯಕರಾಯರ ತಂದೆ ದಾಮೋದರಪಂತರೂ ತೀರಿಕೊಂಡರು. ಮುಂದೆ ಒಂದೇ ವಾರದಲ್ಲಿ ಅವರ ದೊಡ್ಡಪ್ಪನೂ ತೀರಿಕೊಂಡನು. ಅದೇ ಕಾಲಕ್ಕೆ ವಿನಾಯಕನ ತಮ್ಮನಾದ ನಾರಾಯಣನಿಗೂ ಪ್ಲೇಗು ಬಂತು. ತಂದೆಗೆ ಪ್ಲೇಗು ಬಂದಾಗ ಗಣೇಶಪಂತನು ಊರಲ್ಲಿರಲಿಲ್ಲ. ತಂಗಿಯನ್ನು ತವರೂರಿಗೆ ಕರೆತರಲೆಂದು ತ್ರ್ಯಂಬಕ ಕ್ಷೇತ್ರಕ್ಕೆ ಹೋಗಿದ್ದನು. ತಂದೆಯು ಸಾಯುವ ದಿನವೇ ಗಣೇಶಪಂತನು ತನ್ನ ತಂಗಿಯಾದ ಮಾಯಿ ಹಾಗು ಆಕೆಯ ಗಂಡನೊಡನೆ ಬಂದನು. ಮಾವನಿಗೆ ಪ್ಲೇಗು ಬಂದದ್ದನ್ನು ಕಂಡು ಮಾಯಿಯ ಗಂಡನು ಅಲ್ಲಿ ಕ್ಷಣ ಸಹ ನಿಲ್ಲದೆ ತನ್ನ ಹೆಂಡತಿಯೊಡನೆ ತಮ್ಮೂರಿಗೆ ಹೊರಟು ಹೋದನು! ಪ್ಲೇಗಿನ ಅಂಜಿಕೆಯೇ ಆಗ ಅಷ್ಟೊಂದು ತೀಕ್ಷ್ಣವಾಗಿತ್ತು.

ತಂದೆ ತೀರುವ ಮೊದಲೇ ಸಾವರಕರರ ಮನೆಯಲ್ಲಿ ಕಳವಾಗಿ ಬಹಳ ಹಾನಿಯಾಗಿತ್ತು. ತಂದೆ ತೀರಿದ ಬಳಿಕ ಆ ಮೂವರು ಹುಡುಗರೂ ಗಣೇಶ ಪಂತನ ಹೆಂಡತಿಯೂ ನಿಜವಾಗಿಯೂ ಪರದೇಶಿಗಳಾದರು. ಆರ್ಥಿಕ ಸ್ಥಿತಿಯಂತೂ ತೀರ ಕನಿಷ್ಠಕ್ಕಿಳಿಯಿತು. ಬರುವ ಹಣವೆಲ್ಲ ಬಗೆ ಬಗೆಯ ನೆವಗಳಿಂದ ಬಾರದಾಯಿತು. ಕೊಡತಕ್ಕ ಸಾಲ ಮಾತ್ರ ದೂತ್ತೆಂದು ಬಂದು ನಿಂತಿತು. ಇಷ್ಟೇ ಅಲ್ಲ, ಅವರಿಗೆ ಕೆಲ ದಿನಗಳ ವರೆಗೆ ಜೀವನ ಸಾಗಿಸುವದು ಕೂಡ ಕಠಿಣವಾಯಿತು. ಇನಾಮುದಾರರ ಮನೆತನ, ಹೆರವರಲ್ಲಿ ತಮ್ಮ ದೈನ್ಯ ಹೇಳುವ ಹಾಗಿಲ್ಲ. ಹೀಗಾಗಿ ಗಣೇಶಪಂತನಿಗೆ ತಮ್ಮ ನಾಲ್ವರ ಉಪಜೀವನ ಸಾಗಿಸಿಕೊಳ್ಳಬೇಕಾದರೆ ಸಾಕುಸಾಕಾಯಿತು. ಭಗೂರೊಳಗಿನ ಕ್ವಾರಂಟೈನದ ಅವಧಿ ತೀರಿದ ಬಳಿಕ ಅವರೆಲ್ಲರೂ ನೆಟ್ಟಗೆ ನಾಶಿಕಕ್ಕೆ ಹೋದರು. ಅಲ್ಲಿ ಪ್ಲೇಗಿನಿಂದ ಪೀಡಿತನಾದ ಅವರ ಚಿಕ್ಕ ತಮ್ಮನನ್ನು ಪ್ಲೇಗಿನ ಆಸ್ಪತ್ರೆಗೆ ಸೇರಿಸಿದರು; ಹಾಗು ಆತನ ಜೊತೆಗಿರಲು ಗಣೇಶಪಂತನೇ ಆಸ್ಪತ್ರೆಯಲ್ಲಿರಹತ್ತಿದನು. ಆಗ ಪ್ಲೇಗಿನ ರೋಗಿಯ ಶುಶ್ರೂಷೆ ಮಾಡುವವನನ್ನು ಆಸ್ಪತ್ರೆಯ ಹೊರಗೆ ಊರೊಳಗೆ ಬಿಡುತ್ತಿರಲಿಲ್ಲವಾದ್ದರಿಂದ ಇತ್ತ ಮನೆಯಲ್ಲಿ ೧೩-೧೪ ವರ್ಷದ ವಿನಾಯಕನೂ ಅದೇ ವಯಸ್ಸಿನ ಆತನ ಅತ್ತಿಗೆಯೂ ಇಬ್ಬರೇ ಇರುತ್ತಿದ್ದರು. ಗಣೇಶರಾಯನ ಊಟಕ್ಕೆ ವಿನಾಯಕನೇ ಮನೆಯಿಂದ ಅಡಿಗೆಯನ್ನೊಯ್ಯುತ್ತಿದ್ದನು.

ಹೀಗೆ ಕೆಲ ದಿನ ಆ ಚಿಕ್ಕ ತಮ್ಮನ ಉಪಚಾರ ನಡೆದಿರಲು ಒಂದು ದಿನ ಗಣೇಶರಾಯನಿಗೂ ಸಂಸರ್ಗದಿಂದ ಪ್ಲೇಗು ಅಂಟಿತು. ಅದನ್ನು ತಿಳಿದು ವಿನಾಯಕನ ಸ್ಥಿತಿ ಏನಾಗಿರಬಹುದು! ಆದರೂ ಆ ಧೈರ್ಯಶಾಲಿಯು ಆ ಸಂಗತಿಯನ್ನು ತನ್ನ ಅತ್ತಿಗೆಗೆ ಒಮ್ಮೆಲೆ ತಿಳಿಸಿ ಅವಳನ್ನು ಗಾಬರಿಗೊಳಿಸದೆ, ಕೆಲ ದಿನಗಳ ಮೇಲೆ-ಗಣೇಶರಾಯನ ಆ ಬೇನೆಯು ಇಳಿಮುಖವಾದ ಮೇಲೆ-ಆಕೆಗೆ ಆ ಸಂಗತಿ ತಿಳಿಸಿದನು. ಗಣೇಶರಾಯ ಹಾಗು ಅವರ ತಮ್ಮ ನಾರಾಯಣ ಇವರಿಬ್ಬರೂ ಸಂಪೂರ್ಣ ಗುಣವಾಗಿ ಆಸ್ಪತ್ರೆಯಿಂದ ಮನೆಗೆ ಬರಲು ಮುಂದೆ ೨-೩ ತಿಂಗಳು ಹಿಡಿದವು. ಆದು ವರೆಗೂ ಬಾಲ ವಿನಾಯಕನು ತಮ್ಮ ಮನೆತನದ ವ್ಯವಸ್ಥೆಯನ್ನು ಸ್ಥಾಯಿಯಾಗಿ ಸಾಗಿಸಿ, ಅಣ್ಣ-ಅತ್ತಿಗೆ ಇವರಾರಿಗೂ ಮನೆತನದ ಜಳ ಹತ್ತದಂತೆ ವರ್ತಿಸಿದನು.

———

ನಾಶಿಕದಲ್ಲಿ ವಿನಾಯಕನು ತನ್ನ ೧೮ನೇ ವರ್ಷ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಆ ವರ್ಷದ ಪ್ರಿಲಿಮನರಿ ಪರೀಕ್ಷೆಯಲ್ಲಿ ಅವನಿಗೆ ಸಾಕಷ್ಟು ಗುಣಗಳು ಬಿದ್ದಿರಲಿಲ್ಲ. ಅಣ್ಣ-ತಮ್ಮಂದಿರ ಬೇನೆ, 'ಅಭಿನವ ಭಾರತ'ದ ಚಳವಳಿ, ಸಭೆ-ಸಮ್ಮೇಲನ ಮುಂತಾದವುಗಳ ಮೂಲಕ ಆತನ ಅಭ್ಯಾಸ ಸರಿಯಾಗಿ ಆಗಿರಲಿಲ್ಲ. ಆದರೂ ಆತನು ಪ್ರಿಲಿಮನರಿ ಆದ ಮೇಲೆ ಮುಂದಿನ ಒಂದು-ಒಂದೂವರೆ ತಿಂಗಳಲ್ಲಿ ತನ್ನ ಅಭ್ಯಾಸವನ್ನು ಮನಮುಟ್ಟಿ ಮಾಡಿ ಆ ಪರೀಕ್ಷೆಯಲ್ಲಿ ಉತ್ತಮರೀತಿಯಿಂದ ಪಾಸಾದನು.

ವಿನಾಯಕರಾಯರ ದೇಹಸ್ಥಿತಿ ಅಷ್ಟೊಂದು ಬಲಿಷ್ಠವಾಗಿರಲಿಲ್ಲ. ಅಚ್ಚಗೆಂಪಿನ, ನಾಜೂಕ ಶರೀರದ, ಸಾಮಾನ್ಯ ನಿಲುವಿಕೆಯ ಆ ಚೆಲುವ ಹುಡುಗನು ಶ್ರೀಮಂತರ ಪೀಳಿಗೆಗೆ ತಕ್ಕಂತೆಯೇ ಇದ್ದನು; ಆದರೆ ಈ ತನ್ನ ಸೂಕ್ಷ್ಮ ದೇಹಸ್ಥಿತಿಯು ತಾನು ಪ್ರಾರಂಭಿಸಿರುವ ಸ್ವಾತಂತ್ರ್ಯ ಸಂಗ್ರಾಮಕ್ಕೆ ತೀರ ನಿರುಪಯುಕ್ತವೆಂಬುದು ವಿನಾಯಕನಿಗೆ ಮುಂದೆ ಮುಂದೆ ಅನುಭವಕ್ಕೆ ಬರಹತ್ತಿತು; ಯಾಕಂದರೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದರ ಸೈನಿಕರು ಹಲವು ಬಗೆಯ ಕಷ್ಟ ನಷ್ಟಗಳಿಗೆ ಎದೆಗೊಡಬೇಕಾಗುವದು. ಸ್ವಕೀಯರ ನಿರುತ್ಸಾಹಗೊಳಿಸುವ ಬಿರುನುಡಿ, ಸರಕಾರದ ಒತ್ತಡದ ಮೂಲಕ ಪೋಲೀಸರ ಹಾಗು ಸೆರೆಮನೆಯವರ ಪ್ರಹಾರ, ಜೇಲಿನೊಳಗಿನ ಕಠಿಣ ಶಿಕ್ಷೆ, ಉಪವಾಸ-ವನವಾಸ, ಇನ್ನಿತರ ಹಲವು ಸಂಕಟಪರಂಪರೆಗಳಿಗೆ ಆ ವ್ರತಸ್ಥನು ಸಿದ್ಧವಾಗಬೇಕಾಗುವದು. ಆದ್ದರಿಂದ ಸ್ವಾತಂತ್ರ್ಯಯುದ್ಧದಲ್ಲಿ ಭಾಗ ವಹಿಸುವವನು ಮನಸ್ಸಿನಿಂದ ಅತ್ಯಂತ ಕಾಟಕನಾಗಿರುವಂತೆ ದೇಹದಿಂದಲೂ ಅತ್ಯಂತ ಬಲಿಷ್ಠ ಹಾಗು ಕಾಟಕನಿರಬೇಕಾಗುವದೆಂದು ತಿಳಿದು, ವಿನಾಯಕನು ವ್ಯಾಯಾಮ ಮಾಡಿ ತನ್ನ ದೇಹದ ದಾರ್ಢ್ಯವನ್ನು ಹೆಚ್ಚಿಸಲಾರಂಭಿಸಿದನು. ಆತನು ಆಗ ಸಾಮು, ಸೂರ್ಯನಮಸ್ಕಾರ, ಕುಸ್ತಿ, ಮಲಖಂಬ, ಡಂಬೆಲ್ಸು ಮುಂತಾದ ವ್ಯಾಯಾಮಗಳನ್ನು ಮಾಡಹತ್ತಿದನು. ವರ್ಷಾರು ತಿಂಗಳುಗಳ ತಾಲೀಮಿನಿಂದ ಕುಳ್ಳ ಹಾಗು ಸೂಕ್ಷ್ಮ ಶರೀರದ ವಿನಾಯಕನು ತಕ್ಕ ಮಟ್ಟಿಗೆ ನಿಲುವಿಕೆಯ ಧಷ್ಟಪುಷ್ಟ ಮನುಷ್ಯನಾದನು. ಆತನ ಮನಸ್ಸಿನ ದಾರ್ಢ್ಯವಂತೂ ಮೊದಲಿನಿಂದಲೂ ಹೆಚ್ಚಾಗಿತ್ತು. ಶರೀರ ಬಲದಿಂದ ಅದು ಇನ್ನಿಷ್ಟು ಹೆಚ್ಚಿತೆಂದು ಬೇರೆ ಹೇಳಬೇಕಾಗಿಲ್ಲ.

ಸಾವರಕರರು ಕೇವಲ ಶಾರೀರಿಕ ವ್ಯಾಯಾಮಕ್ಕಾಗಿ ವ್ಯಾಯಾಮ ಮಾಡಬೇಕೆಂದು ಮಿತ್ರಸಮಾಜದವರಿಗೆ ಬೋಧಿಸುತ್ತಿರಲಿಲ್ಲ. ಯಾವ ರಾಜ್ಯ ಕ್ರಾಂತಿಯ ಭಯಂಕರ ದಿವ್ಯದಲ್ಲಿ ನಾವು ನಮ್ಮ ಇಡೀ ಆಯುಷ್ಯವನ್ನು ಬಲಿದಾನ ಮಾಡಬೇಕಾಗಿದೆಯೋ ಆ ಕ್ರಾಂತಿಯ ಭಾವೀ ಅಸಹ್ಯ ಸಂಕಟಗಳನ್ನು ಸಹಿಸುವ ಶಕ್ತಿ-ಬಲಗಳು ನಮ್ಮ ಶರೀರಕ್ಕಿರಬೇಕೆಂದೇ ನಾವುಗಳೆಲ್ಲ ವ್ಯಾಯಾಮ ಮಾಡಬೇಕೆಂದು ಅವರು ಹೇಳುತ್ತಿದ್ದರು. ಪ್ರತಿಯೊಬ್ಬ ಕ್ರಾಂತಿ ಸೇವಕನು ಚೆನ್ನಾಗಿ ಈಸು ಕಲಿತಿರಬೇಕು, ಒಂದೇಸವನೆ ಓಡುವ ಅಭ್ಯಾಸವಿಡಬೇಕು, ಹಸಿವೆ ತೃಷೆಗಳನ್ನು ಸಹಿಸಬೇಕು, ಬೈಲಲ್ಲಿ ಮಲಗುವ ರೂಢಿಯಿರಬೇಕು, ಗಿಡ-ಗುಡ್ಡಗಳನ್ನು ಹತ್ತುವ ಸಾಹಸ ಮಾಡಬೇಕು. ಅಡವಿಯಲ್ಲಿ ಅಲೆಯಬೇಕು, ಬಹು ಎತ್ತರದಿಂದ ಹಾರಬೇಕು ಇವೆಲ್ಲವುಗಳನ್ನು ಸರಾಗವಿಟ್ಟಿರಬೇಕು; ಅಲ್ಲದೆ ಅವಮಾನ ಸಹಿಸಿಕೊಳ್ಳುವವ, ದೇಹ ದಂಡನೆ ಹಾಗು ಇತರ ಅನೇಕ ಛಲನೆಗಳಿಗೆ ಬಿಕ್ಕೆ ಹಾಕಕೂಡದಂತಹ ವಸ್ತಾದಿಯೇ ನಿಜವಾದ ಕ್ರಾಂತಿ ಸೇವಕನೆಂದು ಅವರು ಹೇಳುತ್ತಿದ್ದರು.

ವಿನಾಯಕನ ಮ್ಯಾಟ್ರಿಕ್ ಪರೀಕ್ಷೆ ಪಾಸಾಗುವ ಹೊತ್ತಿಗೆ ಸಾವರಕರರ 'ಅಭಿನವ ಭಾರತ' ಮಂಡಲವು ತನ್ನ ಪ್ರಭಾವೀ ಚಳವಳಿಯ ಮೂಲಕ ಸರಕಾರದ ಕಣ್ಣಲ್ಲಿ ಒತ್ತಹತ್ತಿತು. 'ಅಭಿನವ ಭಾರತ' ಗುಪ್ತ ಸಮಿತಿಯ ಕಾಯಂ ಸಭಾಗೃಹವು ನಾಶಿಕ ಕ್ಷೇತ್ರದೊಳಗಿನ ತೀರ ಅಪ್ರಸಿದ್ಧವಾದ ಸಂದಿಯೊಳಗಿನ ಒಂದು ಮೇಲಂತಸ್ತಿನ ಮೂಲೆಯ ಕೋಣೆಯು. ಸಾಮಾನ್ಯ ಜನರಿಗಂತೂ ಅದನ್ನು ಹುಡುಕಿ ತೆಗೆಯುವದು ಕಠಿಣವೇ ಆಗಿತ್ತು; ಆದರೆ ಸರಕಾರೀ ಗುಪ್ತ ಪೋಲೀಸರಿಗೆ ಕೂಡ ಆ ಸ್ಥಳವನ್ನು ಶೋಧಿಸುವದು ದುಸ್ತರವೇ ಸರಿ. ಒಂದು ವೇಳೆ ಅವರು ಅದನ್ನು ಕಂಡಹಿಡಿದು ಶೋಧಿಸ ಹೋದರೂ ಅವರಿಗೆ ಅದರಲ್ಲೇನು ಸಿಗಬೇಕು? 'ಮಿತ್ರಸಮಾಜ' ಎಂಬ ಹೆಸರಿನ ಹಲಗೆ, ನಾಲ್ಕೆಂಟು ನಿರುಪದ್ರವಿಗಳಾದ ವೃತ್ತಪತ್ರ, ಕತೆ-ಕಾದಂಬರಿಗಳ ಪುಸ್ತಕಗಳು ಹಾಗು ಒಂದು ನೇಜಿನ ಡ್ರಾವಿನಲ್ಲಿ ೨೦-೨೫ ಜನರ ಹೆಸರುಗಳುಳ್ಳ ಒಂದು ಯಾದಿ. ಆ ಹೆಸರುಗಳಲ್ಲಿ ಕೆಲವು ಜನ ಸರಕಾರೀ ನೌಕರರು, ಕೆಲವು ಮಂದಿ ಕ್ಷೇತ್ರಸ್ಥ ಭಟ್ಟ-ಭಿಕ್ಷುಕರು, ನಾಲ್ಕೆಂಟು ಜನ ವಿದ್ಯಾರ್ಥಿಗಳು. ವಿನಾಯಕರಾಯನ ಹೆಸರು ಮಾತ್ರ ಅದರಲ್ಲಿ ಇದ್ದೇ ಇರುತ್ತಿತ್ತು.

ಹೀಗೆ ಸಾವರಕರರು ತಮ್ಮ ಚಳವಳಿಯ ಸೂತ್ರವು ಒಮ್ಮೆಲೆ ಸರಕಾರದ ಕೈವಶವಾಗಬಾರದೆಂದು ಮೊದಲಿನಿಂದಲೂ ಬಹು ಜಾಗರೂಕತೆ ವಹಿಸುತ್ತಿದ್ದರು. ಒಂದು ದಿನ ಮಿತ್ರ ಸಮಾಜದೊಳಗಿನ ಸಾವರಕರರ ಒಬ್ಬ ಅನುಯಾಯಿಗೂ ಸಾವರಕರರಿಗೂ ಒಂದು ಮಾತಿನ ಬಗ್ಗೆ ಚರ್ಚೆಯುಂಟಾಯಿತು. ಆ ಅನುಯಾಯಿಯು ಸಾವರಕರರಿಗಿಂತ ವಯಸ್ಸಿನಿಂದ ದೊಡ್ಡವನು; ಅಲ್ಲದೆ ಸರಕಾರೀ ನೌಕರನು. ಆದರೂ ಆತನು ಸಾವರಕರರ ಬುದ್ಧಿ, ಚಟುವಟಿಕೆಯ ಧುರೀಣತ್ವ, ಪಾಂಡಿತ್ಯ, ಕವಿತ್ವ ಕುಶಲತೆಗಳಿಗೆ ಮನಸೋತು ಸಾವರಕರರ ಅನುಯಾಯಿಯಾಗಿ, ಅವರ ದೀಕ್ಷೆಯನ್ನು ಸ್ವೀಕರಿಸಿ, ಸ್ವಾತಂತ್ರ್ಯ ವ್ರತದ ಆಣೆ ಕೂಡ ತೊಟ್ಟಿದ್ದನು. ಹೀಗಿದ್ದೂ ಆತನು ಸಾವರಕರರ ವಿರುದ್ಧ ಚರ್ಚೆಗೆ ನಿಂತ ಕಾರಣವೆಂದರೆ, ತಮ್ಮ ಅಭಿನವ ಭಾರತ ಸಂಘವು ತನ್ನ ಪ್ರಖರ ಮತ್ತು ಪ್ರಕಟ ಚಳವಳಿಯಿಂದ ಇಷ್ಟು ಬೇಗನೆ 'ಸರಕಾರದ ಕಡೆಗಣ್ಣಿಗೆ ಎರವಾಗಬಾರದೆಂಬದೇ ಆಗಿತ್ತು. ಆ ದಿವಸ ಆ ಉಭಯತರಲ್ಲಿ ನಡೆದ ಚರ್ಚೆಯ ವಿಷಯವು ಹೀಗಿದ್ದಿತು:—

ಅದೇ ವರ್ಷ ಇಂಗ್ಲಂಡದ ಸುಪ್ರಸಿದ್ಧ ವ್ಹಿಕ್ಟೋರಿಯಾ ಮಹಾರಾಣಿ ತೀರಿಕೊಂಡದ್ದರಿಂದ ಹಿಂದುಸ್ಥಾನದಲ್ಲೆಲ್ಲ ಶೋಕಸೂಚಕ ಸಭೆಗಳು ಊರೂರಿಗೂ ಆಗುತ್ತಿದ್ದವು. ಪ್ರಖ್ಯಾತ ರಾಷ್ಟ್ರೀಯ ವೃತ್ತಪತ್ರಗಳಲ್ಲೂ ಆಗಾಗ್ಗೆ ರಾಜನಿಷ್ಠೆಯನ್ನು ವ್ಯಕ್ತಪಡಿಸುವ ಮೇಲಾಟವು ನಡೆದಿತ್ತು. ಯಾಕಂದರೆ ಆಗಿನ ಕಟ್ಟಾ ರಾಷ್ಟ್ರೀಯವೆಂದೆನಿಸಿಕೊಳ್ಳುವ ಪಕ್ಷದ ಪ್ರತಿಜ್ಞೆಯಾದರೂ 'ಇಂಗ್ಲಿಷರ ರಾಜ್ಯವು ಹಿಂದುಸ್ಥಾನದಲ್ಲಿರಬೇಕೋ ಬೇಡವೋ ಎಂಬ ವಾದವೇ ಇಲ್ಲ; ಆದ್ದರಿಂದ ರಾಜನ ವಿರುದ್ಧ, ಬಾದಶಹನ ವಿರುದ್ಧ ನಮ್ಮ ಜಗಳವು ಕೊಂಚವೂ ಇರದೆ, ನಾವು ಇಂಗ್ಲಂಡದ ರಾಜನಿಗೆ ಇಂಗ್ಲಿಷ ಜನರಷ್ಟೇ ರಾಜನಿಷ್ಠ ಪ್ರಜೆಗಳಾಗಿದ್ದೇವೆ. ನಮ್ಮ ಜಗಳವು ಕೇವಲ ಅದರಲ್ಲಿಯ ಕೆಟ್ಟ ಅಧಿಕಾರಿಗಳ ಮತ್ತು ಪದ್ಧತಿಯ ಬಗ್ಗೆ ಇರುತ್ತದೆ. ಆ ಪದ್ಧತಿಯು ಬದಲಾಗಿ ಚಲೋ ಅಧಿಕಾರಿಗಳು ಬಂದರೆ ನಾವು ಅವರನ್ನು ಗೌರವಿಸುವೆವು. (ಲಾರ್ಡ ರಿಪನ್ನ ಎಂಬ ಸಜ್ಜನ ಗವರ್ನರ ಜನರಲ್ಲರ ರಥವನ್ನು ಒಮ್ಮೆ ಕಾಶಿಯೊಳಗಿನ ಪ್ರಸಿದ್ಧ ಪಂಡಿತರು ಕೂಡ ಎಳೆದಿದ್ದರಂತೆ) ಎಂದಿದ್ದಿತು; ಆದರೆ ಸಾವರಕರರು ಹಾಗಲ್ಲ.

ನಮ್ಮಲ್ಲಿಯ ರಾಜಕೀಯ ಉನ್ನತಿಯ ಅವನತ ಸ್ಥಿತಿಯಲ್ಲಿ ವ್ಹಿಕ್ಟೋರಿಯಾ ಮಹಾರಾಣಿಯು ತೀರಿಕೊಳ್ಳಲು, ಯಾವಳೊಬ್ಬ ಸ್ವರ್ಗದ ದೇವಿ

ಯನ್ನು ಸ್ತುತಿಸುವಂತೆ ಇಡೀ ಹಿಂದುಸ್ಥಾನದಲ್ಲೆಲ್ಲ ಆಕೆಯ ಗುಣಗಾನವು ನಡೆಯಿತು. ಹೊಸ ಬಾದಶಹನಾದ ಎಡ್ವರ್ಡನ ಚರಣಗಳ ಮೇಲೆ ಜನರು ಮಾನಸಿಕ ಸಾಷ್ಟಾಂಗ ನಮಸ್ಕಾರಗಳನ್ನು ಹಾಕ ಹತ್ತಿದರು. ಹಿಂದಕ್ಕೆ ಅದೇ ರಾಣಿಯ ಜ್ಯುಬಿಲೀ ಉತ್ಸವದ ದಿವಸ ಪುಣೆಯಲ್ಲಿ ವೀರ ಚಾಫೇಕರ ಬಂಧುಗಳು ರ್‍ಯಾಂಡನ ಕೊಲೆಮಾಡಿ ಆ ಉತ್ಸವಕ್ಕೆ ಕುಂದನ್ನುಂಟು ಮಾಡಿದ್ದರು. ಸರಕಾರವು ಪುಣೆಯೊಳಗಿನ ಯಾವ ವ್ಯಕ್ತಿಗಳ ಮೇಲೂ ಸಂಸ್ಥೆಗಳ ಗಳ ಮೇಲೂ ಆ ಬಗ್ಗೆ ರೋಷ ತಾಳಿತ್ತೋ ಅವರೆಲ್ಲ ರಾಣಿಯ ಈ ಶೋಕ ಸೂಚಕ ಸಭೆಗಳಲ್ಲಿ ಭಾಗ ವಹಿಸಿ, ಮಹಾರಾಣಿಯನ್ನು ಬಗೆಬಗೆಯಿಂದ ಹೊಗಳಿ, ತಮ್ಮ ರಾಜನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು.

ಮೇಲಿನ ಪುಣೆಯ ಕಾರಣವಲ್ಲದಿದ್ದರೂ ಬೇರೆ ಕಾರಣಗಳಿಂದ ನಾಶಿಕದೊಳಗಿನ ಸಾವರಕರರ ಮಿತ್ರ ಸಮಾಜ ಸಂಸ್ಥೆಯಾದರೂ ಸರಕಾರದ ಕಡೆಗಣ್ಣಿಗೆ ಗುರಿಯಾಗಿತ್ತು. ಈ ಸಂದರ್ಭದಲ್ಲಿ ತೋರಿಕೆಗೇ ಎಂದು ತಾವೂ ಒಂದು ಶೋಕ ಸೂಚಕಸಭೆ, ಮಾಡಿ ತಾವು ಅತ್ಯಂತ ರಾಜನಿಷ್ಠರಿರುತ್ತೇವೆಂಬದನ್ನು ಸರಕಾರದ ನಿದರ್ಶನಕ್ಕೆ ತಂದುಕೊಡಬೇಕೆಂದು ಸಾವರಕರರ ಆ ಮಿತ್ರರ ಅಭಿಪ್ರಾಯವಿತ್ತು; ಆದರೆ ಸಾವರಕರರು ತಮ್ಮ ಮಿತ್ರರ ಕೋಟಿಕ್ರಮಕ್ಕೆ ತೀರ ವಿರುದ್ಧವಾಗಿ ಹೇಳಿದ್ದೇನಂದರೆ, 'ಗೆಳೆಯಾ, ರಾಜ್ಯನಿಷ್ಠೆಯ ಢೋಂಗಿಗಾಗಿ ನೀನೀ ಸಭೆಕೂಡಿಸಬೇಕೆನ್ನುತ್ತೀ. ನೀನಾದರೂ ವ್ಹಿಕ್ಟೋರಿಯಾ ರಾಣಿ, ಎಡ್ವರ್ಡ ರಾಜ ಇವರುಗಳು ಇಂಗ್ಲಂಡದ ರಾಜರು; ನಮ್ಮ ಹಿಂದುಸ್ಥಾನಕ್ಕಲ್ಲೆಂದೇ ಹೇಳುತ್ತೀ. ನಿನ್ನ ಅಭಿಪ್ರಾಯವು ಭಿನ್ನವಾಗಿಲ್ಲೆಂಬದು ಸಂತೋಷಕರವೇ; ಆದರೆ ಈ ಸಭೆಯನ್ನು ರಾಜನೀತಿಯ ಒಂದು ಸೋಗು ಎಂದು ಮಾಡಬೇಕೋ ಬಾರದೋ ಎಂಬದಿಷ್ಟೇ ಪ್ರಶ್ನೆ. ರಾಜನಿಷ್ಠೆಯ ಸೋಗನ್ನು ಸ್ವಾತಂತ್ರ್ಯೇಚ್ಛುಗಳು ವಿಶೇಷ ಪ್ರಸಂಗಗಳಲ್ಲೆಲ್ಲ ಹಾಕಲೇಬೇಕು. ಅಥವಾ 'ಗುಪ್ತಸಂಸ್ಥೆ' ಎಂದರೆ ರಾಜನೀತಿಯದೊಂದು ಸೋಗೇ ಆಗಿರುತ್ತದೆ. ಪ್ರಸಂಗ ವಿಶೇಷದಲ್ಲಿ ಶಿವಾಜಿಯು ಔರಂಗಜೇಬನಿಗೆ ಶರಣಾಗತಿಯ ಚೀಟಿ ಕೂಡ ಕಳಿಸಿದ್ದನು. ಶ್ರೀಕೃಷ್ಣನು ಕಂಸನನ್ನುಕೊಲ್ಲಲಿಕ್ಕೆ ಡಾಣಾಡಂಗುರಾಗಿ ಮಥುರೆಗೆ ಹೋಗಲಿಲ್ಲ. ಆದರಂತೆ ನಾವಾದರೂ ವಿಶೇಷ ಪ್ರಸಂಗಗಳಲ್ಲಿ ರಾಜನೀತಿಯ ಸೋಗು ಹಾಕೋಣ; ಆದರೆ ಈಗ ಅಂಥ ಪ್ರಸಂಗವೆಲ್ಲಿದೆ? ವೈರಿಯನ್ನು ಮೋಸಗೊಳಿಸಲೆಂದು ಯಾವಾಗ ನಾವು ಒಂದು ಸೋಗು ಹಾಕು

ವೆವೋ ಆಗ ನಾವು ಯಾವಾಗಲೂ ನೋಡಬೇಕೇನೆಂದರೆ, ಆ ನಮ್ಮ ಮೋ-ಸಕ್ಕೆ ಹಗೆಯು ನಿಜವಾಗಿಯೂ ಮೋಸಗೊಳ್ಳುವನೋ ಅಥವಾ ನಾವೇ ಮೋಸಗೊಳ್ಳುವೆವೋ? ಒಟ್ಟಿನಲ್ಲಿ ಆ ನಮ್ಮ ಮೋಸದಿಂದ ಶತ್ರುವಿಗೇ ಹೆಚ್ಚು ಹಾನಿಯಾಗುವ ಸಂಭವವಿದ್ದರೆ ಮಾತ್ರ ಹೀಗೆ ಶಾಬ್ದಿಕ ರಾಜನಿಷ್ಠೆಯ ಸೋಗು-ವೆಷ್ಟು ಮೇಲೆ ಏರಿ ಹೋಗುವದಕ್ಕಿಂತ ಮುಂಚೆ ಶಿವಾಜಿಯು ಅಫ ಝುಲ್ ಖಾನನನ್ನು ಅಂಜಿಸಿ ನಡುಗಿಸಹಚ್ಚಿದ್ದಂತೆ-ಸಮರ್ಥನೀಯವಾದೀತು-ಆದರಿಂದು ನಮ್ಮ ಮೇಲೆ ಅಂಥ ಯಾವ ಪ್ರಸಂಗವೂ ಉಂಟಾಗಿರುವದಿಲ್ಲ. ರಾಜನಿಷ್ಠೆಯ ಸಭೆ ಅಥವಾ ವ್ಹಿಕ್ಟೋರಿಯಾ ರಾಣಿಯ ಬಗ್ಗೆ ಶೋಕಪ್ರದ ರ್ಶನ ಮಾಡಲಿಕ್ಕೆ ನಾವು ಸರಕಾರದ ನಿಬಂಧನೆಗಳಿಂದೇನೂ ಹೊಣೆಗಾರರಲ್ಲ ಅಂದಮೇಲೆ ಮಾಡದಿದ್ದರೂ ನಡೆಯುವಂತಿರುವ ಇಂತಹ ರಾಷ್ಟ್ರೀಯ ಪಾಪವನ್ನು ನಾವೇಕೆ ಇಷ್ಟು ಆಸ್ಥೆಯಿಂದ ಮಾಡಬೇಕು?

ಸಾವರಕರರ ಈ ಮಾತಿನ ಪರಿಣಾಮವಾಗಿ ಆ ಮಿತ್ರನು ತನ್ನ ಆಗ್ರಹ ವನ್ನು ಬಿಟ್ಟುಬಿಟ್ಟನು.

ಬಳಿಕ ಎಡ್ವರ್ಡನ ಪಟ್ಟಾಭಿಷೇಕದ ಉತ್ಸವವೂ ಊರೂರಲ್ಲಾಯಿತು. ಆಗ ನಾಶಿಕವಲ್ಲಿ ಉತ್ಸವದ ಮೊದಲಿನ ರಾತ್ರಿಯಲ್ಲಿ

'ನಿಮ್ಮ ರಾಷ್ಟ್ರದೇವಿಯನ್ನು ಯಾವನು ದಾಸಿಯನ್ನಾಗಿ ಮಾಡಿರು ವನೋ ಆ ರಾಜನ ಉತ್ಸವವೆಂದರೇನೇ ನಿಮ್ಮ ಸ್ವಾತಂತ್ರ್ಯವು ಯಾವ ದಿವಸ ಗತಿಸಿತೋ ಆ ದಿನದ ಹುಟ್ಟು ಹಬ್ಬ! ಪರಕೀಯ ರಾಜನಿಗೆ ರಾಜನಿಷ್ಠ ರಾಗುವದೆಂದರೇನೇ ಸ್ವರಾಷ್ಟ್ರದ ದೇಶದ್ರೋಹ' ಎಂದು ದೊಡ್ಡ ದೊಡ್ಡ ಅಕ್ಷರಗಳಿಂದ ಬರೆದ ಭವ್ಯ ಭಿತ್ತಿ ಪತ್ರಕ (ವಾಲ್ ಬಿಲ್ಲು) ಗಳು ಎಲ್ಲ ಓಣಿ ಗಳ ಗೋಡೆಗಳ ಮೇಲೂ ಅಂಟಿಸಲ್ಪಟ್ಟಿದ್ದವು. ಈ ಕೃತಿಯು ಸಾವರಕರರ ಅಭಿನವ ಭಾರತದ್ದೇ ಆಗಿತ್ತೆಂದು ಬೇರೆ ಹೇಳಬೇಕಾಗಿಲ್ಲ.

೧೯೦೧ನೇ ಇಸ್ವಿಯ ಕೊನೆಗೆ ಸಾವರಕರರ ಮ್ಯಾಟ್ರಿಕ್ ಪರೀಕ್ಷೆ ಯಿದ್ದಿತು. ಪರೀಕ್ಷೆಯ ಮೊದಲು ಅವರು ತಮ್ಮ ಪದ್ಧತಿಯಂತೆ ಆ ಪರೀ ಕ್ಷೆಯ ಅಭ್ಯಾಸವನ್ನು ಪರಿಶ್ರಮ ಪೂರ್ವಕವಾಗಿ ಮಾಡುಹತ್ತಿದರು. ಹಾಗೆ ಓದು ಓದುತ್ತಿರುವಾಗಲೇ ಪರೀಕ್ಷೆ ಪಾಸಾದ ಬಳಿಕ ಮುಂದೇನು ಮಾಡ ಬೇಕೆಂಬ ಆಲೋಚನೆಯೂ ನಡೆದಿರುತ್ತಿತ್ತು. ತನ್ನ ಪರೀಕ್ಷೆ ಪಾಸಾಗುವ ಬಗ್ಗೆ ಅವನಿಗೆ ಖಾತ್ರಿಯಿತ್ತು. ಅದರಿಂದ ಮುಂದೆ ಎಲ್ಲಿಯಾದರೂ ನೌಕರಿ ಮಾಡ

ಬೇಕೋ-ಕಾಲೇಜಿಗೆ ಸೇರಬೇಕೋ ಎಂಬ ವಿಚಾರಗಳಲ್ಲಿ, ಮನೆತನದ ಅಡಚಣಿಯು ಸಲುವಾಗಿ ಮುಂದೆ ಕಲಿಯುವದನ್ನು ಬಿಟ್ಟು, ನೌಕರಿ ಮಾಡುವದೇ ವಿಹಿತವೆಂದು ನಿರ್ಧರಿಸಿದನು. ಅದಕ್ಕೆಂದೇ ಆತನು ಮೊದಲಿನ ವರ್ಷವೇ ಆಗಿನ ಫಾಯನಲ್ ಪರೀಕ್ಷೆಯನ್ನು ಕೂಡ ಪಾಸು ಮಾಡಿದ್ದನು; ಆದರೆ ಗಣೇಶಪಂತನು ತನಗೆ ಎಷ್ಟು ಕಷ್ಟವಾದರೂ ತಮ್ಮ ಮನೆತನಕ್ಕೆ ಭೂಷಣಪ್ರದನಾದ ತನ್ನ ತಮ್ಮ ವಿನಾಯಕನು ಉಚ್ಚ ಶಿಕ್ಷಣ ಪಡೆಯಲಿಕ್ಕೆ ಶಕ್ತಿ ಮೀರಿ ನೆರವಾದನು.

ಮ್ಯಾಟ್ರಿಕ್ ಪರೀಕ್ಷೆಯು ಇನ್ನು ಕೆಲವು ತಿಂಗಳೇ ಉಳಿದಿರುವಾಗ ಭಗೂರ ಬಳಿಯ ಕೋಠೂರಲ್ಲಿ ವಾಸಿಸುತ್ತಿದ್ದ ಆತನ ಮಾವ ಮತ್ತು ತ್ರ್ಯಂಬಕದಲ್ಲಿರುತ್ತಿದ್ದ ಗಣೇಶಪಂತನ ಮಾವ ಕೂಡಿ ವಿನಾಯಕರಾಯನ ವಿವಾಹವನ್ನು ನಿರ್ಧರಿಸಿಬಿಟ್ಟರು. ಈಗಿನಂತೆ ವಧು-ವರರ ಒಪ್ಪಿಗೆಗಳನ್ನು ಆಗ ತಕ್ಕೊಳ್ಳಬೇಕಿರಲಿಲ್ಲ. ಉಭಯತರ ಹಿರಿಯರು ನೋಡಿ ವಿವಾಹ ನಿರ್ಧರಿಸುವ ಪರಿಪಾಠವು ಆಗ ಪ್ರಚಲಿತವಾಗಿತ್ತು. ಈಗಿನಂತೆ ಆಗ ವಧು-ವರರು ಪ್ರೌಢರಾಗಿರುತ್ತಿರಲಿಲ್ಲ. ಲಗ್ನಕ್ಕೆ ಮುಂಚೆ ವರನು ವಧುವನ್ನು ನೋಡಲೇಬೇಕು, ವಧುವು ವರನನ್ನು ನಿರೀಕ್ಷಿಸಲೇ ಬೇಕು; ವರನ ಮನಸ್ಸಿಗೆ ವಧು ಒಪ್ಪಬೇಕು, ವಧುವಿನ ಹವ್ಯಾಸದಂತೆ ವರನಿರಬೇಕು, ಎಂಬ ನಿರ್ಬಂಧವು ಆಗ ಇರಲಿಲ್ಲ. ಅದರಿಂದ ವಿನಾಯಕನ ಮನೆಯಲ್ಲಿ ಅಂಥ ಪ್ರೌಢರಾರೂ ಇರದ್ದರಿಂದ, ಆತನ ಸೋದರ ಮಾವನೂ ಗಣೇಶಪಂತನ ಹೆಂಡತಿಯ ತಂದೆಯೂ ಕೂಡಿ ವಿನಾಯಕನ ಲಗ್ನವನ್ನು ಗೊತ್ತು ಮಾಡಿಬಿಟ್ಟರು. ಆಗ ವಿನಾಯಕನು ೧೮ ವರ್ಷದವನಿದ್ದು. ಆಗಿನ ಕಾಲಮಾನದಂತೆ ಆತನ ಲಗ್ನದ ವಯಸ್ಸು ಮೀರಹತ್ತಿತ್ತು. ಅದರಿಂದಲೇ ಆತನ ಪರೀಕ್ಷೆ ಪಾಸಾಗುವದನ್ನು ಕೂಡ ನಿರೀಕ್ಷಿಸದೆ ಅದೇ ವರ್ಷದ ಮಾಘ ಮಾಸದಲ್ಲಿ ಆ ವಿವಾಹವನ್ನು ಮಾಡಿ ಬಿಟ್ಟರು.

ಕ್ರಾಂತಿಕಾರಕರು ಲಗ್ನವಾಗಬೇಕೋ-ಬಾರದೋ? ಎಂಬದರ ಸಮಾಧಾನಾರ್ಥವಾಗಿ, ಸಾವರಕರರು ಆಗ ಅನುಸರಿಸಿದ ಕೋಟಿಕ್ರಮವೆಂದರೆ, ಸ್ವದೇಶಕ್ಕಾಗಿ ಲೋಕ ಹಿತಕ್ಕಾಗಿ, ಪ್ರಾಣಾರ್ಪಣ ಮಾಡುವ ಪ್ರಾಮಾಣಿಕ ಪ್ರತಿಜ್ಞೆಗೆಯ್ಯುವ ಮತ್ತು ಅದನ್ನು ಪೂರ್ತಿಗೊಳಿಸುವ ಎದೆಯುಳ್ಳ ಕ್ರಾಂತಿಕಾರಕನು ಬಹುಶಃ ಸಮಾಜದೊಳಗಿನ ಉಚ್ಚ ಮನೋವೃತ್ತಿಯ ಕಮಾ

ವೀರನೇ ಇರತಕ್ಕವನು. ಇಂಥ ಉಚ್ಚ ಬೀಜಗಳ ಸಂತತಿಯು ಬೆಳೆಯುವದು ಸಮಾಜೋನ್ನತಿಗೆ ಅತ್ಯಂತ ಅವಶ್ಯಕವು; ಆದರೆ ಮಾನವನ ದುರ್ದೈವದಿಂದ ಇಂಥ ಹುತಾತ್ಮರೇ ಪ್ರತಿಯೊಂದು ಅನ್ಯಾಯದ ಸತ್ತೆಗೆ ಮೊಟ್ಟ ಮೊದಲು ಬಲಿ ಬೀಳಬೇಕಾಗುತ್ತದೆ. ಆದರಿಂದ ಆ ಹೀನ ಸಮಾಜದಲ್ಲಿ, ಆ ಹೀನ ಜಾತಿಯಲ್ಲಿ ಅಥವಾ ದೇಶದಲ್ಲಿ ಅಂಥ ವೀರಾತ್ಮನ ಜೀವನವು ಸೆರೆಮನೆಯಲ್ಲಿ ಇಲ್ಲವೆ ಗಲ್ಲಿನಲ್ಲಿ ಅಥವಾ ರಣಾಂಗಣದಲ್ಲಿ ನಿಸ್ಸಂತಾನದಲ್ಲಿ ಲೋಪವಾಗಿ ಬಿಡುತ್ತದೆ. ದೇಶಭಕ್ತರ ಸಂತಾನಗಳನ್ನುಂಟು ಮಾಡುವ ವಂಶಗಳು ಲುಪ್ತವಾಗುತ್ತವೆ; ಮತ್ತು ಯಾವನು ಹೆಚ್ಚು ಕೃತಘ್ನನೂ, ಸ್ವಾರ್ಥಿಯೂ, ಲೋಕ ಹಿತ ಪರಾಙ್ಮುಖನೂ, ಹೇಡಿಯೂ, ದೇಶದ್ರೋಹಿಯೂ, ಪಿಶುನನೂ ಇರುವನೋ ಆತನೇ ಬದುಕುವನು,-ಬಾಳುವನು; ಮತ್ತು ಅಂಥವರ ಸಂತತಿ ಮಾತ್ರ ಅಷ್ಟೇ ಹೆಚ್ಚು ಪಟ್ಟಿನಿಂದ ಸಮಾಜದಲ್ಲಿ ವೃದ್ಧಿಂಗತವಾಗುತ್ತದೆ. ಯಾವ ಒಕ್ಕಲಿಗ ಒಳ್ಳೇ ಗೋದಿಯನ್ನು ಆರಿಸಿ ಆರಿಸಿ ಬಿಸುಟಬಿಡುವನೋ ಹಾಗು ಹುಳಿತ ಮತ್ತು ರೋಗಿಷ್ಟ ಕಾಳುಗಳನ್ನು ಬಿತ್ತುತ್ತಿರುವನೊ ಅಂಥ ಪೈರಿನ ಬೆಳೆಯಂತೆಯೇ ಆ ರಾಷ್ಟ್ರದ ಹಾಗು ಸಮಾಜದ ಬೆಳೆಯು ಕ್ಷೀಣ ಹಾಗು ರುಚಿಯಿಲ್ಲದ್ದಾಗುತ್ತದೆ. ನಿಜವಾಗಿ ನೋಡಿದರೆ ಅಂಥ ವೀರಾತ್ಮರು ತಕ್ಕ ಸಮಯದಲ್ಲಿ ಉಗ್ನವಾಗಿ ಶಕ್ಯವಾದಷ್ಟು ಉತ್ತಮ ಸಂತತಿಯನ್ನು ಹುಟ್ಟಿಸುವದು ಅವರುಗಳ ರಾಷ್ಟ್ರೀಯ ಕರ್ತವ್ಯವೇ ಆಗಿದೆ- ಲಗ್ನವಾದರೆ ಹೆಂಡತಿಯ ಇಲ್ಲವೆ ಸಂತತಿಯ ಮೋಹದಿಂದ ಆ ವೀರ ಮಣಿಯು ತನ್ನ ಪ್ರತಿಜ್ಞೆಯಿಂದ ಪತಿತನಾದಾನೇ? ಆದರೆ ಅದು ಹಾಗೇಕಾಗಬೇಕು? ಯಾವಾತನ ಮನೋಬಲವು ಸ್ವಂತದ ತಂದೆಯ, ಬಂಧುವಿನ, ಸ್ವಂತದ ಪ್ರಾಣದ ಮೋಹವನ್ನು ಕೂಡ ತ್ಯಜಿಸುವಷ್ಟು ಪ್ರಖರವಿರುವದೋ ಆತನಿಗೆ ಕೇವಲ ತನ್ನ ಹೆಂಡತಿಯ ಹಾಗು ಮಕ್ಕಳ ಮೋಹವನ್ನು ಕಡಿಯಲಿಕ್ಕೆ ಕಠಿಣವೆನಿಸಲಿಕ್ಕಿಲ್ಲ. ಆತನು ಹೆಂಡತಿಯ ಮೋಹದಿಂದ ಮತ್ತು ಮಾಯೆಯಿಂದ ಸ್ವತಃ ಕರ್ತವ್ಯಚ್ಯುತನಾಗುವ ಬದಲು, ತನ್ನ ಹೆಂಡತಿ-ಮಕ್ಕಳನ್ನು ಸ್ವಂತದ ಪ್ರೇಮದಿಂದ ಹಾಗು ಪ್ರಭಾವದಿಂದ ತನ್ನಂತೆಯೇ ವೀರಾತ್ಮರನ್ನಾಗಿ ಮಾಡಿಬಿಟ್ಟಾನು. ತನ್ನ ಸಂತತಿಯ ಓಘದಿಂದ ಆ ವೀರತ್ವದ ಓಘದ ಅಖಂಡಿತ ಪ್ರವಾಹವನ್ನು ಉಳಿಸುವನು, ದೇಶ ಭಕ್ತರ ಪರಂಪರೆಯನ್ನು ಉತ್ಪನ್ನಗೊಳಿಸುವನು. ಆ ವೀರನು ರಣಾಂಗಣದಲ್ಲಿ ಮಡಿದರೆ, ಆತನ ಹೆಂಡಿರು

ಮಕ್ಕಳು ಅನಾಥರಾದಾರು! ಆದರಾಗಲಿ! ಯಾವ ರಾಷ್ಟ್ರದ ಹಾಗು ಸಂಘದ ಹಿತಕ್ಕಾಗಿ, ಆತನು ತನ್ನ ಸ್ವಂತ ಪ್ರಾಣ ಕೂಡ ಅರ್ಪಿಸುವನೋ ಆ ರಾಷ್ಟ್ರದ ಹಿತಕ್ಕಾಗಿ ಆ ಸಂಘದೊಳಗಿನ ಬೇರೆ ವ್ಯಕ್ತಿಗಳಾದರೂ ಒಂದಿಲ್ಲೊಂದು ಬಗೆಯ ಝಳವನ್ನು ಸಹಿಸುವದು, ತ್ಯಾಗ ಮಾಡುವದು ತಕ್ಕುದೇ ಆಗಿದೆ. ಹೀಗೆ ಹೇಳುವದೂ ಮತ್ತು ಲೋಕಹಿತಕ್ಕೆಂದೇ ಆ ಭಾರವನ್ನು ಲೋಕದವರಿಂದ ಅಪೇಕ್ಷಿಸುವದೂ ಆ ವೀರನಿಗೆ ಅಧಿಕಾರವೇ ಇದೆ. ಆತನ ಪತ್ನಿ-ಪುತ್ರರು ತಮ್ಮ ನಾಥನು ಇಂಥ ಮಹಾ ಹುತಾತ್ಮನಾದನೆಂಬ ವಿಚಾರದಿಂದ ತಮ್ಮ ಆ ಅನಾಥತ್ವವನ್ನೇ ನಿಜವಾಗಿಯೂ ಸ್ಪೃಹಣೀಯವಾದ ಸನಾಥತ್ವವೆಂದು ತಿಳಕೊಳ್ಳಬೇಕು.

ಆದರೆ ಅದೂ ಆಗದಿದ್ದರೆ, ಅಂಥ ಅನಾಥ ಸ್ತ್ರೀಯರು ಸುಖ ಸಮಾಧಾನಗಳಿಂದ ಅಂಥವನೇ ಆದ ಬೇರೆ ಯಾವನೊಬ್ಬ ವೀರ ಪುರುಷನೊಂದಿಗೆ ಪುನರ್ವಿವಾಹವಾಗಿ ತಮ್ಮ ಸಂಸಾರವನ್ನು ಮತ್ತೆ ಸಾಗಿಸಬೇಕೆಂದು ಅನುಜ್ಞೆಯನ್ನು ಮನಃಪೂರ್ವಕವಾಗಿ ಕೊಡಲಿಕ್ಕೆ ಕೂಡ ಆ ಕ್ರಾಂತಿವೀರನು ಬಹುಶಃ ಉದಾರನೇ ಆಗಬಹುದು.

ಹೆಂಡತಿ ಸತ್ತಬಳಿಕ ಗಂಡಸರು ಯಾಕೆ ಮತ್ತು ಯಾವ ಕಾರಣಕ್ಕಾಗಿ ಪುನರ್ವಿವಾಹವಾಗ್ಬಯಸುವರೋ ಆಯಾ ಕಾರಣಗಳಿಗಾಗಿಯೇ ಗಂಡ ಸತ್ತಬಳಿಕ ಹೆಂಗಸರಾದರೂ ಇಷ್ಟವೆನಿಸಿದರೆ ಪುನರ್ವಿವಾಹವಾಗುವದು ಪಾಪಕೃತ್ಯವಲ್ಲ.

ಆದುದರಿಂದ ವಿವಾಹವೆಂಬುದು ನನ್ನ ಕಾಲಿಗೆ ಬೇಡಿಯಲ್ಲೆಂದು ನನ್ನ ಷ್ಟಕ್ಕೆ ನನಗೆ ಸಂಪೂರ್ಣ ಆತ್ಮವಿಶ್ವಾಸವೆನಿಸುತ್ತಿತ್ತಾದ್ದರಿಂದ ನನ್ನ ವಿವಾಹದ ಮಾರ್ಗದಲ್ಲಿ ಆ ಪ್ರಶ್ನೆಯು ತಡೆಯನ್ನುಂಟುಮಾಡುವ ಸಂಭವವಿದ್ದಿಲ್ಲೆಂದು ಸ್ವಾತಂತ್ರ್ಯವೀರ ಸಾವರಕರರು ತಮ್ಮ ವಿವಾಹ ನಿಶ್ಚಿತವಾಗುವ ಮೊದಲೇ ನಿರ್ಧರಿಸಿಕೊಂಡಿದ್ದರು; ಆದರೆ ಆ ಕಾಲದ ಅವರ ಮನೆತನದ ಕೌಟುಂಬಿಕ ಹೀನ ಪರಿಸ್ಥಿತಿಯಲ್ಲಿ ಹಾಗು ಉಚ್ಚ ಶಿಕ್ಷಣದ ಆಕಾಂಕ್ಷೆಯ ದೃಷ್ಟಿಯಿಂದ ಅಷ್ಟು ಬೇಗನೆ ಲಗ್ನವಾಗುವದಕ್ಕೆ ಅವರು ಸ್ವಂತ ಹಾಗು ಅವರ ಮನೆಯೊಳಗಿನವರಾರ ಆಲೋಚನೆಯೂ ಇರಲಿಲ್ಲ. ಅದಕ್ಕೆಂದೇ ವಿನಾಯಕರಾಯನು ಏನು ಹೇಳಿದರೂ ಮಾವನು ನಿರ್ಧರಿಸಿದ ಲಗ್ನಕ್ಕೆ ಒಪ್ಪದಾದನು. ಆದರಲ್ಲಿ ಆ ಲಗ್ನನಿಶ್ಚಯಕ್ಕೆ ಮೊದಲು ಮಾವನು ತನ್ನನ್ನು ಕೊಂಚವೂ

ವಿಚಾರಿಸದಿದ್ದದ್ದೂ ಅಸಮ್ಮತಿಯ ಒಂದು ವಿಶೇಷ ಕಾರಣವಾಗಿತ್ತು. ವಿನಾಯಕನು ಎಷ್ಟು ತಡೆಯುಂಟು ಮಾಡಿದರೂ ಆತನ ಸೋದರ ಮಾವನ ಆಗ್ರಹವು ಕಡಿಮೆಯಾಗಲಿಲ್ಲ.; ಯಾಕಂದರೆ ಯಾರ ಮಗಳು ಸಾವರಕರರಿಗೆ ವಧುವೆಂದು ಗೊತ್ತು ಮಾಡಲಾಗಿತ್ತೋ ಆ ಶ್ರೀಮಾನ್ ಭಾವೂರಾವ ಚಿಪಳೂಣಕರರಿಗೂ ಸೋದರ ಮಾವನಿಗೂ ಒಳ್ಳೇ ಸ್ನೇಹ. ಅಂಥ ಪ್ರಭಾವಶಾಲೀ ಮನೆತನದೊಡನೆ ತಮ್ಮ ಸ್ನೇಹಸಂಬಂಧವಷ್ಟೇ ಅಲ್ಲ, ಇಷ್ಟು ನಿಕಟದ ಶರೀರಸಂಬಂಧವೂ ಉಂಟಾಗುವ ಅಲಭ್ಯ ಯೋಗ್ಯವು ಬೇರೆ ಯಾವ ಅಡಚಣಿ-ವಧುವು ಸಾಮಾನ್ಯಳು-ಇದ್ದರೂ ಅದನ್ನು ನಿರಾಕರಿಸಿ ಸಾಧಿಸಿಕೊಳ್ಳಬೇಕೆಂದಿತ್ತು ಮಾವನ ಇಚ್ಛೆ.

ವಿನಾಯಕನ ಪರೀಕ್ಷೆ ಪಾಸಾದ ಬಳಿಕ ಆತನಂತಹ ಕುಶಾಗ್ರಬುದ್ಧಿಯುವನಿಗೆ ಇದಕ್ಕಿಂತ ಉತ್ತಮರ ಮನೆಯ ಹೆಣ್ಣು ಬರಬಹುದಾದ್ದರಿಂದ ಪರೀಕ್ಷೆಯ ಪರಿಣಾಮ ತಿಳಿಯುವ ವರೆಗಾದರೂ ತಡೆಯಬೇಕೆಂದೂ, ಬೇರೆ ಕನ್ಯೆ ಬೇಡವಾದರೆ ಇದೇ ಕನ್ಯೆಯೊಡನೆಯೇ ಆ ಮೇಲೆ ಮಾಡಬಹುದೆಂದೂ ಗಣೇಶಪಂತನು ಹೇಳಿದನು; ಆದರೆ ವಿನಾಯಕರಾಯನ ಭಾವೀ ಮಾವಂದಿರಾದ ಚಿಪಳೂಣಕರ ಭಾವೂರಾಯರು ಅತ್ಯಾಗ್ರಹದಿಂದ 'ನನ್ನ ಮಗಳೊಡನೆಯೇ ವಿನಾಯಕನು ಲಗ್ನವಾಗಬೇಕು; ಮತ್ತು ಆ ಕಾರ್ಯವಾದರೂ ಈಗಲೇ ಜರುಗಬೇಕು.' ಎಂದು ಅಂದರು; ಯಾಕಂದರೆ ನನ್ನ ಮಗಳು ದೊಡ್ಡವಳಾಗಿರುವಳು.

ಚಿಪಳೂಣಕರ ಭಾವೂರಾಯರು ಸಾವರಕರರಿಗೇನೂ ಅಪರಿಚಿತರಾಗಿದ್ದಿಲ್ಲ; ಇಷ್ಟೇ ಅಲ್ಲ, ಚಿಕ್ಕಂದಿನಿಂದಲೂ ಪ್ರೀತಿಯ ಆಪ್ತರೇ ಆಗಿದ್ದರು; ಯಾಕಂದರೆ ಸಾವರಕರರ ಸೋದರ ಮಾವನಾದ ಕೋಠೂರ ಬರ್ವೇಯವರ ಮನೆಯ ಹೆಣ್ಣೇ ಭಾವೂರಾಯರಿಗೆ ಕೊಟ್ಟಿತ್ತು. ಈ ಬಗೆಯ ಆಪ್ತತ್ವವಿದ್ದುದರಿಂದ ವಿನಾಯಕನು ಭಾವೂರಾಯರನ್ನು ಕುರಿತು:—ನನ್ನ ಮನಸ್ಸಿನಲ್ಲಿ ಉಚ್ಚ ಶಿಕ್ಷಣ ಪಡೆಯುವದಿದೆ. ನನ್ನ ಮನೆಯಿಂದ ನನ್ನ ಆ ಶಿಕ್ಷಣಕ್ಕೆ ಏನೂ ಸಹಾಯ ದೊರೆಯುವಂತಿಲ್ಲ. ನನಗೆ ಹೆಣ್ಣು ಕೊಡುವವರು ನನ್ನ ಉಚ್ಚ ಶಿಕ್ಷಣದ ಖರ್ಚಿನ ಭಾರ ಹೊತ್ತುಕೊಳ್ಳುತ್ತಿದ್ದರೆ ಮಾತ್ರ ನಾನೀಗ ಲಗ್ನವಾಗುವೆನು; ಇಲ್ಲದಿದ್ದರೆ ಇಲ್ಲ, ಎಂದು ಸ್ಪಷ್ಟವಾಗಿ ತಿಳಿಸಲು, ಅದಕ್ಕೆ ಭಾವೂರಾಯರು ನಕ್ಕು ಹೇಳಿದರೇನಂದರೆ:-'ನಿಮ್ಮ ಓದಿನ ಚಿಂತೆಯೇಕೆ!

ನನ್ನ ಮಗನ ಶಿಕ್ಷಣಕ್ಕೆ ನೆರವಾದೇನೆಂದು ನಾನು ಹೆರವರಿಗೆ ಹೇಗೆ ವಚನ ಕೊಡಬೇಕಾಗಿಲ್ಲವೋ ಅದರಂತೆಯೇ ಎಂದು ತಿಳಿಯಿರಿ. ಅದು ನನ್ನ ಕರ್ತವ್ಯವೇ ಆಗಿದೆ.'

ಚಿಪಳೂಣಕರ ಭಾವೂರಾಯರ ಮನೆತನವು ಸುಸಂಪನ್ನವಾದದ್ದು. ಅವರ ಎರಡು-ಮೂರು ಪೀಳಿಗೆಗಳು ಜವ್ಹಾರ ಸಂಸ್ಥಾನದಲ್ಲಿ ಉಚ್ಚಪದದಲ್ಲಿದ್ದವು. ಸ್ವಂತ ಭಾವೂರಾಯನು ಒಳ್ಳೇ ಕರ್ತೃತ್ವಶಾಲಿಯಾದ ಪುರುಷನು. ಸಾವರಕರ ವಿನಾಯಕರಾಯರ ಹೆಂಡತಿಯ ಹೆಸರು ಯಮುನಾಬಾಯಿ ಎಂದಿದೆ.

ಆ ವಿವಾಹದಿಂದ ಮುಂದೆಂದೂ ಪಶ್ಚಾತ್ತಾಪಪಡುವ ಪ್ರಸಂಗವುಂಟಾಗದಂತೆ ಶುಭಪ್ರದ ಮತ್ತು ಸುಖಪ್ರದವದಾಯಿತು. ಆ ವಿವಾಹ ಸಂಬಂಧದಿಂದ ಶಿಕ್ಷಣದಲ್ಲಿ ಹಾಗು ದೊಡ್ಡಿಸ್ಥಿಕೆಯಲ್ಲಿ ಅತ್ಯುಚ್ಚ ಪದವೇರಲಿಕ್ಕೂ ತಾವು ಹೆಚ್ಚು ಸಮರ್ಥನಾದೆವೆಂದು ಸಾವರಕರರು ಅಂದಿರುವರು. ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ ತಮಗೆ ಆ ವಿವಾಹಸಂಬಂಧದಿಂದ ಅಡ್ಡಿಯಂತೂ ಎಂದೂ ಆಗಲಿಲ್ಲ. ಇನ್ನು ವೈಯಕ್ತಿಕ ಸುಖ? ಅದು ತಮ್ಮ ಜೀವನದಲ್ಲಿ ಯಾವಾಗಲೂ ದುಯ್ಯಮ್ಮ (ಸಾಮಾನ್ಯ)ವೇ ಆಗಿದೆ, ಎಂದು ಸಾವರಕರರ ಅಭಿಪ್ರಾಯ.

---

## ೭

ಸಾವರಕರರು ಇಲ್ಲಿಯ ಉಚ್ಚ ಶಿಕ್ಷಣ ಹೊಂದಿದರಷ್ಟೇ ಅಲ್ಲ; ಇಂಗ್ಲೆಂಡಿಗೆ ಹೋಗಿ ಬ್ಯಾರಿಷ್ಟರ ಪರೀಕ್ಷೆ ಕೂಡ ಪಾಸಾದರು; ಆದರೆ ಇದೆಲ್ಲ ಅವರ ಮುಖ್ಯ ಧ್ಯೇಯವಲ್ಲ. ಅವರ ಧ್ಯೇಯವು ಸ್ವದೇಶವನ್ನು ಸ್ವತಂತ್ರವಾಗಿಸುವದು. ಅದಕ್ಕಾಗಿ ಅವರು ತಮ್ಮ ಅಭಿನವ ಭಾರತದ ಶಾಖೆಗಳನ್ನು ಹಿಂದುಸ್ಥಾನದಲ್ಲಿ ಬಹುತರ ಎಲ್ಲ ಭಾಗಗಳಲ್ಲಿ ಸ್ಥಾಪಿಸಿದರು. ಪಂಜಾಬ, ಸಂಯುಕ್ತ ಪ್ರಾಂತ, ಬಂಗಾಲ ಪ್ರಾಂತಗಳಲ್ಲಿ ಅವರ ಅನೇಕ ಮಂದಿ ಅನುಯಾಯಿಗಳು ಅಭಿನವ ಭಾರತದ ಧ್ಯೇಯದಂತೆ ಕೆಲಸ ಮಾಡಹತ್ತಿದರು. ಸಾವರಕರರ ಅನೇಕ ಜನ ಅನುಯಾಯಿಗಳು ಸರಕಾರದ ದೊಡ್ಡ ದೊಡ್ಡ ಕಾರ್ಯಾಲಯಗಳಲ್ಲೂ ಸಂಸ್ಥಾನಿಕರ ದರ್ಬಾರುಗಳಲ್ಲೂ ಗುಪ್ತ ರೀತಿಯಿಂದ ಪ್ರವೇಶಿಸಿ,

ಅಲ್ಲಿಯ ಗುಪ್ತ ಸಂಗತಿಗಳನ್ನು ಅಭಿನವ ಭಾರತದ ಮುಖ್ಯ ಮಂಡಲಕ್ಕೆ ತಿಳಿಸುತ್ತಲೂ, ತಾವಿದ್ದ ಪ್ರದೇಶಗಳಲ್ಲಿ ಸ್ವದೇಶ ಸ್ವಾತಂತ್ರ್ಯದ ಚಳವಳಿಯನ್ನು ಗುಪ್ತವಾಗಿ ಹಬ್ಬುತ್ತಲೂ ನಡೆದಿದ್ದರು. ಅಂಥ ಒಬ್ಬ ಅನುಯಾಯಿಯು ಬಡೋದೆಯ ಸಯಾಜಿರಾಯ ಮಹಾರಾಜರಲ್ಲಿ ಹಡಪದವನಾಗಿದ್ದನಂತೆ!

ಸಾವರಕರರು ವಿಲಾಯತಿಯಲ್ಲಿ ಅಭ್ಯಾಸ ಮಾಡುತ್ತಿರುವಾಗ ಪ್ಯಾರೀಸದಲ್ಲಿದ್ದ ಮ್ಯಾಡೆಮ್ಮ ಕಾಮಾಬಾಯಿ ಎಂಬವಳು ಅವರ ಅಭಿನವ ಭಾರತ ಸಂಘದ ಸದಸ್ಯಳಾದಳು. ಆಕೆಯು ಸಾವರಕರರಿಗೆ ಸಲಹೆ, ಹಣ ಮುಂತಾದ ಸರ್ವ ಬಾಬಿನಿಂದಲೂ ಸಂತತವಾಗಿ ನೆರವಾಗುತ್ತಿದ್ದಳು. ಸಾವರಕರರು ಬ್ಯಾರಿಷ್ಟರ ತರೀಕ್ಷೆಗೆ ಓದುವಾಗಲೇ ಇಟಲಿಯ ಸ್ವಾತಂತ್ರ್ಯವಿಧಾತ ಜೋಸೆಫ್ ಮ್ಯಾಝಿನಿಯ ಗುಪ್ತ ಸಮಿತಿಯ ಸಕಲ ಸೂತ್ರಗಳನ್ನೂ ತಿಳಿದುಕೊಂಡು, ತಮ್ಮ ಅಭಿನವ ಭಾರತ ಸಂಘಕ್ಕೆ ಅದೇ ಬಗೆಯ ಚಾಲನೆಯನ್ನು ಕೊಟ್ಟರು.

ಸಾವರಕರರು ಲಂಡನ್ನಿನಲ್ಲಿದ್ದಾಗಲೇ ಜೋಸೆಫ್ ಮ್ಯಾಝಿನಿ ಪುಸ್ತಕವನ್ನು ಮರಾಠೀಭಾಷೆಗೆ ಪರಿವರ್ತಿಸಿದರು; ಹಾಗು ಅದನ್ನು ಛಾಪಿಸಿಕೊಡಲಿಕೆ ಹಿಂದುಸ್ತಾನದೊಳಗಿನ ಮುದ್ರಣಾಲಯದವರಿಗೆ ಬಿನ್ನೈಸಿದರು; ಆದರೆ ಆಗಿನ ಸರಕಾರದ ಪ್ರಖರ ಒತ್ತಾಯದ ಮೂಲಕ ನಮ್ಮಲ್ಲಿಯ ಯಾವ ಛಾಪಖಾನೆಯವರೂ ಅದನ್ನು ಮುದ್ರಿಸಿಕೊಡಲಿಕ್ಕೆ ಒಪ್ಪಲಿಲ್ಲ. ಅದರಿಂದ ಸಾವರಕರರು ಅದನ್ನು ವಿಲಾಯಿತಿಯಲ್ಲೇ ಛಾಪಿಸಿಕೊಂಡರು. ಅದನ್ನು ಅವರ ಅಣ್ಣ ಗಣೇಶ ದಾಮೋದರ ಸಾವರಕರ ಎಂಬವರೇ ಪ್ರಕಟಿಸಿದರು. ಆ ಮ್ಯಾಝಿನಿ ಪುಸ್ತಕದ ಪ್ರತಿಗಳನ್ನು ಕೂಡ ಪ್ರಕಟ ರೀತಿಯಿಂದ ಇಂಗ್ಲಂಡದಿಂದ ಹಿಂದುಸ್ತಾನಕ್ಕೆ ತರುವಂತಿರಲಿಲ್ಲನೆಂದೂ ಅದಕ್ಕಾಗಿ ಅವುಗಳನ್ನು ಒಂದು ಕಲ್ಲಿದ್ದಲಿಯ ಹಡಗಿನ ತಳದಲ್ಲಿಟ್ಟು ಹಿಂದುಸ್ತಾನಕ್ಕೆ ಗುಪ್ತವಾಗಿ ತಂದು, ಗುಪ್ತವಾಗಿಯೇ ಪ್ರಕಟಿಸಿದರೆಂದೂ ಆಗಿನ ಕಾಲಕ್ಕೆ ಇಲ್ಲಿ ಲೋಕವಾರ್ತೆಯಿತ್ತು.

ಸಾವರಕರರು ಬರೆದ ಆ ಮ್ಯಾಝಿನೀ ಪುಸ್ತಕವು ಅಭಿನವ ಭಾರತ ಗುಪ್ತ ಸಂಸ್ಥೆಯ ಮಾನ್ಯ ಗ್ರಂಥವಾಗಿತ್ತು. ಆ ಪುಸ್ತಕ ಓದುವದೂ ಅದರೊಳಗಿನ ವಿಶೇಷ ಪ್ರಸಂಗಗಳನ್ನು ಪಾಠ ಮಾಡುವದೂ ಆಗಿನ ಕಾಲದಲ್ಲಿ

ನಮ್ಮಲ್ಲಿಯ ತರುಣರ ದೈನಂದಿನವಾಗಿತ್ತು. ಮುಂವೆ ಆ ಗ್ರಂಥವು ಬೇಗನೆ ಸರಕಾರದಿಂದ ಜಪ್ತು ಮಾಡಲಾಯಿತು; ಹಾಗು ಅದರ ಪ್ರಕಾಶಕರಾದ ಸಾವರಕರ ಗಣೇಸಪಂತರ ಮೇಲೆ ಖಟ್ಲೆಯಾಗಿ, ಅವರಿಗೆ ಕಠಿಣ ಶಿಕ್ಷೆ ಕೂಡ ಆಯಿತು.

ಸಾವರಕರರು ಲಂಡನ್ನಿನಲ್ಲೂ ತಮ್ಮ ಅಭಿನವ ಭಾರತ ಸಂಘಟನೆಯನ್ನು ನಡೆಸಿದರು. ಒಂದು ಸಭೆಯಲ್ಲಂತೂ ಅವರು ತಮ್ಮ ಉದ್ದಿಷ್ಟಗಳನ್ನು ಸ್ಪಷ್ಟವಾಗಿ ಆಡಿ ತೋರಿಸಲಿಕ್ಕೆ ಕೂಡ ಹಿಂದು ಮುಂದೆ ನೋಡಲಿಲ್ಲ. ಅದೇ ಕಾಲಕ್ಕೆ ಹಿಂದುಸ್ತಾನದ ಹಲವೆಡೆಗಳಲ್ಲಿ ಅಭಿನವ ಭಾರತದನುಯಾಯಿಗಳು ಬಗೆಬಗೆಯ ಗೊಂದಲವನ್ನೆಬ್ಬಿಸಿದರು. ನಾಶಿಕದ ಕಲೆಕ್ಟರನ ಕೊಲೆಯೂ ಆ ಸಂಸ್ಥೆಯ ಸದಸ್ಯರ ಗುಪ್ತ ಕಟ್ಟಿನಿಂದಲೇ ಆಯಿತೆಂದು ಆಗ ಜನರಾಡಿಕೊಳ್ಳುತ್ತಿದ್ದರು.

ಸಾವರಕರರ ಅಭಿನವ ಭಾರತದ ಚಳವಳಿಯ ಮೂಲಕ ಸರಕಾರದವರು ಸಾವರಕರ ವಿನಾಯಕರಾಯರ ಮೇಲೆ ಕೇಸು ಹಾಕಿದರು. ಅವರನ್ನು ಹಿಂದುಸ್ತಾನ ಸರಕಾರದ ವಾರಂಟಿನ ಮೇರೆಗೆ ಇಂಗ್ಲಂಡಿನಿಂದ ಹಿಂದುಸ್ತಾನಕ್ಕೆ ಪ್ರತಿಬಂಧಿಸಿ ತರುತ್ತಿರುವಾಗ ಸಾವರಕರರು ಮಾರ್ಸೆಲ್ಲಿಸ್ ಬಂದರದ ಹತ್ತಿರ ಹಡಗದ ಅಧಿಕಾರಿಗಳ ಕಣ್ಣು ತಪ್ಪಿಸಿ ಹಡಗದಿಂದ ಹಾರಿ ೪-೫ ಮೈಲು ದೂರ ಆ ಸಾಗರದಲ್ಲಿ ಈಸಿ, ಫ್ರಾನ್ಸದ ದಂಡೆಯನ್ನು ಮುಟ್ಟಿ ಒಳಸೇರಿದರು. ಫ್ರಾನ್ಸವು ಸ್ವತಂತ್ರ ದೇಶವಾದ್ದರಿಂದ ಹಿಂದುಸ್ತಾನ ಸರಕಾರದ ಅಥವಾ ಬ್ರಿಟಿಶರ ವಾರಂಟಿಗೆ ಬಿಕ್ಕೆ ಹಾಕದೆ ಅವರನ್ನು ತನ್ನ ದೇಶದಲ್ಲಿ ನಿರಾತಂಕವಾಗಿ ಇಟ್ಟುಕೊಳ್ಳಬಹುದಾಗಿತ್ತು; ಮತ್ತು ಅದೇ ಉದ್ದೇಶದಿಂದಲೇ ಸಾವರಕರರು ಆ ಕಡುಸಾಹಸಕ್ಕೊಳಗಾಗಿದ್ದರು.

ಆದರೆ ಪ್ರಾನ್ಸ ದೇಶದ ಒಬ್ಬ ಗಡಿಪಾಲಕನ ಅಜ್ಞಾತೆಯ ಮೂಲಕ ಅವರು ಪುನಃ ಆ ಬ್ರಿಟಿಶ ಹಡಗಿನ ಕಪ್ತಾನನ ಕೈಸೆರೆ ಸಿಗಬೇಕಾಯಿತು. ಅವರನ್ನು ಹಿಂದುಸ್ತಾನಕ್ಕೆ ಕರೆತಂದ ಬಳಿಕ ಎಷ್ಟೋ ದಿನಗಳವರೆಗೆ ಅವರಿಗೂ ಅವರ ಅನುಯಾಯಿಗಳಲ್ಲಿಯ ಕೆಲವರಿಗೂ ಚಿತ್ರ ಹಿಂಸೆ ಕೊಟ್ಟು ಅಭಿನವ ಭಾರತದ ಗುಪ್ತ ಸಮಿತಿಯ ಕಟ್ಟಿನ ಗೂಢವನ್ನು ಹೊರಗೆಡಹಲಿಕ್ಕೆ ಸರಕಾರವು ಪ್ರಯತ್ನಿಸಿತು; ಆದರೆ ವಿಶ್ವಸನೀಯವಾದ ಯಾವ ಸಂಗತಿಯೂ ಪ್ರಕಟವಾಗದಿದ್ದರೂ ಆ ಅಭಿನವ ಭಾರತ ಸಂಸ್ಥೆಯ ಗುಪ್ತಕಟ್ಟಿಗಾಗಿ ನಮ್ಮ

ಬ್ಯಾರಿಸ್ಟರ ವಿನಾಯಕರಾವ ಸಾವರಕರರಿಗೆ ಎರಡು ಜನ್ಮಗಳ ಜೀವಾವಧಿ ಕರಿನೀರಿನ ಶಿಕ್ಷೆ ವಿಧಿಸಲಾಯಿತು. ಒಂದು ಜೀವಾವಧಿ ಕರಿನೀರಿನ ಶಿಕ್ಷೆ ಯೆಂದರೆ ಸಂಪೂರ್ಣ ಇಪ್ಪತ್ತು ವರ್ಷದ ಅವಧಿ. ಆ ಕಠಿಣ ಶಿಕ್ಷೆಯಾದ ಬಳಿಕ ಅವರನ್ನು ಅಂದಮಾನ ದ್ವಿಪಕ್ಕೆ ಕಳಿಸಿದರು. ಅಲ್ಲಿಯು ಬಹು ಭದ್ರವಾದ ಸೆರೆಮನೆಯಲ್ಲಿ ಸಾವರಕರರನ್ನು ಒಂದು ಕತ್ತಲೆ ಕೋಣೆಯಲ್ಲಿ ಎಷ್ಟೋ ದಿನ ಗಳ ವರೆಗೆ ಪ್ರತಿಬಂಧಿಸಿಟ್ಟರು.

೧೯೧೦ನೇ ಇಸ್ವಿಯೊಳಗಿನ ಈ ದೇಶದಲ್ಲಿಯ ಸ್ವಾತಂತ್ರ್ಯ ಚಳವ ಳಿಯ ಕಾಲಕ್ಕೆ ನಮ್ಮ ಹಿಂದುಸ್ಥಾನ ಸರಕಾರವು ಅತ್ಯಂತ ದ್ವೇಷಗೊಂಡು ಬಹು ರೌದ್ರರೂಪವನ್ನು ಧರಿಸಿದ್ದಿತು. ಆ ಚಳವಳಿಯ ಪ್ರವೃತ್ತಕರಿಗೆ ಆಗ ಸರಕಾರದವರು ಕೊಡುತ್ತಿದ್ದ ಕಠಿಣ ಶಿಕ್ಷೆಯು ನಮ್ಮ ದೇಶದಲ್ಲಿ ೧೯೩೦ರ ನಂತರದ ಅಸಹಕಾರೀ ಚಳವಳಿಗಾರರಿಗೆ ಹೇಗೆ ಅನುಭವವಾದೀತು? ಆಗ ಸಶ್ರಮ ಕಾರಾಗೃಹ, ಕರಿ ನೀರಿನ ಶಿಕ್ಷೆ, ಗಲ್ಲು ಇವೇ ಸಾಮಾನ್ಯ ಶಿಕ್ಷೆ ಗಳು. ಅಸಹಕಾರೀ ಚಳವಳಿಯವರಿಗೆ ಕೊಡುತ್ತಿದ್ದಂಥ ಅಲ್ಪ ಸ್ವಲ್ಪ, ದಂಡ (ಹಣ), ತಿಂಗಳೆರಡು ತಿಂಗಳುಗಳ ಸಾದಾ ಕೈದು, ಪೆರೋಲಗಳಂತಹ ಕಠಿಣ ಶಿಕ್ಷೆಗಳಾಗಿರಲಿಲ್ಲ. ಸೆರೆಯನೆಯ ಕಟ್ಟಳೆಗಳನ್ನಲ್ಲಗಳೆದದ್ದಕ್ಕಾಗಿ ಆಗ ಖೋಡಾಬೇಡಿ, ಪಟಕೆ, ಕಗ್ಗತ್ತಲೆಯ ಕೋಣೆ, ಚಕ್ಕಿ, ಎಣ್ಣೆಯ ಗಾಣ, ಕಪ್ಪಲಿ ಜಗ್ಗುವದು ಇವೆಲ್ಲ ಶಿಕ್ಷೆಗಳು ಪ್ರತಿನಿತ್ಯದವಾಗಿದ್ದವು. ಎಷ್ಟೋ ಜನ ಅಭಿನವ ಭಾರತದ ತರುಣ ಸುಶಿಕ್ಷಿತ ಕೈದಿಗಳು ಚಕ್ಕಿ, ಎಣ್ಣೆಯಗಾಣ, ಕಪ್ಪಲಿಗಳ ಶಿಕ್ಷೆಯನ್ನನುಭವಿಸುವಾಗ ರಕ್ತ ಕಾರಿ-ಕಾರಿ ಸತ್ತು ಹೋದರು! ಆಗಿನ ಕಾಲದಲ್ಲಿ ಪಟಕೆ ಹೊಡೆದಿರುವ ಚಿತ್ರಗಳನ್ನು ನೋಡಿದರೆ ಕಟುಕನಿಗೂ ಕನಿಕರವುಂಟಾಗದಿರದು. ಪಟಕೆ ಹೊಡೆಯುವಾಗ ಕೈದಿಯನ್ನು ಬತ್ತಲೆ ಗೊಳಿಸಿ ಕಂಬಕ್ಕೆ ಬಿಗಿದು ಕುಂಡಿಯ ಅಂಡುಗಳ ಮೇಲೆ ಪಟಕೆ ಹೊಡಿಸ ಹತ್ತಿದರೆಂದರೆ, ಪ್ರತಿಯೊಂದು ಪಟಕೆಯು ಪೆಟ್ಟಿನೊಡನೆ ಕೈದಿಯ ಖಂಡ- ರಕ್ತಗಳು ಹೊರಚಿಮ್ಮದಿರುತ್ತಿರಲಿಲ್ಲ!

ಅಂದಮಾನದಲ್ಲಿ ಸಾವರಕರರು ತಮ್ಮ ಶಿಕ್ಷಾವಧಿಯಲ್ಲಿ ಎಲ್ಲ ಕಠಿಣ ಶಿಕ್ಷೆಗಳನ್ನೂ ಅನುಭವಿಸಿರುತ್ತಾರೆ. ಅವುಗಳನ್ನೆಲ್ಲ ಅನುಭವಿಸುತ್ತಿರುವಾಗಲೇ ಅವರು ತಮ್ಮ ಅಭಿನವ ಭಾರತದ ಚಳವಳಿಯನ್ನು ಆ ಸೆರೆಮನೆಯಲ್ಲೂ ಮುಂದರಿಸದಿರಲಿಲ್ಲ ಆಗಿನ ಅಲ್ಲಿಯ ಜೇಲರ ಬ್ಯಾರೀ ಸಾಹೇಬನಂತಹ

ಅತ್ಯಂತ ಕ್ರೂರ, ನಿಷ್ಠುರ, ಕಾರ್ಯದಕ್ಷನೂ ಕೂಡ ಮುಂದೆ ಮುಂದೆ ಸಾವರ ಕರರ ಧ್ಯೇಯದ ವಿಷಯವಾಗಿ. ಸಹಾನುಭೂತಿ ತಾಳಿದನು.

ಸಾವರಕರರು ಜೇಲಿನಲ್ಲಿದ್ದಾಗಲೂ ತಮ್ಮ ಸಾಹಿತ್ಯ ನಿರ್ಮಿತಿಯನ್ನು ಬಿಟ್ಟವರಲ್ಲ. ಅವರು ಪ್ರತಿನಿತ್ಯ ರಾತ್ರಿ ತಾವು ರಚಿಸಿದ ಪದ್ಯಗಳನ್ನು ಜೇಲಿನ ಗೋಡೆಗಳ ಮೇಲೆ ಬರೆದಿಟ್ಟು, ಮುಂದೆ ಒಂದೆರಡು ದಿನಗಳಲ್ಲೇ ಅವುಗಳನ್ನು ಬಾಯಿಪಾಠ ಮಾಡಿಕೊಳ್ಳುತ್ತಿದ್ದರು ಅವರು ಸಾಗರಮಧ್ಯದೊಳಗಿನ ಆ ಭದ್ರವಾದ ಸೆರೆಮನೆಯಲ್ಲಿರುವಾಗ ಅಲ್ಲಿಯ ಕೈದಿಗಳಿಗೆ ಈಗಿನಂತೆ ವೃತ್ತ ಪತ್ರ, ಲೇಖನ-ವಾಚನ ಸಾಮಗ್ರಿಗಳು ಸರಕಾರದಿಂದ ದೊರೆಯುತ್ತಿರಲಿಲ್ಲ. ಆದರೂ ಅವರು ಕೆಲ ದಿನಗಳಲ್ಲೇ ತಮ್ಮ ಗುಪ್ತ ಸಮಿತಿಯ ಬಲದಿಂದ ಇಂಗ್ಲಂಡ, ಇಂಡಿಯಾ, ಅಮೇರಿಕಾ ಮೊದಲಾದ ದೇಶಗಳಲ್ಲಿಯ ವೃತ್ತಪತ್ರಗಳನ್ನೂ ಸರಕಾರ-ದರಬಾರಗಳಲ್ಲಿಯ ಅತ್ಯಂತ ಗುಪ್ತ ಸಂಗತಿಗಳನ್ನೂ ತರಿಸಿ, ತಾವು ಓದುವದಲ್ಲದೆ, ಆ ಜೇಲಿನೊಳಗೆ ಬೇರೆ ಬೇರೆ ಕಡೆಗಳಲ್ಲಿ ಸೆರೆಯಿರಿಸಲಟ್ಟಿದ್ದ ತಮ್ಮ ಅನುಯಾಯಿಗಳಿಗೂ ಅವುಗಳನ್ನು ಪೂರೈಸುತ್ತಿದ್ದರು.

ಅವರು ತಮ್ಮ ಅಂದಮಾನ ಜೇಲಿನ ವಿಷಯಕ್ಕಾಗಿ ಬರೆದ 'ಮಾಝೀ ಜನ್ಮಠೇಪ' 'ಅಂದಮಾನಚ್ಯಾ ಅಂಧೇರೀತೂನ' An echo from Andamans 'ಕಾಳೇ ಪಾಣಿ-ಕರಿನೀರು*' ಮುಂತಾದ ಪುಸ್ತಕಗಳನ್ನು ಕನ್ನಡ ವಾಚಕರು ಓದಬೇಕು. ಅಂದರೆ ಅಂದಮಾನದೊಳಗಿನ ಕೈದಿಗಳ ಸ್ಥಿತಿಗತಿಗಳು ತಿಳಿದಾವು.

ಐದನೇ ಜಾರ್ಜ ಬಾದಶಹನ ಪಟ್ಟಾಭಿಷೇಕದ ಕಾಲಕ್ಕೂ ಅಂಥವೇ ಮುಂದಿನ ಕೆಲವು ಪ್ರಸಂಗಗಳಲ್ಲೂ ಈ ದೇಶದೊಳಗಿನ ಎಷ್ಟೋ ಜನ ಗುಹ್ನೆಗಾರ ಕೈದಿಗಳೂ ಅಂದಮಾನದೊಳಗಿನ ಆಜನ್ಮ ಕರಿನೀರಿನ ಕೆಲವು ಜನರೂ ಬಿಡುಗಡೆ ಹೊಂದಿದರು. ಆದರೆ ಸ್ವಾತಂತ್ರ್ಯವೀರ ಸಾವರಕರರನ್ನು ಬಂಧಮುಕ್ತಗೊಳಿಸುವ ಅಥವಾ ಶಿಕ್ಷೆ ಕಡಿಮೆ ಮಾಡುವ ವಿಚಾರವೇ ಆಗಿನ ಸರಕಾರಕ್ಕೆ ಬರಲಿಲ್ಲ. ಸಾವರಕರರು ಸರಾಸರಿ ೧೪ ವರ್ಷ ಅಂದಮಾನದಲ್ಲಿ

---

* ಕರಿನೀರು ಈ ಕನ್ನಡ ಅತ್ಯುತ್ತಮ ಕಾದಂಬರಿಯ ೧ನೇ ಆವೃತ್ತಿಯ ಪ್ರತಿಗಳು ತೀರಿದ್ದು ೨ನೇ ಮುದ್ರಣವು ಪ್ರಾರಂಭವಾಗಿ ಪ್ರತಿಗಳು ೨-೩ ತಿಂಗಳಲ್ಲಿ ದೊರೆಯಬಹುದು. ಪುಟ ೪೦೦ ಬೆಲೆ ೫ ರೂ.

ದೊರೆಯುವ ಸ್ಥಳ:—ಬಿ. ಪಿ. ಕಾಳೆ, ಮಾದಿಹಾಳ ಧಾರವಾಡ.

ಕಠಿಣ ಶಿಕ್ಷೆ ಅನುಭವಿಸಿದ ನಂತರ ೧೯೨೪ರಲ್ಲಿ ಅಲ್ಲಿಂದ ಸಾದಾ ಶಿಕ್ಷೆಗಾಗಿ ಹಿಂದುಸ್ತಾನಕ್ಕೆ ವರ್ಗಾಯಿಸಲ್ಪಟ್ಟರು. ಆವರು ಹಿಂದುಸ್ತಾನಕ್ಕೆ ತರಲ್ಪಟ್ಟ ಮೇಲೆ ಯರವಡಾ ಜೇಲಿನಲ್ಲಿ ಕೆಲ ದಿನಗಳವರೆಗಿರಿಸಲ್ಪಟ್ಟರು. ನಂತರ ಅವರನ್ನು ರತ್ನಾಗಿರಿಯಲ್ಲಿ ಸೆರೆಮನೆಯ ಹೊರಗಿರಿಸಿ, ಆ ಊರಿಂದ ಅಲ್ಲಿಯ ಕಲೆಕ್ಟರರ ಅಪ್ಪಣೆಯ ಹೊರತು ಎಲ್ಲಿಗೂ ಹೋಗಬಾರದೆಂದೂ ಯಾವ ರಾಜಕೀಯ ಕಾರ್ಯವನ್ನೂ ಮಾಡಕೂಡದೆಂದೂ ಅವರ ಮೇಲೆ ಕಟ್ಟಳೆಗಳನ್ನು ಹಾಕಿದರು.

ಆ ಅವಧಿಯಲ್ಲಿ ಸಾವರಕರರು ತಮ್ಮ ಅತ್ಯುಪಯುಕ್ತ ಸಾಮಾಜಿಕ ಲೇಖಗಳಿಂದ ಸಮಾಜವನ್ನು ಬಡಿದೆಬ್ಬಿಸಿದರು.

★

## ೮

೧೯೩೭ರಲ್ಲಿ ಮುಂಬಯಿ ಪ್ರಾಂತದಲ್ಲಿ ಹೊಸ ಚುನಾವಣೆಗಳಾಗಿ ಕಾಂಗ್ರೆಸ್ಸ ಪಕ್ಷದ ಬಹುಮತದಿಂದ ಮಂತ್ರಿಮಂಡಳಗಳೇರ್ಪಟ್ಟವು. ಹಳೇ ಆಳಿಕೆ ಮರೆಯಾಗಿ ಹೊಸ ಆಳಿಕೆ ತಲೆದೋರುವ ಸಂಧಿಯ ಕಾಲದಲ್ಲಿ ಒಂದು ಹಂಗಾಮಿ ಕೂಪರ ಮಂತ್ರಿಮಂಡಳವು ಮುಂಬಯಿಯಲ್ಲಿ ಪ್ರಸ್ಥಾಪಿತವಾಗಿತ್ತು. ಆ ಮಂತ್ರಿಮಂಡಳದವರು ಸಾವರಕರರ ಶಿಕ್ಷೆಯನ್ನು ರದ್ದುಪಡಿಸಿ, ಅವರನ್ನು ಮುಕ್ತಗೊಳಿಸಿದರು. ಅಂದಿನಿಂದ ಅವರು ಮತ್ತೆ ಪ್ರಕಟವಾಗಿ ರಾಜರಂಗದಲ್ಲಿಳಿದರು.

ಕಾಂಗ್ರೆಸ್ಸಪಕ್ಷದ ಪರವಾಗಿ ಮ. ಗಾಂಧೀಜಿಯವರು ಸಾವರಕರರನ್ನು ಆ ಪಕ್ಷಕ್ಕೆ ಕೂಡಿಸಿಕೊಳ್ಳಬೇಕೆಂದು ಆಗ ಪ್ರಯತ್ನಿಸಿದ್ದುಂಟು; ಆದರೆ ಮ. ಗಾಂಧಿಯವರ ಪ್ರಯತ್ನಕ್ಕೆ ಯಶ ದೊರೆಯದ ಕಾರಣವೇನಂದರೆ, ಸಾವರಕರರ ಕೆಲವು ಸಾಮಾನ್ಯ ಸಲಹೆಗಳು ಕಾಂಗ್ರೆಸ್ಸ ಮುಂದಾಳುಗಳಿಗೆ ಸಮ್ಮತವಾಗಲಿಲ್ಲ. ಆದರಿಂದ ತಮ್ಮ ಮತಗಳು ಹಿಂದು ಮಹಾಸಭೆಯ ಪಕ್ಷಕ್ಕೇ ಬಹುಮಟ್ಟಿಗೆ ಹೊಂದುವವೆಂದು ಅವರು ಆ ಪಕ್ಷಕ್ಕೇ ಕೂಡಿಕೊಂಡರು. ಅಂದಿನಿಂದ ಇದುವರೆಗೂ ಆ ಪಕ್ಷದ ಧುರೀಣರಾಗಿರುತ್ತಾರೆ. ೨-೩ ಸಾರೆ ಅವರು ಅಖಿಲ ಹಿಂದುಮಹಾಸಭೆಯ ಅಧ್ಯಕ್ಷರಾಗಿದ್ದರು.

ಸಾವರಕರರ ಕಳೆದ ೧೨ ವರ್ಷಗಳ ಚರಿತ್ರವು ನಮ್ಮ ಕನ್ನಡ ವಾಚಕರಿಗೆ ಚನ್ನಾಗಿ ಗೊತ್ತಿರುವದು. ಅವರ ರಾಜಕೀಯ, ಸಾಮಾಜಿಕ ಮತಗಳೂ; ಮರಾಠೀ ಸಾಹಿತ್ಯಕ್ಕೆ ಅವರಿಂದಾದ ಮಹತ್ತರ ಸಹಾಯವೂ, ಲಿಪಿ ಸುಧಾರಣೆ, ಭಾಷಾ ಸುಧಾರಣೆ, ಇಂಗ್ಲಿಷ ಹಾಗು ಉರ್ದೂ ಶಬ್ದಗಳಿಗೆ ಪ್ರತಿ ಮರಾಠೀ ಹೊಸ ಶಬ್ದಗಳ ನಿರ್ಮಾಣ ಇವುಗಳೆಲ್ಲ ನಮ್ಮ ದೇಶದವರಿಗೆ ಅತ್ಯಂತ ಉಪಕಾರಕಗಳಾಗಿವೆ ಎಂಬದನ್ನು ಬೇರೆ ಹೇಳಬೇಕಾಗಿಲ್ಲ.

ಇಂಥ ಸದ್ಗುಣಶಾಲಿಯಾದ ಮಹಾಪುರುಷನ ಮೇಲೆ ಮ. ಗಾಂಧೀ ವಧೆಯ ದೋಷಾರೋಪವು ಇವರಿಗಾಗದ ಜನರಿಂದ ಹೊರಿಸಲ್ಪಟ್ಟು, ಕಳೆದ ಇಡೀ ವರ್ಷ ಆ ಖಟ್ಲೆಯು ಸ್ಪೆಶಲ್ ನ್ಯಾಯಾಧೀಶರೆದುರು ನಡೆದು, ಅದರೊಳಗಿಂದ ಇವರು ನಿಷ್ಕಲಂಕ ಹಾಗು ನಿರ್ದೋಷಿಗಳೆಂದು ಮುಕ್ತರಾಗಿರುತ್ತಾರೆ. ಇವರು ಈಗ ೬೭ ವರ್ಷ ವಯಸ್ಸಿನವರಾಗಿದ್ದರೂ ಇವರಿಂದ ನಮ್ಮ ದೇಶಕ್ಕೆ ಹಲವು ಬಗೆಯ ಸಹಾಯ-ಸಲಹೆಗಳು ಸಹಜವಾಗಿ ದೊರೆಯಬಹುದಾಗಿವೆ. ಅವುಗಳನ್ನು ಪಡೆದು, ನಮ್ಮ ಹಿಂದೂ ದೇಶವು ಸಕಲಾಭಿವೃದ್ಧಿಯನ್ನು ಬೇಗನೆ ಪಡೆಯಲೆಂದು ಹಾರೈಸಿ, ಈ ಮಹಾನುಭಾವರ ಅಲ್ಪ ಪರಿಚಯವನ್ನು ಸದ್ಯಕ್ಕೆ ಇಲ್ಲಿಗೇ ಮುಗಿಸುವೆವು.

ಸ್ವಾತಂತ್ರ್ಯಲಕ್ಷ್ಮೀಕೀ ಜಯ!



# ಹೊಸ ಪುಸ್ತಕಗಳು.

★

## ೨ ಜೀವನ ವಿಕಾಸ.

(ಆತ್ಮವೃತ್ತವು ಸಾಮಾಜಿಕ ಪುಸ್ತಕ) ಬೆಲೆ ೧-೮-೦

## ವಿಚಿತ್ರ ಚರಿ

(ಪತ್ತೆದಾರಿ) ೧-೪-೦

## ಸ್ಕೂಲ ಮಿಸ್ಟ್ರೆಸ್

(ಸಾಮಾಜಿಕ) ೩-೦-೦

## ಪರಿವರ್ತನ

(ಸಾಮಾಜಿಕ) ೦-೧೨-೦

## ಪ್ಲಾಸೀ ಕದನ

(ಐತಿಹಾಸಿಕ) ೦-೬-೦

## ವಿಲಕ್ಷಣ ಪತ್ನಿಸೇವೆ

(ಸಾಮಾಜಿಕ) ೦-೫-೦

ಇವಲ್ಲದೆ ಅನೇಕ ಐತಿಹಾಸಿಕ, ಸಾಮಾಜಿಕ, ಪತ್ತೆದಾರಿ, ಪೌರಾಣಿಕ ಕತೆ ಕಾದಂಬರಿಗಳೂ ಚರಿತ್ರ, ನಾಟಕ, ಧಾರ್ಮಿಕ, ವೈದಿಕ ಪುಸ್ತಕಗಳೂ ದೊರೆಯುವವು. ಕ್ರಯಪಟ್ಟಿಗೆ ೨ ಆಣೆ

೨ ರೂ. ಪ್ರವೇಶ ಫೀ ಕೊಟ್ಟು ಖಾಯಂ ಗ್ರಾಹಕರಾದವರಿಗೆ ಇವುಗಳು ರಿಯಾಯತಿ ಬೆಲೆಗೆ ದೊರೆಯುವವು.

**ಬಿ. ಪಿ. ಕಾಳೆ ಮುದಿಹಾಳ-ಧಾರವಾಡ.**